MYSORE APPROPRIATION (No. 3) BILL, 1965.

Motion to consider.

Sri B. D. JATTI.—Sir, I beg to move:

"That the Mysore Appropriation (No. 3) Bill, 1965 be taken into consideration."

Mr. SPEAKER.—Motion moved:

"That the Mysore Appropriation (No. 3) Bill, 1965 be taken into consideration."

HON'BLE MEMBERS.—We have not received copies of the Bill.

Sri B. D. JATTI.—There was detailed discussion on Supplementary Estimates and I have replied on that day in detail and I have nothing to add today.

Mr. SPEAKER.—Further consideration will be taken up tomorrow. It appears only 4 copies are here and the members have not been given copies. I cannot ask the Members to take up this Bill. It will be taken up tomorrow.

We will continue discussion on Demand for Grants.

BUDGET ESTIMATES FOR 1965-66—DEMANDS FOR GRANTS.

DEMAND NO.—26. LABOUR AND EMPLOYMENT (*Contd.*)

Sri S. RAJAGOPAL (Kolar Gold Fields).—Mr. Speaker, Sir, Yesterday I made some observations. The last point I was dealing with when the House rose for the day was regarding the working of Registrar of Trade Unions in our State. I want to bring one example here. It particularly refers to the KGF Champion Reef Mines Workers Union, and the General Body meeting conducted by them. Even though such a general body was not conducted by the concerned Union, a report has been sent to the Department saying that the general body meeting has taken place on 20-6-1962. The second point they have mentioned according to the report which was sent to the Department was that the person who presided over the general body meeting was a different person from the person who signed the proceedings. The third point is the ticket numbers of persons who were present there varies from the numbers of persons who were present; the fourth point is that before conducting this general body, no voters list was published and no calendar of events also had been published and no date was given to the members to participate in the general body. Even though such irregularities were there, the general body meeting was supposed to have been conducted and proceedings of that meeting was sent to the Department and the Department accepted it one way or other. I want a specific answer from the Labour Minister whether that is the way of the Registrar of Trade

Unions working in our State. The Registrar of Trade Unions is not going into the merits of General body proceedings itself. How can we expect him to look into the proper existence of Trade Unions? I request the Hon'ble Minister to look into the case properly. Several other occasions will also arise like this. There are several other unions conducting general body meetings in name and several things are going on.

SRI D. DEVARAJ URS (Minister for Labour, Housing and Transport).—I want to know whether it was brought to the notice of Government at any time by way of complaint?

SRI S. RAJAGOPAL.—It was brought to the notice of the Department in January 1965 and I have got a reply from the Department also saying that it is under the consideration of the Government. It was also addressed to the Labour Minister. I want to emphasise here that even though these things are taking place in our State, the Registrar of Trade Unions does not study papers properly, even though, the person who signed is different from the person who signed it.

SRI K. PUTTASWAMY (Minister for Municipal Administration).—If there is any irregularity, there is prescribed procedure and they will have to adopt that prescribed procedure. If simply a petition is given to Government, what action can the Government take?

SRI S. RAJAGOPAL.—If the Unions were to simply send some report even though general body meeting does not take place, are we to close our eyes and keep silent over these things? They have to scrutinise the reports.

MR. SPEAKER.—The Hon'ble Member himself said that it is under consideration.

SRI S. RAJAGOPAL.—The Hon'ble Minister asked me what Government should do with that. The Government has more responsibility and it has to look after these things. Otherwise what is the use of recognising the unions? Regarding Works Committees in our State, Sir, even though a Government Order has been sent by the Government that all the industries should have to form works committees, most of the industries have not so far formed works committees. I want to know what action has been taken by the Government to insist upon employers to have these works committees in the factories. I want to bring to the notice of the Government that in Binny Mills for several years there is no Works Committee at all. This matter has been represented to the Minister in person and also to the concerned authorities, but yet they could not see that works committee is brought into existence there.

SRI D. DEVARAJ URS.—So far as the Works Committee is concerned, I very well remember that wherever the works Committees are needed, Government have to notify and if both parties are willing to have it, Government will have no objection. Many a time, it so happens that one party wants it and the other party does not want. The worst of it is, among the Unions themselves, there is no unanimity of opinion so far as this is concerned.

Mr. SPEAKER.—I have given Sri Rajagopal, all the time yesterday. He may take ten minutes today and conclude.

Sri S. RAJAGOPAL.—Yes, Sir. Sir, I quite sympathise with the Labour Minister that the draw backs which have been existing among the unions and the managements, the rule is that where both parties accept, then only it is possible. That should not be an excuse for the Department to close its eyes.

Sri D. DEVARAJ URS.—If the law is to be changed and Government is to be given powers to simply impose in every industry, that there must be a works committee, I have no objection.

Sri S. RAJAGOPAL.—Anyhow, Sir, I request that the Labour Department should take action wherever it is possible to take initiative to form works Committees and try to bring about better relations between the labour and management.

Sir, regarding the consumer co-operative stores, it is mentioned in the budget speech of 1965-66 that so far Government is able to organise nearly 189 co-operative stores and they are functioning. Sir, even though these societies are necessary, the progress you have made so far is not very much. So, I request the Government to take some more care to organise some more co-operative societies wherever it is possible.

I quite appreciate the action taken by the Government because they have already organised nearly 189 consumer co-operative stores. But that alone will not fulfil the objective.

So far as E. S. I. scheme is concerned, they have covered in our State approximately 1,37,561 families throughout the State and this year our Government propose to open nearly 8 more centres which consist of 3,000 families. Evenhere, I should say that the advance made is not satisfactory, because the scheme has come into existence for the last 4–5 years. Even then, we could not cover half the population and this cannot be considered to be any great achievement. I request the Government to put some more care on this issue also and have some more centres and see that the scheme is implemented throughout the State.

Craftsmen training also, during the third Plan the seats sanctioned is nearly 2,736 up to 1st May 1964. They have implemented only 1,516 seats. Now the Government has come forward to have some more. By 1965 February 292 seats. Altogether, it comes to 1808 by March 1965. Even though sanction was there for 2,736 seats, they could not fulfil the the target within the period of the Third Plan. Even though money has been sanctioned, they were not able to utilise the money. Government has emphasised here the difficulties-want of buildings, co-operation, machinery. I quite appreciate the difficulties which were cited by the Government. In spite of these, we could have advanced much more by having the scheme implemented cent per cent without lapsing the amount which has already been sanctioned to this scheme in our State.

Here Sir, again I want to stress one point. In K.G.F. particularly, even though the response is more, even when Government have allowed 25-30 seats, there were 600 applications for this training. Why not you

ಕರ್ನಾಟಕ ವಿಧಾನಮಂಡಲ ಗ್ರಂಥಾಲಯ

try to utilise some more seats in that place itself? You can ask for the opinion of the Managing Director of the Concern or the Industry to give more and more facilities. I think Government will have no difficulty. You can take such management into consideration, get their help and try to implement this scheme cent per cent wherever it is possible. So, I request the Government to kindly consider in September whether they are able to implement the scheme which have already come into existence and increase particularly in K.G.F. and Mangalore which are industrial areas and even the management is prepared in these places...

MR. SPEAKER.—Only two minutes more.

SRI S. RAJAGOPAL.—Yes, I will say only two points and finish Sir.

In 1962 Budget Session, the Hon'ble Member Sri Krishna Setty invited opinion of the Minister to furnish the annual administration report of the Labour Department as early as possible. We had at that time only reports relating to 1958-59. The Hon'ble Minister said that the report for 1961-62 was also under print. Later according to the report of the Assurance Committee the Government by issuing some Government Order refused saying that it is not necessary to have such annual reports, because they have handed over this work to this Information Department, saying whichever information was available, let them publish and furnish the Members with such reports...

Again I can point out here that in the third Plan for 1964-65 it is mentioned here, that on the advice tendered by the Labour Advisory Committee, Government decided to start the Mysore Labour Journal, because of the importance it is having in publishing the rulings of the High Court and Supreme Court regarding the labour disputes. Government came forward in 1963 to publish that journal. If they are going to change their opinion from time to time without implementing the programme in the manner intended, I cannot understand how we can expect any progress in this Department ?

Even though the Standing Advisory Committee has taken a decision and that has been accepted by the Government, it is not implemented yet. The Government have considered the question and referred it to the Advisory Committee and they have taken a decision but inspite of this, it is not implemented. I request the Hon'ble Minister to implement the suggestion as early as possible.

1–30 P.M.

Minimum Wages Committee—Although the Government appointed this committee some two years ago, the committee had only two sittings. If that is the state of affairs, I cannot understand the necessity to have these committees.

Regarding the nomination to committees particularly to the Industrial Training Centre and Employment Exchange Advisory Committee, I never thought that the Ministers would bring in politics. I hope at least in future this department will not consider on political plane while making nominations to these committees.

With these remarks I close my speech.

Sri SANJEEVANATH AIKALA (Suratkal).—Mr. Speaker, the labour policy of the Government is to be labour the labourers. There are several measures relating to the welfare of labourers and employees but unfortunately the labour laws are interpreted in such a way that labourers cannot get justice and in many cases whatever justice was shown, it is denied to them due to inefficiency or in some cases due to late passing of such benefits to them. It is the intended policy of Government that labourers should take their due share in the management of Industry so that ultimately they feel a sense of responsibility and contribute thier mite for the prosperity of the Industry where they are working. But, what is the position today? The labourers feel dissatisfied with the working conditions, with the wages they get and with several other measures which the employers bring into suppress labourers or in some cases where the Government itself is a party to cause disaffection amongst labourers by delaying justice to them. While I admit that out turn of labourers has reduced and also efficiency has to a certain extent has come down, I do not put blame entirely on the workers because until and unless they feel that they have a rightful share in the profits of an Industry where they are working, they will not discharge their duty upto the satisfaction of management. The Government proposed to introduce certain measurers in this direction but I feel it has not brought about any appreciable rules or laws in this connection. The Government has not thought fit to bring in a measurers wherein it can force a management to see that labourers also get a legitimate share in the profits of an industry.

Sri D. DEVARAJ URS.—Does the Hon'ble Member want me to bring in a legislation?

Sri SANJEEVANATH AIKALA.—The Government should see that the measures which they have now in force are implemented properly so that the workers feel that a rightful thing is done by the Government.

With regard to delay in the implementation of awards or decisions of Labour Courts, the Hon'ble Member Sri S. Rajagopal has spoken very lucidly. I can quote a number of instances of pending cases since 1962. A dispute arose between the workers and management of Minerva Talkies in Bangalore. The labour court passed a decree and the workers were to get certain benefits in terms of money compensations. But the Evaluation Officer failed to see that the decree was implemented and consequently the employees could not get those benefits.

Mr. SPEAKER.—What is the decree?

Sri SANJEEVANATH AIKALA.—Payment of certain amount.

Mr. SPEAKER.—A labour court passes an award. That must be implemented. No question of execution of a decree.

Sri SANJEEVANATH AIKALA.—An award was passed and the concerned officer failed to execute it. Consequently a large amount of Rs. 15,000 was denied to the workers and in the meanwhile the

management changed and we do not know what the Government will do to recover this amount. I wish that action be taken immediately in this respect.

In regard to appointing representatives in the Board of Directors of concerns run by the Central Government, this Government can recommend a member from among the workers to be one of the directors. Unfortunately this Government always recommended in respect of all the four Central Government concerns, people from outside. Though representations were made by the H.M.S., A.I.T.U.C. and I.N.T.U.C., the Government has not taken any action to see that representatives of this State are appointed on the Board of Directors. Similarly in the Housing Board where the Central Government gives certain subsidy to the State Government for building houses for industrial workers, the representatives of labourers are to be there. Unfortunately for several years only one person continuously holds that position. No other person is taken as a member on this Board. This shows partiality towards a political party or person who holds the same political view as that of ruling political party.

Coming to D.A. paid to the workers in the Road Transport Department, I have to point out that a discrimination was made among the running staff and workers employed in the workshop. Whereas the running staff—driver and conductors—get a D.A. of Rs. 35 the workers in the workshop get only Rs. 14. I do not know why this discrimination was made.

Sri D. DEVARAJ URS.—Sir, in what way is it related to this? The representatives of these workers know how to get their share and they have agreed to certain things which are beneficial to them. I do not know how my friend is pleading for them.

Sri SANJEEVANATH AIKALA.—Sir, I do not want to go deep into the matter as to how this had happened. The Secretary or the President of the Union belongs to a particular area and a particular community and most of the workers in running staff are from a particular community. He tried to get more D. A. by passing the workers coming from different areas or communities. The particular Union is controlled by a particular gentleman coming from the South and the people from the South are predominant in runing staff. He only tried that higher D.A. to be given to the running staff employees. Of course, that has been agreed by the Union. But, let the Hon'ble Minister note how everything has come under the Agreement.

Sri D. DEVARAJ URS.—Sri, my friend Sri Sanjeevanath Aikala may get himself elected to that Board.

Sri SANJEEVANATH AIKALA.—All that goes to your ruling party members.

Sri D. DEVARAJ URS.—The Hon'ble Member has every right to stand for election and if he gets elected, he can represent their case as their representative.

Sri SANJEEVANATH AIKALA.—Then, things would be still more difficult. It would be very difficult for members of other parties to get things done.

Coming to strikes, I very much regret to say that a stay in strike was conducted in the Hospet Sugar Factory. Government failed to intervene at the proper time and settle the matter. Some 1,000 bags of sugar was inside the factory. The Labour Department failed to respond to the demands of the workers and consequently. the strike went on for a number of days. So also in several small concerns in Bangalore, when strike notices were given, the appropriate authorities did not intervene but allowed the strike to be undertaken and they intervened at the last moment when the matter had gone beyond their control. Sir, most of these strikes could be settled and the disputes could be settled early if the officers of the Labour Department acted properly and in time.

Sir, regarding plantation labour, I feel that their conditions are far from satisfactory. Much is required to be done in their case. There are several measures which ultimately aim at the welfare of the plantation labour but unfortunately, as I said earlier, they are not properly implemented by the authorities of the Labour Department. I also wish to point out that in certain cases, these higher labour officers have certain relatives employed in certain factories. I know serveral such instances. The higher labour officers have their relatives or their friends employed in certain factories and industrial concerns. Whenever some disputes arise and when certain things are required to be done for the welfare of the labourers, these officers interpret the measures in favour of the Management because their people are entertained by the Management there. If the Labour Minister wants specific information, I will give him. I wish such things are not allowed.

Sri D. DEVARAJ URS.—He has not brought any such instance to my notice.

Sri SANJEEVANATH AIKALA.—Of course, personally I did not. But there are several others who have brought this to the notice of the Government but noting has been done.

ಶ್ರೀ ಟಿ. ಡಿ. ದೇವೇಂದ್ರಪ್ಪ (ಭದ್ರಾವತಿ).—ಸಭಾಪತಿಯವರೇ, ನಮ್ಮ ಮುಂದೆ ಇಟ್ಟಿರುವ ಕಾರ್ಮಿಕ ಕಲ್ಯಾಣ ಬೇಡಿಕೆಯನ್ನು ನಾನು ಸ್ವಾಗತಿಸುತ್ತೇನೆ. ಹಾಗೂ ಕಾರ್ಮಿಕ ಕಲ್ಯಾಣ ಸಚಿವರು ರಾಜ್ಯದ ಕಾರ್ಮಿಕರಿಗೆ ಅನೇಕ ಸೌಲಭ್ಯಗಳನ್ನು ಕೆಲವು ವಿಧದಲ್ಲಿ ಮಾಡುತ್ತ ಬಂದಿದ್ದಾರೆ. ಇನ್ನೂ ಅವರ ಬಗ್ಗೆ ಆಗತಕ್ಕಂಥ ಕೆಲಸ ಬೇಕಾದಷ್ಟು ಇದೆ. ರಾಜ್ಯದಲ್ಲಿ ದೊಡ್ಡ ದೊಡ್ಡ ಕಾರ್ಖಾನೆಗಳಲ್ಲಿ, ಸಣ್ಣ ಸಣ್ಣ ಕಾರ್ಖಾನೆಗಳಲ್ಲಿ ಮತ್ತು ಗ್ರಾಮಾಂತರ ಪ್ರದೇಶಗಳಲ್ಲಿ ಕೂಡ ಕಾರ್ಮಿಕರ ಕಷ್ಟವನ್ನು ಸರ್ಕಾರ ನೋಡಿಕೊಳ್ಳತಕ್ಕದ್ದು ಅತಿ ಮುಖ್ಯ. ರೈತನಾಗಿರುವವನೂ ಕಾರ್ಮಿಕ, ಕಾರ್ಖಾನೆಯಲ್ಲಿ ಕೆಲಸ ಮಾಡುವವನೂ ಕಾರ್ಮಿಕ. ಇವರು ದೇಶದ ಬೆನ್ನು ಮೂಳೆ, ದೇಶದ ಅಭಿವೃದ್ಧಿಗೋಸ್ಕರ ದುಡಿಯತಕ್ಕವರು ಎನ್ನುವ ಮಾತನ್ನು ನಾವಾಗಲೀ, ಸರ್ಕಾರವಾಗಲೀ ಅನೇಕ ಸಾರಿ ಅಲ್ಲಲ್ಲಿ ತಿಳಿಸತಕ್ಕದ್ದು ಸಹಜ. ಪಟ್ಟಣಗಳಲ್ಲಿ ಸಣ್ಣ ಸಣ್ಣ ಕಾರ್ಖಾನೆಗಳಿರತಕ್ಕ ಸ್ಥಳಗಳು ಮತ್ತು ಭದ್ರಾವತಿಯಂಥ ದೊಡ್ಡ ಕಾರ್ಖಾನೆ ಇರತಕ್ಕ ಸ್ಥಳಗಳಲ್ಲಿ ಇರುವ ವಸತಿಯ ವಿಚಾರ ಪ್ರಸ್ತಾಪ ಮಾಡಬಯಸುತ್ತೇನೆ. ಭದ್ರಾವತಿಯಲ್ಲಿ ಲೆಕ್ಕಕ್ಕೆ ತೆಗೆದುಕೊಂಡರೆ 12 ಸಾವಿರ ಕಾರ್ಮಿಕರಿದ್ದಾರೆ. ಅವರಲ್ಲಿ ಕೇವಲ ನಾಲ್ಕೈದು ಸಾವಿರ ಮನೆಗಳನ್ನು ಮಾತ್ರ ಕಟ್ಟಿ ಕಾರ್ಮಿಕರಿಗೆ ವಸತಿ ಸೌಕರ್ಯವನ್ನು ಕಲ್ಪಿಸಿದ್ದಾರೆ. ಇನ್ನುಳಿದ ಕಾರ್ಮಿಕರಿಗೆ ಮನೆಗಳಿಲ್ಲದೆ ತೊಂದರೆ ಪಡುತ್ತಿರುವ ವಿಚಾರ ಮಾನ್ಯ ಸಚಿವರಿಗೆ ಕೂಡ ಗೊತ್ತಿದೆ. ಈಗ ಎರಡು ವರ್ಷಗಳಿಗೆ ಮುಂಚೆ ಭದ್ರಾವತಿ ಕಾಗದದ ಕಾರ್ಖಾನೆ ಪಕ್ಕದಲ್ಲಿ ಸುಮಾರು ಸಾವಿರಾರು ಗುಡಿಸಲುಗಳಿಗೆ ಬೆಂಕಿ ಬಿದ್ದು ಅವರು ನಿರ್ಗತಿಕರಾ

ದರು. ಹೀಗಾದ ಮೇಲೆ ಅವರಿಗೆ ತಕ್ಕ ವ್ಯವಸ್ಥೆಯನ್ನು ಸರ್ಕಾರ ಮಾಡುವುದರ ಬದಲು ಮುಂಚಿತವಾಗಿಯೇ ಸಂದಿ ಸಂದಿಯಲ್ಲಿ ಹುಲ್ಲಿನ ಗುಡಿಸಲುಗಳನ್ನು ಹಾಕಿಕೊಂಡಿರುವುದನ್ನು ತಪ್ಪಿಸಿ ಅವರಿಗೆ ಜಿಂಕ್‌ಷೀಟುಗಳನ್ನು ಒದಗಿಸಿ ಹಂಗಾಮಿಯಾಗಿ ಮನೆಗಳನ್ನು ಅವರು ಕಟ್ಟತಕ್ಕ ವ್ಯವಸ್ಥೆಯನ್ನು ಮಾಡತಕ್ಕದ್ದು ಅತಿ ಮುಖ್ಯವಾದುದು ಎಂದು ನಾನು ತಿಳಿದುಕೊಂಡಿದ್ದೇನೆ. ಹಾಗೆ ಸಚಿವರು ಮಾಡುತ್ತಾರೆಂದು ನಂಬಿದ್ದೇನೆ.

ಇವತ್ತು ಕಾರ್ಮಿಕ ವರ್ಗದವರ ಕಲ್ಯಾಣಕ್ಕೋಸ್ಕರ ಇರುವ ಈ ಖಾತೆಯನ್ನು ಹೊಂದಿರತಕ್ಕ ಸಚಿವರು ಮನೆಗಳನ್ನು ಕಟ್ಟಿಸುತ್ತಿದ್ದಾರೆ. ಇನ್ನೂ ಕಟ್ಟಿಸಬೇಕಾದುದು ಬೇಕಾದಷ್ಟು ಇದೆ. ಆದರೆ ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕ ಕಾರ್ಮಿಕರಿಗೆ ಯಾವ ಒಂದು ಸೌಲಭ್ಯವನ್ನು ಸಚಿವರು ಮಾಡಿದ್ದಾರೆಂದು ನಾನು ತಮ್ಮ ಮುಖೇನ ಪ್ರಶ್ನೆ ಮಾಡಬೇಕಾಗಿದೆ. ಏಕೆಂದರೆ ಗ್ರಾಮಾಂತರ ಪ್ರದೇಶಗಳಲ್ಲಿ ಕಾರ್ಮಿಕರು ಇಲ್ಲವೆ? ಅಲ್ಲಿ ಕೆಲಸ ಮಾಡುವ ಲೇಬರರ್ಸ್ ಇಲ್ಲವೇ ? ಹಾಗಾದರೆ ಅವರಿಗೆ ಬೇರೆ ಏನಾದರೂ ಒಂದು ಹೊಸ ಕಾನೂನನ್ನು ಈ ಸರ್ಕಾರದವರು ರಚನೆಮಾಡಿದ್ದಾರೆಯೇ, ಅಥವಾ ಅವರಿಗೇ ಪ್ರತ್ಯೇಕವಾಗಿ ಯಾರಾದರೂ ಬೇರೆ ಸಚಿವರು ಇದ್ದಾರೆಯೇ ಅಥವಾ ಈ ಸರ್ಕಾರದವರು ಬರೀ ಪಟ್ಟಣಗಳಲ್ಲಿರತಕ್ಕ ಹಾಗೂ ಫ್ಯಾಕ್ಟರಿಗಳಲ್ಲಿರತಕ್ಕ ಕಾರ್ಮಿಕರಿಗೆ ಮಾತ್ರ ಅಭಿಮಾನವನ್ನು ತೋರಿಸುತ್ತಿದ್ದಾರೋ ಅದೀಗ ತಿಳಿಯದಾಗಿದೆ. ಅದೇ ಪಟ್ಟಣಗಳ ಕಾರ್ಮಿಕರಿಗೆ ಆಗುವ ಆ ಎಲ್ಲ ಸೌಲಭ್ಯಗಳನ್ನೂ ಹಳ್ಳಿಗಳ ಪ್ರದೇಶಗಳಲ್ಲಿ ಮಾಡಬೇಕೆಂಬ ಗುರಿಯನ್ನು ನಾವು ಇಟ್ಟುಕೊಳ್ಳಬೇಕು. ಪಟ್ಟಣಗಳಲ್ಲಿ ಮನೆಗಳನ್ನು ಕಟ್ಟಿಸುತ್ತಿದ್ದೇವೆ. ಆ ಯೋಜನೆಯಂತೆ ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕ ಕಾರ್ಮಿಕರಿಗೂ ಕೂಡ ಕಟ್ಟಿಸಿ ಸೌಕರ್ಯಗಳನ್ನು ಏಕೆ ಮಾಡಬಾರದು ಎಂಬುದಾಗಿ ನಾನು ಇವತ್ತು ಈ ಸಂದರ್ಭದಲ್ಲಿ ಸರ್ಕಾರವನ್ನು ಪ್ರಶ್ನೆಮಾಡಬೇಕಾಗಿದೆ. ಸರ್ಕಾರದವರಿಗೆ ಅವನ್ನು ಮಾಡಬೇಕೆಂಬ ಮನಸ್ಸು ಬಂದರೆ ಮಾಡಬಹುದು. ಅವರಿಗೇನೂ ತಾರಸಿಮನೆ ಬೇಡ, ಹೆಂಚಿನ ಮನೆಬೇಡ, ಕೇವಲ ಜಿಂಕ್‌ಷೀಟುಗಳನ್ನು ಜೋಡಿಸಿಯಾದರೂ ಸಣ್ಣ ಸಣ್ಣ ಕೊಠಡಿಗಳಂತೆ ಮಾಡಿ ಮನೆಗಳನ್ನು ಸದ್ಯಕ್ಕೆ ಕಟ್ಟಿದರೂ ಸಾಕು. ಹೀಗೆ 4-6 ಸ್ಥಳಗಳಲ್ಲಿ ಸುಮಾರು 200 ರಿಂದ 400 ರೂಪಾಯಿಗಳವರೆಗೆ ಅಂದಾಜು ಮಾಡಿ ಸಣ್ಣ ಸಣ್ಣ ಕೊಠಡಿಯೋಪಾದಿಯಲ್ಲಿ ಮನೆಗಳನ್ನು ಕಟ್ಟಿಸುವ ವ್ಯವಸ್ಥೆಮಾಡಿದರೆ ಗ್ರಾಮಾಂತರ ಪ್ರದೇಶಗಳಲ್ಲಿನ ಕಾರ್ಮಿಕರ ಭವಿಷ್ಯ ಕೂಡ ಉತ್ತಮವಾದೀತೆಂದು ನಾನು ಹೇಳುತ್ತೇನೆ. ಇದರ ಬಗ್ಗೆ ಸಚಿವರು ಯೋಚನೆಮಾಡಬೇಕು. ರಾಜ್ಯದಲ್ಲಿ ಈಗ ಹೌಸಿಂಗ್ ಬೋರ್ಡ್ ಮತ್ತು ಹೌಸಿಂಗ್ ಕಾರ್ಪೊರೇಷನ್ ಎಂಬುದಾಗಿ ಎರಡು ಇವೆ. ಹೌಸಿಂಗ್ ಬೋರ್ಡಿನಿಂದ ಪಟ್ಟಣಗಳಲ್ಲಿರತಕ್ಕ ಕಾರ್ಮಿಕರಿಗೂ ಮತ್ತು ಜನರಿಗೂ ಮನೆಗಳನ್ನು ಕಟ್ಟಿಸಿಕೊಡುತ್ತಿದ್ದಾರೆ. ಹೌಸಿಂಗ್ ಕಾರ್ಪೊರೇಷನ್ನಿನವರನ್ನು ಗ್ರಾಮಾಂತರ ಪ್ರದೇಶಗಳಿಗೆ ಎಂಬುದಾಗಿ ಸ್ಪಷ್ಟ ಮಾಡಿದ್ದಾರೆ. ಈಗ ಗ್ರಾಮಾಂತರ ಪ್ರದೇಶಗಳಲ್ಲಿ ಎಷ್ಟು ಸೊಸೈಟಿಗಳಿವೆ. ನಿಜವಾಗಿ ಮನೆಗಳಿಗಾಗಿ ಇವರು ಖರ್ಚುಮಾಡತಕ್ಕ ಹಣವೆಷ್ಟು, ಗ್ರಾಮಾಂತರ ಪ್ರದೇಶಗಳಲ್ಲಿ ಆ ಹಣ ನಿಜವಾಗಿ ಖರ್ಚಾಗುತ್ತಿದೆಯೇ ಎಂಬುದನ್ನು ಇವರು ವಿಚಾರ ಮಾಡಬೇಕು. ಇದರ ಬಗ್ಗೆ ನಾನು ಅನೇಕಸಾರಿ ಇಲ್ಲಿ ಪ್ರಸ್ತಾಪ ಮಾಡಿದ್ದೇನೆ. ಮಾನ್ಯ ಸಚಿವರು ಇದರ ಬಗ್ಗೆ ಎಷ್ಟರ ಮಟ್ಟಿಗೆ ಗಮನ ಕೊಡುತ್ತಿದ್ದಾರೆಂಬುದನ್ನು ಅವರ ಉತ್ತರದಲ್ಲಿ ಹೇಳುತ್ತಾರೆಯೆ ಎಂಬುದನ್ನು ಕಾದು ನೋಡಬೇಕಾಗಿದೆ. ಈಗ ಹೌಸಿಂಗ್ ಕಾರ್ಪೊರೇಷನ್ ಮತ್ತು ಹೌಸಿಂಗ್ ಬೋರ್ಡ್ ಎಂಬುದಾಗಿ ಎರಡು ಇರುವುದು ಎರಡು ದೋಣಿಗಳ ಮೇಲೆ ಕಾಲಿಟ್ಟ ಹಾಗೆ ಇದೆ. ಇಲ್ಲಿ ಮುಖ್ಯ ಮಂತ್ರಿಗಳು ಇದ್ದಾರೆ. ಇದನ್ನು ವಿಚಾರಮಾಡಬೇಕು. ಈಗಿರತಕ್ಕ ಹೌಸಿಂಗ್ ಕಾರ್ಪೊರೇಷನ್ ತೆಗೆದು ಹೌಸಿಂಗ್ ಬೋರ್ಡ್‌ನೊಳಗೆ ಅದನ್ನು ವಿಲೀನ ಮಾಡಿ ಎಷ್ಟೇ ಹಣ ಖರ್ಚಾದರೂ ಪಟ್ಟಣಗಳಲ್ಲಿನ ಕಾರ್ಮಿಕರಿಗೆ ಮನೆಗಳನ್ನು ಕಟ್ಟಿಸುವ ಹಾಗೆ ಅಷ್ಟೇ ಹಣವನ್ನು ಖರ್ಚುಮಾಡಿ ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕ ಕಾರ್ಮಿಕರಿಗೂ ಮನೆಗಳನ್ನು ಕಟ್ಟಿಸುವ ವ್ಯವಸ್ಥೆ ಮಾಡುವುದು ಒಳ್ಳೆಯದು ಹೀಗೆ ಅಲ್ಲಿ ಮನೆಗಳು ಇಲ್ಲದ ಕಾರ್ಮಿಕರಿಗೂ ಮನೆಗಳನ್ನು ಕಟ್ಟಿಸಿ ಸೌಕರ್ಯವನ್ನು ಕೊಡಬೇಕು. ಅದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಹಾಗೂ ಮಂತ್ರಿಗಳು ವಿಚಾರ ಮಾಡಬೇಕೆಂದು ನಾನು ತಿಳಿಸುತ್ತೇನೆ.

ಇನ್ನೊಂದು ವಿಷಯ ; ನಮ್ಮ ಭದ್ರಾವತಿಯಲ್ಲಿ ಕಾರ್ಖಾನೆಗಳಲ್ಲಿ ಕೆಲಸ ಮಾಡತಕ್ಕ ಕಾರ್ಮಿಕರಿಗೆ ಅನೇಕ ಸೌಕರ್ಯಗಳನ್ನು ಸರ್ಕಾರದವರು ಒದಗಿಸಿ ಕೊಟ್ಟಿದ್ದಾರೆ. ಬೋನಸ್ಸು ಸಹ ಕೊಡುತ್ತಿದ್ದಾರೆ. ಮನೆ ಬಾಡಿಗೆಯನ್ನೂ ಅವರಿಂದ ತೆಗೆದುಕೊಳ್ಳದೆ ಉಚಿತವಾಗಿ ವಸತಿ ಸೌಕರ್ಯ ಕೊಡಲು ಕಟ್ಟಿರತಕ್ಕ ಮನೆಗಳನ್ನು ಕೊಡುತ್ತಿದ್ದಾರೆ. ಇದು ತುಂಬಾ ಸಂತೋಷ. ಇನ್ನು ವಿದ್ಯುಚ್ಛಕ್ತಿ ವಿಚಾರವಾಗಿ ಹೇಳುವುದಾದರೆ ಅದನ್ನು ಕೂಡ ಕಾರ್ಮಿಕರಿಗೆ ಏತಕ್ಕಾಗಿ ಉಚಿತವಾಗಿ ಕೊಡಬಾರದು ಎಂಬುದಾಗಿ ನಾನು ಈ ಸಂದರ್ಭದಲ್ಲಿ ಪ್ರಸ್ತಾಪ ಮಾಡುತ್ತೇನೆ. ಒಂದು ವೇಳೆ ಕಾರ್ಮಿಕರು ಹೇರಳವಾಗಿ ಎಲೆಕ್ಟ್ರಿಕ್ ಕರೆಂಟನ್ನು ಸುಟ್ಟು ಜಾಸ್ತಿಯಾಗಿ ವೇಸ್ಟ್‌ಮಾಡಬಹುದು.

(ಶ್ರೀ ಟಿ. ಡಿ. ದೇವೇಂದ್ರಪ್ಪ)

ಅದಕ್ಕೋಸ್ಕರವಾಗಿ ಒಂದು ಮಿನಿಮಂ ರೇಟನ್ನು ಫಿಕ್ಸ್‌ಮಾಡಿ ಕೇವಲ 2-3ರೂಪಾಯಿಗಳಿಗೆ ಅಗತಕ್ಕ ಕರೆಂಟನ್ನು ಅವರು ಖರ್ಚುಮಾಡಿ ಅದಕ್ಕಿಂತ ಜಾಸ್ತಿ ಖರ್ಚು ಮಾಡತಕ್ಕ ಕರೆಂಟಿಗೆ ಅಗತಕ್ಕ ಚಾರ್ಜನ್ನು ಕಾರ್ಮಿಕರಿಂದ ತೆಗೆದುಕೊಳ್ಳುವ ವ್ಯವಸ್ಥೆಮಾಡಬೇಕು. ಇದನ್ನು ಕೂಡ ಸರ್ಕಾರ ದವರು ಪರಿಶೀಲನೆ ಮಾಡಬೇಕು. ಈಗ ಕಾರ್ಖಾನೆಗಳಲ್ಲಿ ಕಾರ್ಮಿಕರು 30 ವರ್ಷಗಳ ಕಾಲ ಕೆಲಸ ಮಾಡಿ ಅವರು ಹೆಚ್ಚಿನ ಅನುಭವ ಪಡೆದು ನಂತರ ಅವರು ನಿವೃತ್ತಿಯಾಗುವುದು ಸಹಜ. ಈಗ ಭದ್ರಾವತಿ ಕಾರ್ಖಾನೆಯನ್ನು ತೆಗೆದುಕೊಳ್ಳೋಣ. ಅನೇಕ ಇಂಜನಿಯರುಗಳು, ಕಾರ್ಮಿಕರು ಕೆಲಸಮಾಡಿ ಕೈಗಾರಿಕೆಗಳಲ್ಲಿ ವಿಶೇಷವಾಗಿ ಅನುಭವ ಪಡೆದು ರಿಟೈರ್ ಆಗುತ್ತಾರೆ. ಇವರು ರಿಟೈರ್ ಆದನಂತರ ಅವರು ಎಲ್ಲಿ ಹೋಗಬೇಕು, ಎಲ್ಲಿ ನೆಲೆಸಬೇಕು, ಅವರ ಉದ್ಯೋಗ ಏನು ಎಂಬುದನ್ನೆಲ್ಲಾ ಈ ದಿವಸ ಯೋಚನೆ ಮಾಡಬೇಕು. ಕೈಗಾರಿಕೆಯಲ್ಲಿ ಪರಿಣತರಾಗಿರುವವರನ್ನು ಒಂದೆಡೆ ಸೇರಿಸುವ ಉದ್ದೇಶದಿಂದ ಅದರಲ್ಲಿ ಪರಿಣತೆ ಹೊಂದಿರತಕ್ಕವರಿಗಾಗಿ ಈ ಕಾರ್ಖಾನೆಯ ಪಕ್ಕದಲ್ಲಿ ಒಂದು ಒಳ್ಳೆಯ ಜಾಗವನ್ನು ಸೆಲೆಕ್ಟ್ ಮಾಡಿ ಒಂದು ದೊಡ್ಡ ಕಾಲೋನಿಯನ್ನು ಕಟ್ಟಿಸಿ ದರೆ ಬಹಳ ಒಳ್ಳೆಯದು. ಅಂತಹ ಕಡೆಗಳಲ್ಲಿ ಸಣ್ಣ ಸಣ್ಣ ಕೈಗಾರಿಕೆಗಳನ್ನು ಮಾಡುವುದಕ್ಕೆ ಏತಕ್ಕೆ ವ್ಯವಸ್ಥೆ ಮಾಡಬಾರದು ? ಆ ತರಹವೇನೂ ಮಾಡುತ್ತಿಲ್ಲ. ಇವತ್ತು ನಮ್ಮ ಭದ್ರಾವತಿಯಲ್ಲಿ ಸುಮಾರು ವರ್ಷಂಪ್ರತಿ ನೂರಾರು ಜನರು ರಿಟೈರ್ ಆಗುತ್ತಾರೆ. ಆದರೆ ಅವರು ಎಲ್ಲಿ ಹೋಗಿ ಜೀವನ ಸಾಗಿಸಬೇಕೆಂಬುದೇ ಈಗಿರತಕ್ಕ ಒಂದು ದೊಡ್ಡ ಪ್ರಶ್ನೆಯಾಗಿದೆ. ಕೆಲವು ಸ್ಥಳಗಳಲ್ಲಿ ಎಲ್ಲಿ ಜಮೀನು ಇದೆಯೋ ಅಲ್ಲಿ ಸಿಕ್ಕಾಪಟ್ಟೆ ಮನೆಗಳನ್ನು ಕಟ್ಟಿಕೊಳ್ಳುವುದಕ್ಕೆ ಅವಕಾಶವಾಗುತ್ತಿದೆ. ಇಂತಹ ಅಜಾಗ್ರತೆಯನ್ನು ಕೂಡಲೇ ತಪ್ಪಿಸಿ, ಒಂದು ಒಳ್ಳೆಯ ಜಾಗವನ್ನು ಚುನಾಯಿಸಿ ಅಲ್ಲೊಂದು ಕಾಲೋನಿಯನ್ನು ಮಾಡಿ ಅವರಿಗೆ ಒಳ್ಳೆಯ ಉದ್ಯೋಗಗಳನ್ನು ಮಾಡಲು ತಕ್ಕ ಅವ ಕಾಶವನ್ನು ಮಾಡಬೇಕೆಂದು ನಾನು ಸಲಹೆ ಮಾಡುತ್ತೇನೆ. ಸಚಿವರು ಈಗ ನಾನು ಹೇಳಿರತಕ್ಕ ವಿಚಾರವನ್ನು ಮನಸ್ಸಿಗೆ ತೆಗೆದುಕೊಳ್ಳಬೇಕೆಂದು ಪ್ರಾರ್ಥಿಸುತ್ತೇನೆ. ಪಟ್ಟಣದ ಕಾರ್ಖಾನೆಗಳಲ್ಲಿ ಕೆಲಸ ಮಾಡತಕ್ಕ ಕಾರ್ಮಿಕರು ಬೇರೆಯಲ್ಲ. ಗ್ರಾಮಾಂತರ ಪ್ರದೇಶಗಳಲ್ಲಿರುವ ಕಾರ್ಖಾನೆಗಳಲ್ಲಿ ಕೆಲಸ ಮಾಡತಕ್ಕ ಕಾರ್ಮಿಕರು ಬೇರೆಯಲ್ಲ ಎಂಬುದಾಗಿ ಮಾನ್ಯ ಸಚಿವರು ತಿಳಿದು ಎಲ್ಲರಿಗೂ ಒಂದೇ ಸಮನಾದ ಸೌಕರ್ಯವನ್ನು ಕಲ್ಪಿಸಿಕೊಡಬೇಕೆಂದು ಹೇಳಿ ಮಾತನ್ನು ಮುಗಿಸುತ್ತೇನೆ.

† ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಸ್ವಾಮಿ, ಕಾರ್ಮಿಕ, ಉದ್ಯೋಗವಿನಿಮಯ ಖಾತೆಯ ವಿಚಾರ ಇವತ್ತಿನ ದಿವಸ ನಮ್ಮ ಮುಂದೆ ಚರ್ಚೆಗೆ ಇದೆ. ಅದಕ್ಕೋಸ್ಕರವಾಗಿ ಸುಮಾರು 88½ ಲಕ್ಷ ರೂಪಾಯಿಗಳನ್ನು ಮೈಸೂರು ಸರ್ಕಾರದವರು ಖರ್ಚು ಮಾಡುತ್ತಿದ್ದಾರೆ. ಕಾರ್ಮಿಕ ಖಾತೆಯ ಸಚಿವರು ಕೂಲಿಗಾರರ ಹಿತಕ್ಕಾಗಿ ಹಾಗೂ ಕೂಲಿಗಾರರ ಕಲ್ಯಾಣಕ್ಕೋಸ್ಕರವಾಗಿ ಬಹಳವಾಗಿ ಆಸಕ್ತಿಯನ್ನು ವಹಿಸಿ ಕೆಲಸ ಮಾಡುತ್ತಿದ್ದಾರೆ. ಸರ್ಕಾರದವರೂ ಸಹ ಅವರ ಕಲ್ಯಾಣವನ್ನು ಸಾಧನೆ ಮಾಡುವುದಕ್ಕೆ ಸಾಕಷ್ಟು ಪ್ರಯತ್ನ ಮಾಡುತ್ತಿದ್ದಾರೆ. ಈ ವಿಷಯದಲ್ಲಿ ಅನೇಕ ಸಾರಿ ಪ್ರವಾಸ ಕಾಲದಲ್ಲಿ ಭಾಷಣಗಳನ್ನು ಮಾಡಿದ್ದಾರೆ. ಆದರೆ ನಾನು ಒಂದು ವಿಷಯವನ್ನು ಪ್ರಸ್ತಾಪ ಮಾಡುತ್ತೇನೆ. ಈ ರಾಜ್ಯದಲ್ಲಿರತಕ್ಕ ಕೂಲಿಗಾರರ ಸಂಘಗಳು, ಇಷ್ಟು ವರ್ಷಗಳಲ್ಲಿ ಅವು ಜನ್ಮ ತಾಳಿದ ಮೇಲೆ ಎಷ್ಟು ಸಾರಿ ಜನರಲ್‌ಬಾಡಿ ಮೀಟಿಂಗ್ ನಡೆಸಿ ಅಲ್ಲಿರತಕ್ಕ ಕೂಲಿಗಾರರ ಹಿತರಕ್ಷಣೆ ಮಾಡಿವೆ, ಎಷ್ಟು ಸಂಘಗಳನ್ನು ಪ್ರಾರಂಭ ಮಾಡಿವೆ ಎಂಬುದನ್ನು ನಾನು ಕೇಳುತ್ತೇನೆ. ಅವುಗಳ ಬಗ್ಗೆ ಇದುವರೆಗೂ ಸರ್ಕಾರಕ್ಕೆ ಬಂದಿರತಕ್ಕ ವರದಿಗಳೇನಾಗಿವೆ ಎಂಬುದನ್ನೂ ಸಹ ನಾನು ಈ ಸಂದರ್ಭದಲ್ಲಿ ಕೇಳಬೇಕಾಗಿದೆ. ಮೈಸೂರು ನಗರದಲ್ಲಿರತಕ್ಕ ಒಂದು ದೊಡ್ಡ ಕಾರ್ಖಾನೆಯ ಕೂಲಿಗಾರರ ಸಂಘಕ್ಕೆ ಒಬ್ಬರು ಸಚಿವರು ಅಧ್ಯಕ್ಷರಾಗಿದ್ದಾರೆ. ಅದರ ಜನರಲ್‌ಬಾಡಿ ಮೀಟಿಂಗ್ ಆಗಿ ಎಷ್ಟು ವರ್ಷ ಆಯಿತು ? ಅಲ್ಲಿರತಕ್ಕ ಲೇಬರ್ ಅಸಿಸ್ಟೆಂಟ್ ಕಮೀಷನರಿಂದ ಆ ವಿಚಾರವಾಗಿ ವರದಿಯನ್ನು ತರಿಸಿಕೊಂಡಿದ್ದೀರಾ, ಒಂದು ವೇಳೆ ತರಿಸಿಕೊಂಡಿದ್ದರೆ ಅದಕ್ಕೆ ಸಂಬಂಧಪಟ್ಟವರ ಮೇಲೆ ಏನು ಕಾರ್ಯಕ್ರಮವನ್ನು ತೆಗೆದುಕೊಂಡಿದ್ದೀರಿ ಎಂಬುದನ್ನ ನನಗೆ ಹೇಳಬೇಕು.

2-00 P.M.

ಶ್ರೀ ಡಿ. ದೇವರಾಜ ಅರಸ್.—ಅದರ ಬಗ್ಗೆ ಕ್ರಮವನ್ನು ತೆಗೆದುಕೊಂಡು ಆಗಿದೆ. ಆ ಸಂಘದ ಜನರಲ್‌ಬಾಡಿ ಮೀಟಿಂಗ್ ನಡೆದು ಅದಕ್ಕೆ ಹೊಸ ಪ್ರೆಸಿಡೆಂಟರು ಎಲೆಕ್ಟ್ ಆಗಿದ್ದಾರೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಹಾಗಾದರೆ ಇದು ಒಂದು ಸಂತೋಷದ ಸುದ್ದಿ. ಇನ್ನೊಂದು ವಿಷಯವನ್ನು ಹೇಳುತ್ತೇನೆ. ನಮ್ಮ ವಿಧಾನ ಪರಿಷತ್ತಿನ ಚೇರ್ಮನ್ ಅವರು ಒಂದು ಲೇಬರ್ ಅಸೋಸಿಯೇಷನ್ ಅಧ್ಯಕ್ಷರಾಗಿದ್ದಾರೆ.

ಶ್ರೀ ಕೆ. ಪುಟ್ಟಸ್ವಾಮಿ.—ಈಗತಾನೆ ಮಾನ್ಯ ಸದಸ್ಯರು ಹೇಳಿದರು, ಒಂದು ಕಾರ್ಮಿಕ ಸಂಘಕ್ಕೆ ಸಚಿವರೊಬ್ಬರು ಅಧ್ಯಕ್ಷರಾಗಿದ್ದಾರೆ, ಮತ್ತು ಅವರು ಅಧ್ಯಕ್ಷರಾಗಿರುವ ಸಂಘದ ಜನರಲಬಾಡಿ ಮೀಟಿಂಗ್ ನಡೆದು ಎಷ್ಟು ವರ್ಷ ಆಯಿತು ಎಂದು. ಕಾರ್ಮಿಕ ಸಂಘದ ಜನರಲ್ ಬಾಡಿ ಮೀಟಿಂಗ್ ಎರಡು ವರ್ಷಕ್ಕೊಮ್ಮೆ ನಡೆಯಬೇಕೆಂದಿದೆ. ಎರಡು ವರ್ಷ ಆದಮೇಲೂ ಅದು ಆಗಬಹುದು. ಎರಡು ವರ್ಷದಿಂದ ಮೂರು ವರ್ಷಗಳೊಳಗೇ ಆ ಕಾರ್ಮಿಕ ಸಂಘದ ಜನರಲ್ ಬಾಡಿ ಮೀಟಿಂಗ್ ನಡೆದು ಅದರ ಚುನಾವಣೆ ಕೂಡ ಆಗಿದೆ. ಅಂದಮೇಲೆ ಆ ಕಾರ್ಮಿಕ ಸಂಘದ ಜನರಲ್‌ಬಾಡಿ ಮೀಟಿಂಗ್ ನಡೆಯುವುದು ಹೆಚ್ಚು ಕಾಲ ಏನೂ ಆಗಿಲ್ಲ. ಕಾಲಕ್ಕೆ ಸರಿಯಾಗಿ ಜನರಲ್‌ಬಾಡಿ ಮೀಟಿಂಗ್ ಆಗಿ ಚುನಾವಣೆ ಕೂಡ ನಡೆದು ಆ ಸಂಘದ ಅಧ್ಯಕ್ಷರು ಸರ್ವಾನುಮತ ದಿಂದ ಆಯ್ಕೆಯಾಗಿದ್ದಾರೆ. ಮತ್ತು ಮಂತ್ರಿಗಳು ಕಾರ್ಮಿಕ ಸಂಘದ ಅಧ್ಯಕ್ಷರಾಗಿರಬಾರ ದೆಂದೇನೂ ಆ ಸಂಘದ ಬೈಲಾದಲ್ಲಿ ಇಲ್ಲ. ಕಾರ್ಮಿಕ ಸಂಘ ಒಂದು ಸೇವಾ ಸಂಸ್ಥೆ. ಸಾರ್ವಜನಿಕ ಸೇವೆಯಲ್ಲಿರತಕ್ಕ ಮಂತ್ರಿಗಳು ಲಾಭ ಬರುವ ವ್ಯಾಪಾರ ವಾಣಿಜ್ಯ ಸಂಸ್ಥೆಯಲ್ಲದೇ ಇರತಕ್ಕ ಸಾಮಾನ್ಯವಾದ ಸೇವಾ ಸಂಸ್ಥೆಯಲ್ಲಿ ಅಧ್ಯಕ್ಷರಾಗಿದ್ದರೆ ಅವರು ಅದರಿಂದ ಸಂಪರ್ಕವನ್ನು ಬಿಡ ಬೇಕಾದ್ದೇನೂ ಇಲ್ಲ. ಆದುದರಿಂದ ಸೇವಾಸಂಸ್ಥೆಯಲ್ಲಿ ಮಂತ್ರಿಗಳು ಅಧ್ಯಕ್ಷರಾಗಿ ಮುಂದು ವರಿಯುವುದು ತಪ್ಪಲ್ಲ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಮಾನ್ಯ ಪೌರಾಡಳಿತ ಸಚಿವರು ನನಗೆ ಇದ್ದಂತಹ ಸಂದೇಹವನ್ನ ನಿವಾರಣೆ ಮಾಡಿದ್ದಾರೆ. ಬಹಳ ಸಂತೋಷ. ಆದರೆ ಆ ಸಂಸ್ಥೆಗಳು ಲಾಭದಾಯಕ ಸಂಸ್ಥೆಗಳಲ್ಲ ಎಂದು ನಾನು ತಿಳಿದುಕೊಂಡಿದ್ದೇನೆ. ಎಲ್ಲಾ ಸಂಸ್ಥೆಗಳೂ ಮಾಡತಕ್ಕ ಕೆಲಸ ಕಾರ್ಯಗಳನ್ನು ಸೂಪರ್‌ವೈಜ್ ಮಾಡಿ ಅವರು ತಪ್ಪು ಮಾಡಿದ್ದರೆ ತಪ್ಪು ಎಂದು ಹೇಳಿ ನ್ಯಾಯವನ್ನು ನಿರೀಕ್ಷಣೆ ಮಾಡುವುದು ಸರ್ಕಾರದ ಕರ್ತವ್ಯ. ಹೀಗಿರುವಾಗ ಲಾಭ ಇಲ್ಲದ ಸಂಸ್ಥೆಗಳು ಎಂದು ಮುಖ್ಯ ಮಂತ್ರಿಗಳು ಒಂದು ಸಂಸ್ಥೆಯ ಅಧ್ಯಕ್ಷರಾದರೆ, ಹಣಕಾಸಿನ ಸಚಿವರು ಒಂದು ಸಂಸ್ಥೆಯ ಅಧ್ಯಕ್ಷರಾದರೆ, ವಿದ್ಯಾಖಾತೆಯ ಮಂತ್ರಿಗಳು ಒಂದು ಸಂಸ್ಥೆಯ ಅಧ್ಯಕ್ಷರಾದರೆ ಆ ಸಂಸ್ಥೆಗಳಿಗೆ ಸಂಬಂಧಪಟ್ಟ ಮಂತ್ರಿಗಳು ಆ ಸಂಸ್ಥೆಯಮೇಲೆ ಅಷ್ಟೊಂದು ಪರಿಣಾಮಕಾರಿಯಾಗಿ ವ್ಯವಹಾರ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ವಿಧಾನಪರಿಷತ್ತಿನ ಚೇರ್ಮನ್ ಅವರು ಒಂದು ಕಾರ್ಮಿಕ ಸಂಘದ ಅಧ್ಯಕ್ಷರಾಗಿದ್ದಾರೆ. ಆ ರೀತಿ ಅವರು ಆ ಸಂಘಕ್ಕೆ ಅಧ್ಯಕ್ಷರಾಗಿರುವುದಕ್ಕೆ ಪರವಾನಿಗೆ ಯನ್ನು ಕೊಡುತ್ತಾರೆಯೇ ? ಇದು ಸರಿಯೇ ಎಂದು ನಾನು ಕೇಳುತ್ತೇನೆ. ಈಗ ವಿಧಾನ ಪರಿಷತ್ತಿನ ಚೇರ್ಮನ್ ಅವರು ಅಧ್ಯಕ್ಷರಾಗಿರುವ ಸಂಸ್ಥೆ ಮುಖ್ಯ ಮಂತ್ರಿಗಳಿಗೆ ಸಂಬಂಧಪಟ್ಟ ಖಾತೆಯಾಗಿರುತ್ತದೆ ಎಂದು ಇಟ್ಟುಕೊಳ್ಳೋಣ. ಒಂದು ವೇಳೆ ಆ ಸಂಸ್ಥೆಯಲ್ಲಿ ಏನಾದರೊಂದು ವ್ಯತ್ಯಾಸ ಬಂದರೆ ಆಗ ಮುಖ್ಯಮಂತ್ರಿಗಳ ಪರಿಸ್ಥಿತಿ ಏನಾಗುತ್ತದೆ ಎಂಬುದನ್ನು ಯೋಚನೆ ಮಾಡ ಬೇಕಾಗಿದೆ. ಮತ್ತು ಆ ಸಂಸ್ಥೆಗೆ ಸಂಬಂಧಪಟ್ಟ ಯಾವುದಾದರೂ ಒಂದು ಕೆಲಸ ಇರುತ್ತದೆ ಎಂದು ಇಟ್ಟುಕೊಳ್ಳೋಣ. ಆ ಕೆಲಸವನ್ನು ಮಾಡುವುದಕ್ಕೆ ಸ್ವಲ್ಪ ತೊಡಕು ಇರುತ್ತದೆ. ಆಗ ಸಂಘದ ಅಧ್ಯಕ್ಷರಾಗಿರುವವರು ಆ ಕೆಲಸವನ್ನು ಮಾಡಲೇಬೇಕೆಂದು ಒತ್ತಾಯ ಮಾಡುತ್ತಾರೆ. ಅಂಥಾ ಸಂದರ್ಭದಲ್ಲಿ ಆ ಕೆಲಸವನ್ನ ಮಂತ್ರಿಗಳು ಮಾಡುವುದಾದರೆ ಒಂದು ಕಣ್ಣಿಗೆ ಸುಣ್ಣ ಒಂದು ಕಣ್ಣಿಗೆ ಬೆಣ್ಣೆ ಇಟ್ಟಂತೆ ಆಗುವುದಿಲ್ಲವೆ ? ಮತ್ತು ಎಷ್ಟೋ ಸಂದರ್ಭಗಳಲ್ಲಿ ಆ ಸಂಘ ದವರು ಸುಳ್ಳು ಲೆಕ್ಕ ಕೊಟ್ಟಿರುತ್ತಾರೆ. ಈ ದೃಷ್ಟಿಯಿಂದ ಉನ್ನತ ಸ್ಥಾನದಲ್ಲಿರತಕ್ಕವರು ಕಾರ್ಮಿಕ ಸಂಘಕ್ಕೆ ಅಧ್ಯಕ್ಷರಾಗಿರುವುದು ನನಗೇನೋ ಅಷ್ಟು ಹಿತವಾಗಿ ಕಾಣಿಸುವುದಿಲ್ಲ ಎಂದು ನಾನು ಮಾನ್ಯ ಮುಖ್ಯ ಮಂತ್ರಿಗಳಲ್ಲಿ ಬಹಳ ವಿನಯದಿಂದ ಅರಿಕೆ ಮಾಡಿಕೊಳ್ಳುತ್ತೇನೆ.

ಶ್ರೀ ಎಸ್. ನಿಜಲಿಂಗಪ್ಪ (ಮುಖ್ಯ ಮಂತ್ರಿಗಳು).—ಹಾಗೆ ಎಷ್ಟು ಜನ ಇದ್ದಾರೆ ?

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಎರಡು ಸಂದರ್ಭಗಳು ಇವೆ ಎಂದು ನಾನು ಆಗಲೇ ತಿಳಿಸಿದ್ದೇನೆ.

ಶ್ರೀ ಎಸ್. ನಿಜಲಿಂಗಪ್ಪ.—ಒಬ್ಬರು ಸಚಿವರು ಈಗ ಕಾರ್ಮಿಕ ಸಂಘದ ಅಧ್ಯಕ್ಷರಾಗಿ ಮುಂದುವರಿಯುತ್ತಿಲ್ಲ. ಅಂದರೆ, ಈಗ ಒಬ್ಬರೇ ಉಳಿದಿರುವುದು.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಒಬ್ಬರಿಂದ ಆಗತಕ್ಕ ಅನಾಹುತವನ್ನು ತಡೆದುಕೊಂಡರೆ ಸಾಕು ಸ್ವಾಮಿ. ಮಾನ್ಯ ಮುಖ್ಯ ಮಂತ್ರಿಗಳು ನನಗಿಂತಲೂ ಹೆಚ್ಚಿನ ವ್ಯವಹಾರ ಜ್ಞಾನವುಳ್ಳವರು. ಸಮಾಜದಲ್ಲಿ ಪ್ರಜಾಸತ್ತಾತ್ಮಕ ಪ್ರಜಾಪ್ರಭುತ್ವ ಕೆಲಸ ಮಾಡುವಾಗ ಉನ್ನತ ಸ್ಥಾನದಲ್ಲಿರತಕ್ಕವರು ಕಾರ್ಮಿಕ ಸಂಘದ ಅಧ್ಯಕ್ಷರಾಗಿರುವುದು ಸರಿಯೇ ಎಂದು ನಾನು ಕೇಳುತ್ತೇನೆ. ಮುಖ್ಯ ಮಂತ್ರಿ ಗಳು ಯಾವುದೋ ದೃಷ್ಟಿಯನ್ನಿಟ್ಟುಕೊಂಡು ಮಾತನಾಡುವುದು ಸರಿಯಲ್ಲ. ಒಂದು ವೇಳೆ ಅವರು ಸರಿ ಎಂದು ಒಪ್ಪಿಕೊಳ್ಳುವುದಾದರೆ ನಾನು ಈ ಮಾತನ್ನು ಇಲ್ಲಿಗೆ ನಿಲ್ಲಿಸುತ್ತೇನೆ. ನಾನು

(ಶ್ರೀ ಸಿ. ಜೆ. ಮುಕ್ಕಣ್ಣಪ್ಪ)

ಈ ವಿಷಯನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ, ಈ ರಾಜ್ಯದಲ್ಲಿ ಕಾರ್ಮಿಕ ಖಾತೆ ಇರುವುದು ದೀನದಲಿತರನ್ನು, ಕೆಳಗೆ ಬಿದ್ದಿರುವವರನ್ನು ಮೇಲಕ್ಕೆ ಎತ್ತಬೇಕು ಎನ್ನುವ ಉದ್ದೇಶಕ್ಕೋಸ್ಕರ ಇರುವುದು. ಆದ್ದರಿಂದ ಎಲ್ಲರನ್ನು ಒಂದೇ ದೃಷ್ಟಿಯಿಂದ ನೋಡಬೇಕು. ಒಂದು ಕಡೆ ಒಂದು ದೃಷ್ಟಿ, ಇನ್ನೊಂದು ಕಡೆ ಇನ್ನೊಂದು ದೃಷ್ಟಿಯನ್ನು ಇಡಬಾರದು. ಈಗಾಗಲೇ ನನ್ನ ಸ್ನೇಹಿತರಾದ ಶ್ರೀಮಾನ್ ದೇವೇಂದ್ರಪ್ಪನವರು ಹೇಳಿದರು, ಲೇಬರ್ ಹೌಸಿಂಗ್ ಸ್ಕೀಮನ್ನು ಸರ್ಕಾರದವರು ಇಂಪ್ಲಿಮೆಂಟ್ ಮಾಡುವಾಗ ಕಾರ್ಮಿಕರಿಗೆ ಮನೆಗಳನ್ನು ಕಟ್ಟುವಾಗ ಯಾವ ನೀತಿಯನ್ನು ಅನುಸರಿಸುತ್ತಿದ್ದಾರೆ, ಮತ್ತು ಕೇಂದ್ರ ಸರ್ಕಾರದಿಂದ ಬಂದಂತಹ ಹಣದಲ್ಲಿ ಎಷ್ಟು ಹಣವನ್ನು ಅದಕ್ಕಾಗಿ ಉಪಯೋಗ ಮಾಡಿದ್ದಾರೆ ಎಂಬುದನ್ನು ಅವರು ಹೇಳಿದರು. ಈ ಸಭೆಯಲ್ಲಿ ಮಾನ್ಯ ಮಂತ್ರಿಗಳು ಹೇಳಿದರು, ಹೌಸಿಂಗ್ ಯೋಜನೆಗಾಗಿ ಕೋಟಿಗಟ್ಟಲೇ ಹಣವನ್ನ ಖರ್ಚು ಮಾಡುತ್ತಿದ್ದೇವೆ ಎಂದು. ಕಾರ್ಮಿಕರಿಗೆ ವಸತಿ ಗೃಹಗಳನ್ನು ಕಟ್ಟುವುದಕ್ಕೋಸ್ಕರ ಸರ್ಕಾರದವರು ಎಷ್ಟು ಹಣವನ್ನ ಖರ್ಚು ಮಾಡಿದ್ದಾರೆ ಎಂದು ನಮಗೆ ಹೇಳಿದರೆ ಒಳ್ಳೆಯದು. ಇಂಥಿಂಥಾ ಕಡೆ ಇಷ್ಟಿಷ್ಟು ಲಕ್ಷ ರೂಪಾಯಿಗಳನ್ನು ಕಾರ್ಮಿಕರ ಕಲ್ಯಾಣಕ್ಕೋಸ್ಕರ ಕಾರ್ಮಿಕರ ಗೃಹ ವಸತಿ ನಿರ್ಮಾಣಕ್ಕೋಸ್ಕರ ಖರ್ಚು ಮಾಡಿದ್ದೇವೆ ಎಂದು ಹೇಳಿದರೆ ಒಳ್ಳೆಯದು. ವರ್ಕರ್ಸ್ ಎಜುಕೇಷನ್ನಿಗೋಸ್ಕರ ಎಂದರೆ ಕಾರ್ಮಿಕರು ತಮ್ಮ ಜೀವನವನ್ನು ಹಸನು ಮಾಡಿಕೊಳ್ಳುವುದಕ್ಕೋಸ್ಕರ, ಅವರಿಗೆ ಸರ್ಕಾರದವರು ಏನು ಅನುಕೂಲವನ್ನು ಮಾಡಿಕೊಟ್ಟಿದ್ದಾರೆ? ಈಗ ಯಾರಾದರೂ ಒಬ್ಬರು ಸರ್ಕಾರಿ ನೌಕರರು ಆ ಇಲಾಖೆಗೆ ಸಂಬಂಧಪಟ್ಟ ಟೆಸ್ಟುಗಳನ್ನು, ಪರೀಕ್ಷೆಗಳನ್ನು ಪಾಸು ಮಾಡಿಕೊಂಡರೆ ಅವರಿಗೆ ಮುಂದೆ ಆ ಕೆಲಸದಲ್ಲಿ ಕನ್‌ಫರ್‌ಮೇಷನ್ ಆಗುತ್ತದೆ ಮತ್ತು ಮುಂದಿನ ಹುದ್ದೆಗೆ ಪ್ರಮೋಷನ್ ಸಿಕ್ಕುತ್ತದೆ. ಹಾಗೆಯೇ ಕಾರ್ಮಿಕರಿಗೆ ವರ್ಕರ್ಸ್ ಎಜುಕೇಷನ್ ಎಂದು ಇದೆ. ಅವರು ಆ ಎಜುಕೇಷನ್ ಪಡೆಯುವುದಕ್ಕೆ ಸರ್ಕಾರದವರು ಸೌಲಭ್ಯವನ್ನು ಒದಗಿಸಿದ್ದಾರೆಯೇ ಎಂದು ನಾನು ಕೇಳುತ್ತೇನೆ. ಈ ವಿಷಯದಲ್ಲಿ ಮಾನ್ಯ ಕಾರ್ಮಿಕ ಸಚಿವರು ಏನಾದರೂ ಪ್ರಯತ್ನವನ್ನು ನಡೆಸಿದ್ದಾರೆಯೇ ಹೇಗೆ ಎಂಬುದನ್ನು ಹೇಳಬೇಕೆಂದು ನಾನು ಅವರನ್ನು ಕೇಳಿಕೊಳ್ಳುತ್ತೇನೆ. ನನ್ನ ಊರಾದ ಸಿರಾದೊಳಗೆ ಮೂರು ಸಾವಿರ ಜನ ಬೀಡಿ ಕಟ್ಟುತಕ್ಕಂಥವರಿದ್ದಾರೆ, ಅವರುಗಳಿಗೆ ಮನೆ ಇಲ್ಲ. ಅವರು ಮ್ಯಾನ್ ಹೋಲುಗಳಲ್ಲಿ ಜೀವಿಸುತ್ತಿದ್ದಾರೆ; 'ಬ್ಲಾಕ್ ಹೋಲ್ ಆಫ್ ಕಲ್ಕಟಾ' ಎಂದು ಕೇಳಿದ್ದನ್ನು ಅಲ್ಲಿ ನೋಡಬಹುದು. ನಮ್ಮ ಊರಿನಲ್ಲಿರುವ 16 ಸಾವಿರ ಜನರಲ್ಲಿ 3 ಸಾವಿರ ಜನ ಬರೀ ಬೀಡಿ ಕೆಲಸಗಾರರಿದ್ದಾರೆ. ಹಿಂದೆ ಇದ್ದ ಹೌಸಿಂಗ್ ಬೋರ್ಡ್ ಚೇರ್ಮನ್ ಮತ್ತು ಸರಕಾರ ಉದ್ದಕ್ಕೂ ಮಾತನಾಡುತ್ತಾ ಬಂದಿದ್ದಾರೆ, ಅವರು ಬಹಳ ಕಷ್ಟದೆಶೆಯಲ್ಲಿದ್ದಾರೆ, ಅವರಿಗೆ ಮನೆ ಕಟ್ಟಿಸಿ ಕೊಡುವುದಕ್ಕೋಸ್ಕರ ಸರಕಾರ ಮತ್ತು ಹೌಸಿಂಗ್ ಬೋರ್ಡ್ ಪ್ರಯತ್ನ ಮಾಡುತ್ತಿದೆ ಎಂದು ಅವರು ಕೊಟ್ಟ ಮಾತೆಲ್ಲ ಗಾಳಿಗೆ ಹೋಗಿದೆ; ಇವತ್ತಿನವರೆಗೂ ಕಾರ್ಯಗತವಾಗಿಲ್ಲ. ಕಾರ್ಮಿಕ ಸಚಿವರಲ್ಲಿ ಒಂದು ಅರಿಕೆ ಮಾಡಿಕೊಳ್ಳುತ್ತೇನೆ......

ಶ್ರೀ ಡಿ. ದೇವರಾಜ ಅರಸ್.—ಮಾನ್ಯ ಸದಸ್ಯರು ಏನು ಪ್ರಯತ್ನ ಮಾಡಿದ್ದಾರೆ?

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಮಾಡಿದ್ದೇವೆ. ತಾವು ಸಚಿವರಾಗಿ, ಧಾರವಾಡ ಕಡೆಯಿಂದ ಬಂದಾಗ, ಸಿರಾ ಪ್ರವಾಸಿ ಮಂದಿರದಲ್ಲಿ ಲೇಬರ್ ಅಸೋಸಿಯೇಷನ್ನಿನವರು ಮತ್ತಿತರರು ತಮ್ಮನ್ನು ಭೇಟಿ ಮಾಡಿ ತಮ್ಮ ಮುಂದೆ ಅವರ ಬೇಡಿಕೆಗಳನ್ನಿಟ್ಟಾಗ ತಾವು ಮಂತ್ರಿಯಾಗಿರುವುದರೊಳಗೆ, ಆ ಬೇಡಿಕೆಗೆ ಏನಾದರೂ ರೂಪುರೇಖೆ ಬರುವ ರೀತಿಯಲ್ಲಿ ಪ್ರಯತ್ನ ಮಾಡುತ್ತೇವೆಂದು ಹೇಳಿದ್ದಿರಿ. ತಾವು ಕೊಟ್ಟಂಥ ಮಾತು ಕೂಡ ನೆರವೇರಿಲ್ಲ. ಸರಕಾರದವರು ಅದಕ್ಕೆ ಯಾವುದಾದರೂ ಒಂದು ರೀತಿಯಲ್ಲಿ ರೂಪುರೇಖೆಗಳನ್ನು ಕೊಡಲಿಲ್ಲವೆಂದು ಹೇಳಿದರೆ, ಇವರು ಕಾರ್ಮಿಕರ ಹಿತರಕ್ಷಣೆ ಮಾಡುವುದಕ್ಕೋಸ್ಕರ ಎಷ್ಟು ಪ್ರಯತ್ನ ಮಾಡುತ್ತಾರೆ ಅನ್ನುವುದನ್ನು ತಾವೇ ತಿಳಿದುಕೊಳ್ಳಬೇಕು.

ಅಧ್ಯಕ್ಷರು.—ನನ್ನ ತಪ್ಪಿಗೆ ಅವರು ಜವಾಬ್ದಾರರಲ್ಲ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ನೀವು ತಪ್ಪು ಮಾಡಿಲ್ಲ. ನೀವು ಕೆಲವು ಅಶೋತ್ತರಗಳನ್ನು ಈಡೇರಿಸಬೇಕೆಂದು ಮಾತು ಕೊಟ್ಟುಕೊಂಡು ಬಂದಿದ್ದನ್ನು ಅಧಿಕಾರಿಗಳು ಇಂಪ್ಲಿಮೆಂಟ್ ಮಾಡಿಲ್ಲ. ಏನೇನು ಮಾಡಬೇಕೆಂದು ತಮ್ಮ ಮನಸ್ಸಿನಲ್ಲಿತ್ತೋ ಅದನ್ನು ಕಾರ್ಯಗತ ಮಾಡುವುದು ಸರಕಾರದ ಕರ್ತವ್ಯ. ಆ ಬ್ಲೇಮನ್ನು ತಮ್ಮ ಮೇಲೆ ಹೊರಿಸುವುದಕ್ಕೆ ನನಗೆ ಇಚ್ಛೆ ಇಲ್ಲ.

ಶ್ರೀ ಡಿ. ದೇವರಾಜ ಅರಸ್.—ನಮ್ಮದೂ ತಪ್ಪಿಲ್ಲ, ನಿಮ್ಮದೂ ತಪ್ಪಿಲ್ಲ. ಈ ಸ್ಕೀಮನ್ನು ಇಂಪ್ಲಿಮೆಂಟ್ ಮಾಡುವ ಒಂದು ವಿಧಾನವನ್ನು ಅವರು ತಿಳಿದುಕೊಳ್ಳಬೇಕು. ನಾವು ಎಲ್ಲೋ ಬಂದಾಗ ಅವರು ಹೇಳಿಬಿಟ್ಟರು ಅಂದರೆ, ಮನೆ ಕಟ್ಟುವುದಕ್ಕಾಗುವುದಿಲ್ಲ. ಅದಕ್ಕೆ ಒಂದು ಪ್ರೊಸೀಜರ್ ಇದೆ, ಅದನ್ನು ಈಗಲಾದರೂ ಮಾನ್ಯ ಸದಸ್ಯರು ತಿಳಿದುಕೊಳ್ಳಬೇಕು. ಸಂಬಂಧ

ಪಟ್ಟ ಮುನಿಸಿಪಾಲಿಟಿಯಾಗಲಿ, ಸಂಬಂಧಪಟ್ಟಂಥ ನಮ್ಮ ಕಾರ್ಮಿಕರ ಹಿತೈಷಿಗಳಾಗಲಿ ಅಥವಾ ಈಗತಾನೆ ಮಾತನಾಡುತ್ತಿರುವ ಶ್ರೀಮಾನ್ ಮುಕ್ಕಣ್ಣಪ್ಪನವರೇ ಆಗಲಿ ಮನೆಗಳನ್ನು ಕಟ್ಟುವುದಕ್ಕೆ ಜಾಗ ಯಾವುದು ಎಂದು ನಿರ್ಧಾರ ಮಾಡಿ, ಆಮೇಲೆ ಸರಕಾರವನ್ನೂ, ಹೌಸಿಂಗ್ ಬೋರ್ಡನ್ನೂ ಹಣ ಕೇಳಿದರೆ, ಕೊಡುವುದಕ್ಕೆ ಪ್ರಯತ್ನ ಮಾಡುತ್ತೇವೆ. ಅದಕ್ಕೆ ಯಾವ ಅರ್ಜಿಯೂ ಇಲ್ಲ; ಮುನಿಸಿಪಾಲಿಟಿಯವರೂ ಮುಂದೆ ಬಂದಿಲ್ಲ, ಮತ್ತೊಬ್ಬರೂ ಬಂದಿಲ್ಲ. ಹೀಗಿರುವಾಗ ಮನೆ ಕಟ್ಟಿಸಲಿಲ್ಲ ಎಂದು ಬ್ಲೇಮ್ ಮಾಡುವುದು ಯಾವ ಔಚಿತ್ಯ?

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಈ ರಾಜ್ಯದ ಮಂತ್ರಿಗಳ ವಿಷಯದಲ್ಲಿ ಒಂದು ಸಖೇದಾಶ್ಚರ್ಯಕರವಾದ ಸಂಗತಿ 3-4 ದಿನದಿಂದ ನನ್ನ ತಲೆಯಲ್ಲಿ ಹುಟ್ಟಿರುತ್ತದೆ. ಹಿಂದಿನ ಸಾಲಿನಿಂದ, ಟ್ರೆಜರಿ ಬೆಂಚಿಗೆ ಸ್ವಲ್ಪ ಮುಂದಕ್ಕೆ ಬಂದ ಕೂಡಲೆ, ಅವರು ಏನೇ ಇರಲಿ, ಸರ್ವಜ್ಞರಾಗಿಬಿಡುತ್ತಾರೆ; ಸೀಟು ಬದಲಾಯಿಸಿದರೆ ಸರ್ವಜ್ಞರಾಗಿಬಿಡುತ್ತಾರೆ. ಅವತ್ತಿನ ದಿವಸ ಹೌಸಿಂಗ್ ಬೋರ್ಡು ಅಧ್ಯಕ್ಷರು, ಸರಕಾರಿ ಅಧಿಕಾರಿಗಳು ಮತ್ತು ಆಗಿನ ಕಾರ್ಮಿಕ ಸಚಿವರು ಬಂದು, ಒಂದು ಸೈಟ್ ಇನ್‌ಸ್ಪೆಕ್ಟ್ ಮಾಡಿ, ಮುನಿಸಿಪಾಲಿಟಿಯವರೊಡನೆ ಚರ್ಚೆಮಾಡಿ, ಸಿರಾದಲ್ಲಿ ಮನೆಗಳನ್ನು ಕಟ್ಟಿ ಕೊಡುವ ಸಾಧ್ಯತೆ ಇದೆ ಎಂದು ಹೇಳಿದರು. ಆಗ ಹಾಗೆ ಹೇಳಿ, ಈಗ ಗವರ್ನ್‌ಮೆಂಟ್ ಹೀಗೆ ಹೇಳುವುದು ಉಚಿತವೆ? ಆದ್ದರಿಂದ ಆ ದಾರಿಯಲ್ಲಿ ನಾನು ಏನೂ ಮಾಡಿಲ್ಲವೆಂದು ಹೇಳುವುದು ಸರಿಯಲ್ಲ. ನಮ್ಮ ಮೇಲೆ ಎಲ್ಲಾ ದೂಷಣೆಯನ್ನೂ ಹಾಕುವುದು ಸರಕಾರದ ಕರ್ತವ್ಯವಲ್ಲ. ಕಾರ್ಮಿಕ ಮಂತ್ರಿಗಳು ಈಗಲಾದರೂ ಮನಸ್ಸು ಮಾಡಿ, ಸ್ವಲ್ಪ ಮುಗ್ಗರಿಸಿದ್ದರೂ ಪರವಾಗಿಲ್ಲ, ತಾವು ಚೆಲ್ಲಿದ ಬೆಳಕಿನಲ್ಲಿ ಮುಂದುವರಿದು ಕೂಲಿಗಾರರಿಗೆ ಮನೆಗಳನ್ನು ಕಟ್ಟಿಸುವ ಪ್ರಯತ್ನ ಮಾಡಬೇಕೆಂದು ಹೇಳುತ್ತೇನೆ.

ಈ ಎಂಪ್ಲಾಯಿಮೆಂಟ್ ಎಕ್ಸ್‌ಚೇಂಜ್ ಏಳನೆಯ ಯೂನಿಟ್. ದೇಶದಲ್ಲಿ ಕೆಲಸವಿಲ್ಲದಿರತಕ್ಕಂಥ ವಿದ್ಯಾವಂತರು ಕೆಲಸ ಬೇಡಿ ಬಂದರೆ ಅವರಿಗೆ ಕೆಲಸ ಒದಗಿಸುವ ವ್ಯವಸ್ಥೆಮಾಡುವುದು ಅವರ ಕೆಲಸ. ಈಗಾಗಲೆ ಸರ್ವೀಸ್ ಕಮೀಷನ್, ಸ್ಟೇಟ್ ಲೆವಲ್, ಡಿವಿಜನಲ್ ಲೆವಲ್, ಡೆಪ್ಯುಟಿ ಕಮೀಷನರ್ ಲೆವಲ್ ರಿಕ್ರೂಟ್‌ಮೆಂಟ್ ಕಮಿಟಿಗಳು ಮತ್ತು ಡಿಸ್ಟ್ರಿಕ್ಟ್ ಎಜುಕೇಷನಲ್ ಆಫೀಸರೂ ನೇಮಕ ಮಾಡುತ್ತಾರೆ; ಇವುಗಳ ಜೊತೆಗಿರುವುದು ಈ ಎಂಪ್ಲಾಯಿಮೆಂಟ್ ಎಕ್ಸ್‌ಚೇಂಜ್‌ನಲ್ಲಿ ನಾನು 1961ರಲ್ಲಿ ರಿಜಿಸ್ಟರ್ ಮಾಡಿಸಿದ್ದರೆ ನನಗೆ ಕೆಲಸ ಸಿಕ್ಕಿರುವುದಿಲ್ಲ; ಅದೇ 1964ನೆ ಇಸವಿಯಲ್ಲಿ ಮತ್ತೊಬ್ಬ ರಿಜಿಸ್ಟರ್ ಮಾಡಿಸಿದ್ದರೆ ಅವನಿಗೆ ಕೆಲಸ ಸಿಗುತ್ತದೆ. ನನ್ನ ಕಾರ್ಡ್ ಮೇಲೆ ನಾಟ್-ಟು-ಬಿ-ಎಂಪ್ಲಾಯ್ಡ್ ಎಂಬ ಸೀಲ್ ಒತ್ತಿಬಿಡುತ್ತಾರೆ. 1961ನೆ ಇಸವಿಯಲ್ಲಿ ರಿಜಿಸ್ಟರಾದವನಿಗೆ ಕೆಲಸ ಇಲ್ಲದಿರುವಾಗ, 1964ರಲ್ಲಿ ಅರ್ಜಿ ಹಾಕಿದವನು ಕೆಲಸ ಪಡೆದುಕೊಂಡು, ತನ್ನ ಡಿಯರೆನೆಸ್ ಅಲೋಯನ್ಸ್ ಹೆಚ್ಚು ಮಾಡಬೇಕು, ಎಮಾಲ್ಯುಮೆಂಟ್ಸ್ ಜಾಸ್ತಿ ಕೊಡಬೇಕು ಎಂದು ಬೀದಿಯಲ್ಲಿ ಗದ್ದಲ ಮಾಡುತ್ತಿರುತ್ತಾನೆ. ಜನತೆಯ ಕಲ್ಯಾಣಕ್ಕಾಗಿ ಇರುವ ಈ ಉದ್ಯೋಗ ಕೇಂದ್ರದಲ್ಲಿ ಅನರ್ಥಗಳು ಬೇರೆ ಯಾವ ಕೇಂದ್ರದಲ್ಲಿಯೂ ಆಗುತ್ತಿಲ್ಲ. ಆ ಎಕ್ಸ್‌ಚೇಂಜುಗಳಲ್ಲಿ ವಿದ್ಯಾರ್ಥಿಗಳಿಗೆ ಕೆಲಸ ಕೊಡಲು ಯಾವರೀತಿ ಅವ್ಯವಹಾರ ನಡೆಯುತ್ತಿದೆ ಅನ್ನುವುದು ತಮಗೆ ಅರ್ಥವಾಗಿಲ್ಲ; ಅದನ್ನು ತಿಳಿದುಕೊಂಡಿದ್ದರೆ ಚೆನ್ನಾಗಿತ್ತು. ತಮಗೆ ಒಂದು ನೇಮಕದ ಬಗ್ಗೆ ಮಾತ್ರ ಕಾಂಪ್ಲಿಮೆಂಟ್ ಮಾಡಬಹುದು. ತುಮಕೂರು ವಿನಿಮಯ ಕೇಂದ್ರದಲ್ಲಿ ಒಬ್ಬ ವಯಸ್ಸಾದ ಅಧಿಕಾರಿ ಇದ್ದಾರೆ. ಅವರದು ಫಿಲಸಾಫಿಕಲ್ ಔಟ್‌ಲುಕ್. ಅವರನ್ನು ನೋಡಿದರೆ ಅವರು ಸರಕಾರಿ ನೌಕರಿಯಲ್ಲಿರುವುದಕ್ಕೆ ನಿಜವಾಗಿಯೂ ಲಾಯಕ್ಕಲ್ಲ, ಅವರು ಎಲ್ಲೋ ಎಕ್ಸೆಪ್ಷನ್. ಕೆಲಸ ಬೇಕೆಂದು ಬೇಡಿಕೊಂಡು ಬಂದ ವಿದ್ಯಾರ್ಥಿಗಳಿಗೆ, ವಿದ್ಯಾವಂತರಿಗೆ, ಅಥವ ಅವರ ತಾಯಿತಂದೆಗಳಿಗೆ ಬಹಳ ನಯದಿಂದ ಕೆಲಸ ಸಿಗುವ ದಾರಿಯನ್ನು, ಮಾರ್ಗವನ್ನು ತೋರಿಸಿಕೊಡುತ್ತಾರೆ; ಕೆಲಸ ಹೇಗೆ ಸಿಗುತ್ತದೆಂಬುದರ ಬಗ್ಗೆ ಬೆಳಕು ಚೆಲ್ಲುತ್ತಾರೆ. ಕೆಲಸ ಸಿಗದೆ ಹೋದರೂ, ಅವರಲ್ಲಿಗೆ ಕೆಲಸ ಬಯಸಿ ಹೋದ ಯಾವ ಪದವೀಧರನೇ ಆಗಲಿ, ಯಾವ ನಿರುದ್ಯೋಗಿಯೇ ಆಗಲಿ ಅತೃಪ್ತಿಯಾಗಿ, ನಿರಾಶನಾಗಿ ಹೋಗಿಲ್ಲ; ಕೆಲಸ ಪಡೆಯಲು ಅಷ್ಟು ಮಾರ್ಗದರ್ಶನ ಕೊಡುತ್ತಾರೆ. ನಿರುದ್ಯೋಗಿಗಳಲ್ಲಿ, ಕೆಲಸ ಹುಡುಕಿಕೊಂಡು ಹೋದವರಲ್ಲಿ ಅವರು ತೋರಿಸತಕ್ಕಂಥ ಅನುತಾಪ, ಅನುಕಂಪ ಯಾರ ಮೆಚ್ಚುಗೆಯನ್ನಾದರೂ ಪಡೆಯತಕ್ಕಂಥಾದ್ದು. ಕೆಲಸ ಸಿಗದೆ ಎಷ್ಟೇ ಖಿನ್ನಮನಸ್ಸಿನವನಾಗಿದ್ದರೂ ಅವನಿಗೆ ಕೆಲಸ ಸಿಗುವ ಒಂದು ದಾರಿಯನ್ನು ತೋರಿಸಿ ಅವನನ್ನು ಆಶಾದಾಯಕನನ್ನಾಗಿ ಮಾಡುತ್ತಾರೆ. ಇಂಥ ದಯಾಹೃದಯನಾದ ನೌಕರನನ್ನು ನಮ್ಮ ಜಿಲ್ಲೆಯಲ್ಲಿ ನೇಮಿಸಿದ್ದಕ್ಕಾಗಿ ನಾನು ಇವತ್ತು ಕಾರ್ಮಿಕ ಸಚಿವರನ್ನು ನಿಜವಾಗಿ ವಂದಿಸಬೇಕಾಗಿದೆ. ಅಂಥ ಆಫೀಸರುಗಳನ್ನು ಇಟ್ಟುಕೊಳ್ಳಬೇಕು.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ (ಗುಂಡ್ಲುಪೇಟೆ).—ಆ ದಯಾಮಯನಾದ ಆಫೀಸರನ್ನು ಮೈಸೂರಿನಲ್ಲಿರುವವನೊಂದಿಗೆ ಎಕ್ಸ್‌ಚೇಂಜ್ ಮಾಡಿಕೊಡುತ್ತೀರ?

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಈ ರಾಜ್ಯದಲ್ಲಿ ಎಲ್ಲರಿಗೂ ಉದ್ಯೋಗ ಒದಗಿಸುವುದಕ್ಕೋಸ್ಕರ ಪಾಲಿಟೆಕ್ನಿಕ್ಕುಗಳನ್ನೂ, ಇಂಜನಿಯರಿಂಗ್ ಕಾಲೇಜುಗಳನ್ನೂ ತೆರೆಯುತ್ತೇವೆಂದು ಹೇಳುತ್ತೀರಿ. ಈ ಪಾಲಿಟೆಕ್ನಿಕ್ಕುಗಳನ್ನು, ಇಂಜನಿಯರಿಂಗ್ ಕಾಲೇಜುಗಳನ್ನು ಸ್ಥಾಪನೆ ಮಾಡುವುದನ್ನು ಸ್ವಲ್ಪ ಕಾಲ ಕೈಬಿಡಬೇಕು. ಅವುಗಳ ಬದಲು ಎಲ್ಲಾ ಜಿಲ್ಲಾ ಹೆಡ್‌ಕ್ವಾರ್ಟರುಗಳಲ್ಲಿಯೂ ಇಂಡಸ್ಟ್ರಿಯಲ್ ಟ್ರೇನಿಂಗ್ ಇನ್ಸಿಟ್ಯೂಟುಗಳನ್ನು ತೆರೆದರೆ, ನಿಜವಾಗಿಯೂ ಕೂಡ ನಿರುದ್ಯೋಗ ಸಮಸ್ಯೆ ನಿವಾರಣೆ ಯಾಗುತ್ತದೆ. ಎಸ್. ಎಸ್. ಎಲ್. ಸಿ. ಮಾಡಿಕೊಂಡು ಏನೂ ಕೆಲಸ ಸಿಗದೆ ಅಲೆದಾಡುತ್ತಿರುವಂಥ ವನಿಗೆ ಫಿಟ್ಟರ್ ಟ್ರೇನಿಂಗನ್ನಾದರೂ ಕೊಟ್ಟು ಕಳುಹಿಸಿದರೆ ಯಾವುದಾದರೂ ಕಾರ್ಖಾನೆಯಲ್ಲಿ ಜೀವನ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಇಂಜನಿಯರಿಂಗ್ ಕಾಲೇಜುಗಳಿಗೆ, ಪಾಲಿಟೆಕ್ನಿಕ್ಕುಗಳಿಗೆ ಖರ್ಚುಮಾಡತಕ್ಕಂಥ ಹಣವನ್ನು ಈಗಲಾದರೂ ನಿಲ್ಲಿಸಿ, ಎಲ್ಲಾ ಜಿಲ್ಲಾ ಮುಖ್ಯ ಕೇಂದ್ರಗಳಲ್ಲೂ ಮತ್ತು ಇತರ ಸೂಕ್ತ ಸ್ಥಳಗಳಲ್ಲಿ ಇಂಡಸ್ಟ್ರಿಯಲ್ ಟ್ರೇನಿಂಗ್ ಇನ್‌ಸ್ಟಿಟ್ಯೂಟುಗಳನ್ನು ತೆರೆದರೆ ನಿರುದ್ಯೋಗವನ್ನು ಬಹುಮಟ್ಟಿಗೆ ತೆಗೆದುಹಾಕಬಹುದು. ಇದರಿಂದ ಎಸ್.ಎಸ್.ಎಲ್.ಸಿ. ಮಾಡಿಕೊಂಡು ಕೆಲಸ ಸಿಗದೆ ನಿರುದ್ಯೋಗಿಗಳಾಗಿ ತಿರುಗಾಡುತ್ತಿರುವಂಥ ಸಾವಿರಾರು ವಿದ್ಯಾರ್ಥಿ ಗಳಿಗೆ ಸಹಾಯ ಮಾಡಿದಂತಾಗುತ್ತದೆ. ಸರಕಾರ ಈ ದಿಕ್ಕಿನಲ್ಲಿ ಸ್ವಲ್ಪ ತೀವ್ರವಾಗಿ ಯೋಚನೆ ಮಾಡಬೇಕು.

ನನಗೆ ಇಷ್ಟು ಹೇಳಲು ಅವಕಾಶ ಕೊಟ್ಟದ್ದಕ್ಕಾಗಿ ಅಧ್ಯಕ್ಷರನ್ನು ವಂದಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಬಿ. ಬಸವಯ್ಯ (ಕೊಳ್ಳೆಗಾಲ).—ಮಾನ್ಯ ಸಭಾಪತಿಯವರೆ, ಈ ದಿವಸ ಕಾರ್ಮಿಕ ಸಚಿವರು ತಂದಿರತಕ್ಕ ಬೇಡಿಕೆಯನ್ನು ನಾನು ಸ್ವಾಗತಿಸುತ್ತಾ ಈ ಸಂಬಂಧವಾಗಿ ನಾಲ್ಕು ಮಾತು ಗಳನ್ನು ಹೇಳೋಣವೆಂದು ಬಯಸುತ್ತೇನೆ.

ಮೊದಲನೆಯದಾಗಿ ಈ ಪಂಚವಾರ್ಷಿಕ ಯೋಜನೆ ಪುಸ್ತಕವನ್ನು ಓದುತ್ತಾ ಇರುವಾಗ, ಕಾರ್ಮಿಕ ಅಧ್ಯಾಯ ಎಲ್ಲಿದೆ ಎಂದು ಹುಡುಕುವುದೇ ಶ್ರಮಕ್ಕೆ ಬಂದಿತು. ರಾಷ್ಟ್ರದ ಐಶ್ವರ್ಯದ ಉತ್ಪನ್ನದಲ್ಲಿ ಕಾರ್ಮಿಕರಿಗೆ ಪ್ರಾಧಾನ್ಯತೆ ಇರಬೇಕೆಂದು ಅರ್ಥಿಕ ಶಾಸ್ತ್ರದಲ್ಲಿ ಓದಿದ್ದೆ—Land, Labour, Capital and Distribution ಓದುತ್ತಾ ಇದ್ದೆ. ಆದರೆ ಸುಖೀರಾಜ್ಯ ಸ್ಥಾಪನೆ ಮಾಡತಕ್ಕಂಥ ಈ ಪಂಚವಾರ್ಷಿಕ ಯೋಜನೆಯಲ್ಲಿ, ಈ ಅಧ್ಯಾಯ ಕೊನೆಯಲ್ಲಿ, ಅಂತ್ಯದಲ್ಲಿದೆ. 250 ಕೋಟಿ ರೂಪಾಯಿವರೆಗೆ ಖರ್ಚುಮಾಡಬೇಕೆಂದಿರುವ ಈ ಯೋಜನೆಯಲ್ಲಿ, ಕಾರ್ಮಿಕರಿಗೆ ಕೇವಲ 1,20,000 ರೂಪಾಯಿಯನ್ನು ಖರ್ಚುಮಾಡತಕ್ಕ ಒಂದು ವ್ಯವಸ್ಥೆಯನ್ನು ಇಟ್ಟುಕೊಂಡಿದ್ದಾರೆ, ಯೋಜನೆ ಖರ್ಚಿನ 200ನೆಯ ಒಂದು ಭಾಗ ಮಾತ್ರ ಕಾರ್ಮಿಕರಮೇಲೆ ಖರ್ಚುಮಾಡುವ ಯೋಜನೆ ಯನ್ನು ಸರಕಾರದವರು ಇಟ್ಟುಕೊಂಡಿದ್ದಾರೆ.

ಸ್ವಾಮಿ, ಸರಕಾರ ಕಾರ್ಮಿಕರ ಮೇಲೆ ಯಾವ ದೃಷ್ಟಿ ಹರಿಸುತ್ತಿದ್ದಾರೆ ಎನ್ನತಕ್ಕದ್ದು ನಮಗೆ ಇಲ್ಲಿ ವ್ಯಕ್ತವಾಗುತ್ತದೆ. ನಮ್ಮಲ್ಲಿರತಕ್ಕ ಸುಮಾರು 19–20 ಕಾರ್ಮಿಕರ ಶಾಸನಗಳನ್ನು ನಮ್ಮ ಸರಕಾರ ದವರು ಮಾಡಿದರೂ ಕೂಡ ಸರಕಾರದ ಇಲಾಖೆಯವರು ಇದನ್ನು ಎಲ್ಲಿಯೂ ಅನ್ವಯಿಸುತ್ತಿಲ್ಲ. ಅರ್ಬನ್ ಏರಿಯಾದಲ್ಲಾಗಲೀ ಗ್ರಾಮಾಂತರ ಪ್ರದೇಶದಲ್ಲಿರುವ ಕಾರ್ಮಿಕರುಗಳಿಗಾಗಲೀ ಸಂಬಂದ ಸಂಬಂಧಪಟ್ಟ ಇಲಾಖೆಯವರು ಬಹು ಕಷ್ಟಪಡತಕ್ಕ ಕಾರ್ಮಿಕರ ಮೇಲೆ ಅವರ ಗಮನ ಬಾರದೆ ಇರುವುದು ನೋಡಿದರೆ ನಿಜವಾಗಿಯೂ ತುಂಬಾ ಶೋಚನೀಯವಾಗುತ್ತದೆ. ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕ ಪ್ರದೇಶಗಳಲ್ಲಿ ಶೇಕಡಾ 75 ರಷ್ಟು ಜನಸಂಖ್ಯೆಯಲ್ಲಿ ಸುಮಾರು 40 ಜನರಷ್ಟು ಕಾರ್ಮಿಕರುಗಳಿದ್ದಾರೆ. ವ್ಯವಸಾಯಕ್ಕೆ ಸಂಬಂಧಪಟ್ಟಂತೆ ಅಗ್ರಿಕಲ್‌ಚರು ಲೇಬರರುಗಳು ಸುಮಾರು ಶೇಕಡಾ ನಲವತ್ತರಷ್ಟು ಇದ್ದಾರೆ ಎಂದು ಮಾಹಿತಿಗಳಿಂದ ಗೊತ್ತಾಗುತ್ತದೆ. ಆದರೆ ಇದೇ ಸಭೆಯಲ್ಲಿ ಸರಕಾರದವರು ವಿಶೇಷವಾಗಿ ಮಿನಿಮಂ ವೇಜಸ್ ಆಕ್ಟು ಎಂದು ಮಾಡಿದ್ದಾರೆ. ಹಾಗೆ ಆಕ್ಟುಗಳನ್ನು ಮಾಡಿದ್ದರೂ ಕೂಡ ಅದನ್ನು ಯಾವ ರೀತಿಯಾಗಿ ಕಾರ್ಯರೂಪಕ್ಕೆ ತರಬೇಕು ? ಮಿನಿಮಂ ವೇಜಸ್ ಆಕ್ಟು ಯಾವ ಏರಿಯಕ್ಕಾಗಲೀ ಇಲ್ಲ. ಯಾವ ಜಿಲ್ಲೆಯಲ್ಲಿ ಮಿನಿಮಂ ವೇಜಸ್ ಆಕ್ಟು ಜಾರಿಯಲ್ಲಿದೆ ? ಅದನ್ನು ಇಂಪ್ಲಿಮೆಂಟು ಮಾಡತಕ್ಕವರು ಯಾರು ಎನ್ನುವುದು ನನಗಂತೂ ಇಲ್ಲಿಯವರೆಗೆ ಗೊತ್ತಾಗಲಿಲ್ಲ. ನಮ್ಮ ಕೇಂದ್ರ ಸರಕಾರದವರೂ ಸಹ ಒಂದು ನೋಟನ್ನು ಮಾಡಿ ಇಲ್ಲಿಗೆ ಕಳುಹಿಸಿದ್ದರು. ಅಗ ಅವರು ಹೇಳಿದುದು ನಮ್ಮ ಹೆಗ್ಗಡದೇವನಕೋಟೆ ತಾಲ್ಲೂಕು ಕಡೆಯಿಂದ ಶಿವಮೊಗ್ಗಾದವರೆಗೆ ಮಲೆನಾಡು ಪ್ರದೇಶದಲ್ಲಿ ಅಗ್ರಿಕಲ್‌ಚರು ಲೇಬರು ಹೆಚ್ಚಾಗಿದೆ, ಇಲ್ಲಿ ಪೇಮೆಂಟ್ ಆಫ್ ವೇಜಸ್ ಆಕ್ಟನ್ನು ಜಾರಿಗೆ ಕೊಡಬೇಕೆನ್ನುವ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದರು. ಈ ನೋಟಿನ ಬಗ್ಗೆ ನಾವು ಸರಕಾರವನ್ನು ಇಲ್ಲಿ ಕೇಳಿದಾಗ ಇದನ್ನು ಎನ್‌ಕ್ವೈರಿ ಮಾಡುತ್ತೇವೆ ಎಂದು ಹೇಳಿದರೆ ನಿಜವಾಗಿಯೂ ಇದು ಅಷ್ಟು ಸಮಂಜಸವಾದುದಲ್ಲ. ಮಿನಿಮಂ ವೇಜಸ್ ಆಕ್ಟು ಇದ್ದರೂ ಕೂಡ

ಅದನ್ನೇಕೆ ಮಾಡಲಿಲ್ಲ? ವಿಚಾರಣೆ ಮಾಡುತ್ತೇವೆಂದು ಹೇಳಿದುದನ್ನೇ ಷೆಡ್ಯೂಲು ಕ್ಯಾಸ್ಟ್ಸ್ ಕಮಿಷನರವರು ಅವರ ನೋಟಿನಲ್ಲಿ ರೆಫರು ಮಾಡಿದ್ದಾರೆ. ಅಗ್ರಿಕಲ್‌ಚರು ಲೇಬರಿನಲ್ಲಿ ಇನ್ನೊಂದು ಭಾಗದ ಜನರಿದ್ದಾರೆ. ಅವರು ಜೀತದ ಪದ್ಧತಿಯಂತೆ ಹೆಗ್ಗಡದೇವನಕೋಟೆಯಿಂದ ಶಿವಮೊಗ್ಗಾದ ವರೆಗಿರುವ ಮಲೆನಾಡು ಟ್ರಾಕ್ಟ್‌ನಲ್ಲಿ ಬಹಳ ಹೆಚ್ಚಾಗಿ ಇರತಕ್ಕವರು. ಹಿಂದೆ ಇಂಗ್ಲೆಂಡಿನಲ್ಲಿ ಒಂದು ರೀತಿಯ ಕಾರ್ಮಿಕರಿದ್ದರು. ಅದರಂತೆ ನಮ್ಮಲ್ಲಿಯೂ ಜೀತದ ಪದ್ಧತಿಯ ಜನರು 24 ಗಂಟೆಗಳ ಕಾಲವೂ ಕೆಲಸಮಾಡುವವರಾಗಿದ್ದಾರೆ. ಅವರು ಬೇರೆ ಕಡೆಗಳಿಗೆ ಹೋಗುವ ಹಾಗಿಲ್ಲ. ಅವರಿಗೆ ಕೊಡತಕ್ಕ ಸಂಬಳ ಕೂಡ ಬಹಳ ಕಡಿಮೆ. ನಮ್ಮ ಭಾರತದೇಶಕ್ಕೆ ಸ್ವಾತಂತ್ರ್ಯ ಬಂದ ಮೇಲೆ ಅವರನ್ನು ಸ್ಲೇವ್ಸ್ ಎಂದು ಹೇಳಬೇಕೇ? ಅದೇನೋ ಗೊತ್ತಾಗಲಿಲ್ಲ, ಸ್ಲೇವ್ ಎಂದು ಕಾನ್‌ಸ್ಟಿಟ್ಯೂಷನ್ ಪ್ರಕಾರ ಹೇಳುವ ಹಾಗಿಲ್ಲ. ಪ್ರತಿಯೊಂದು ಗ್ರಾಮದಲ್ಲಿಯೂ ಕೂಡ ಇಂತಹ ಜೀತದ ಕಾರ್ಮಿಕರು ಸುಮಾರು 25 ರಿಂದ 50 ಜನದವರೆಗೆ ಇದ್ದಾರೆ. ಇಂತಹ ಕಾರ್ಮಿಕರನ್ನು ಇನ್ನೂ ಉತ್ತಮ ಸ್ಥಿತಿಗೆ ತರುವುದರ ಕಡೆಗೆ ನಿಜವಾಗಿಯೂ ಸರಕಾರದವರು ಇಲ್ಲಿಯವರೆಗೆ ಗಮನ ಕೊಡದೇ ಇರುವುದು ತುಂಬಾ ಶೋಚನೀಯವಾದುದು. ಇಂಗ್ಲೆಂಡಿನಲ್ಲಿ ಸೋಷಯಲಿಸ್ಟಿಕ್ ಫಾರಂ ಆಫ್ ಗವರ್ನಮೆಂಟು ಬಂದ ಮೇಲೆ, ಫ್ಯಾಕ್ಟರಿ ಆಕ್ಟು ಬಂದ ಮೇಲೆ ಅದರಲ್ಲಿ ಸ್ಪ್ಲಿಟ್ ಲೇಬರ್ ಎಂದು ಇತ್ತು. ಅದರಿಂದ ಅಲ್ಲಿರುವ ಮಿನಿಮಂ ವೇಜಸ್ ಆಕ್ಟು ಪ್ರಕಾರವಾಗಿ ಅನುಕೂಲ ಮಾಡಲು ಆಗಲಿಲ್ಲ ಎಂದು ಇಂಗ್ಲೆಂಡಿನಲ್ಲಿ ಕೊನೆಗೆ ಅದನ್ನು ವಜಾಮಾಡಬೇಕೆಂದು ತೀರ್ಮಾನಮಾಡಿ ಆ ಪದ್ಧತಿಯನ್ನೇ ವಜಾ ಮಾಡಿದರು. ಅದರಂತೆ ನಮ್ಮ ದೇಶದಲ್ಲಿರುವ ಮಿನಿಮಂ ವೇಜಸ್ ಆಕ್ಟು ಪ್ರಕಾರ ಇಂತಹ ಜನಕ್ಕೆ ಅನುಕೂಲಗಳು ಸಿಗದೇ ಇರುವುದರಿಂದ ನಿಜವಾಗಿಯೂ ಈ ದೇಶದಲ್ಲಿ ಇದನ್ನು ಬಹಿಷ್ಕರಿಸಬೇಕೆಂದು ಹೇಳುತ್ತೇನೆ.

ಇನ್ನು ಗ್ರಾಮಾಂತರ ಪ್ರದೇಶಗಳಿಗೆ ಸಂಬಂಧಪಟ್ಟಂತೆ ಇರುವ ಕಾರ್ಮಿಕರ ವಿಷಯ ಎಂದರೆ ನಮ್ಮ ಭಾಗದಲ್ಲ ಬಹುವಾಗಿ ಇರತಕ್ಕ ತೊಂದರೆಪಡತಕ್ಕ ಕಾರ್ಮಿಕರು ಎಂದರೆ ರೇಷ್ಮೆ ಉದ್ಯಮದಲ್ಲಿ ನಿರತರಾಗಿ ಕೆಲಸ ಮಾಡತಕ್ಕ ಜನ. ಸರಕಾರದವರು 1,400 ಬೇಸಿನ್‌ಗಳನ್ನು ಇಟ್ಟಿರುತ್ತಾರೆ. ಕಾಲೇಜು ಬೇಸಿನ್‌ಗಳು ಪ್ರೈವೇಟಾಗಿರುವುದು ಸುಮಾರು 5,000 ಬೇಸಿನ್ನುಗಳಿವೆ, ಚರಕ ಬೇಸಿನ್ ಗಳು ಒಟ್ಟು 3000 ಇವೆ. ಹೀಗೆ ಒಟ್ಟಿನಲ್ಲಿ ಸುಮಾರು ಹತ್ತುಸಾವಿರ ಬೇಸಿನ್ನುಗಳಿವೆ. ಇದರ ಸರಾಸರಿ ಇಷ್ಟು ಇರಬೇಕೆಂದು ಮಾಡಿದ್ದಾರೆ. ಸರಕಾರದ ಬೇಸಿನ್‌ಗಳಲ್ಲಿ ಇಷ್ಟು ಜನರನ್ನು ನೇಮಕ ಮಾಡಿಕೊಳ್ಳಬೇಕೆಂದು ಇದೆ. ಒಟ್ಟು ನಮ್ಮ ದೇಶದಲ್ಲಿರುವ ರೇಷ್ಮೆ ಕೈಗಾರಿಕೆಗಳಲ್ಲೇ ಎಳೆಯನ್ನು ತೆಗೆಯತಕ್ಕವರು ಸುಮಾರು 25,000 ಜನ ಕೆಲಸ ಮಾಡುತ್ತಿದ್ದಾರೆ. ಸರಕಾರದ ಕಾರ್ಖಾನೆಯಲ್ಲಿರುವ ಕಾರ್ಮಿಕರಿಗಾಗಿ ಕೊಡತಕ್ಕ ಸಂಬಳ ಬಹಳ ಕಡಿಮೆ ಎಂದರೆ ಒಂದು ದಿವಸಕ್ಕೆ ಎಂಟಾಣೆಯಂತೆ ದಿನಗೂಲಿ ಎಂದು ಮಾಡಿ ತಿಂಗಳಿಗೆ 15 ರೂಪಾಯಿಗಳ ಸಂಬಳ ಹಾಗೂ 40 ರೂಪಾಯಿಗಳಷ್ಟು ಡಿ. ಎ. ಎಂದು ಕೊಡುತ್ತಿದ್ದಾರೆ. ಈ ರೀತಿಯಾದ ಕಡಿಮೆ ಸಂಬಳವನ್ನು ಕನಿಷ್ಟ ವೇತನವಾಗಿ ಯಾವ ಮಿಲ್ಲಿನವರೂ ಕೊಡುತ್ತಿಲ್ಲ. ಅಷ್ಟು ಕಡಿಮೆಯಾದ ಸಂಬಳವನ್ನು ಈ ಜನಕ್ಕೆ ಕೊಡುತ್ತಿದ್ದಾರೆ, ಇವರು ಇರತಕ್ಕ ಪರಿಸ್ಥಿತಿ ನೋಡಿದರೆ ನಿಜವಾಗಿಯೂ ಬೆಂಕಿಯ ಮೇಲೆ ಕುಳಿತು ಕೆಲಸ ಮಾಡುವವರಾಗಿದ್ದಾರೆ. ಇದರಿಂದ ಅವರಲ್ಲಿ ಎಷ್ಟೋ ಜನಕ್ಕೆ ಕಣ್ಣು ಹೋಗುತ್ತದೆ. ರೇಷ್ಮೆ ಹುಳವನ್ನು ತೆಗೆಯುತ್ತಿರುವಂತಹ ಜನಕ್ಕೆ ಸಾಮಾನ್ಯವಾಗಿ ಹತ್ತು ವರ್ಷಗಳಲ್ಲಿ ಅವರು ಟಿ. ಬಿ. ಪೇಷಂಟುಗಳಾಗುವ ಸಂಭವವುಂಟು. ಈ ವಿಚಾರದಲ್ಲಿ ಸಂಬಂಧಪಟ್ಟ ಇಲಾಖೆಯವರು ಇಲ್ಲಿಗೆ ಒಬ್ಬರು ಮೆಡಿಕಲ್ ಆಫೀಸರನ್ನು ನೇಮಿಸಿ ಇಲ್ಲಿರುವ ಕಾರ್ಮಿಕರನ್ನು ಪ್ರತಿ ವಾರದಲ್ಲಿಯೂ ಚೆಕ್‌ಅಪ್ ಮಾಡುವಂತೆ ಮಾಡಿದರೆ ಜನಕ್ಕೆ ಸ್ವಲ್ಪ ಅನುಕೂಲವಾಗುತ್ತದೆ. ಸರ್ಕಾರದವರು ಈ ಜನರ ಆರೋಗ್ಯದ ಕಡೆಗೆ ಹೆಚ್ಚು ಗಮನ ಕೊಡಬೇಕೆಂದು ಹೇಳುತ್ತೇನೆ. ಇವರಿಗಾಗಿ 15 ರೂಪಾಯಿಗಳಷ್ಟು ಸಂಬಳ ಎಂದು ಕೊಡುತ್ತಿರುವುದರಿಂದ ಇವರಿಗೆ ಪ್ರಾವಿಡೆಂಟು ಫಂಡು ಸೌಕರ್ಯಗಳು ದೊರೆಯುವುದಕ್ಕೂ ಅನಾನುಕೂಲವಾಗಿದೆ. 45 ರೂಪಾಯಿಗಳಿಗೆ ಮೇಲ್ಪಟ್ಟಂತೆ ಸಂಬಳ ಇದ್ದರೆ ಪ್ರಾವಿಡೆಂಟು ಫಂಡು ಸೌಕರ್ಯಗಳೂ ಸಿಗಲು ಅನುಕೂಲವಾಗುತ್ತಿತ್ತು. ಆದುದರಿಂದ ಈಗ ಇವರಿಗೆ ಕೊಡುತ್ತಿರುವ 15 ರೂಪಾಯಿಗಳ ಸಂಬಳ ಮತ್ತು 40 ರೂಪಾಯಿಗಳ ಡಿ. ಎ. ಯನ್ನೂ ಕೂಡ ಒಟ್ಟಿಗೆ ವೇತನವಾಗಿ ಕೊಟ್ಟರೆ ಅವರು ಪ್ರಾವಿಡೆಂಟು ಫಂಡಿಗಾಗಿ ಒಂದು ರೂಪಾಯಿಗೆ ಒಂದಾಣೆಯಂತೆ ಸರಕಾರದವರು ಸೇರಿಸಿಕೊಡುವ ಅನುಕೂಲಗಳನ್ನು ಪಡೆಯಬಹುದು. ಆದುದರಿಂದ ಇವರಿಗೆ ಈಗ ಕೊಡುತ್ತಿರುವ ಸಂಬಳ ಹಾಗೂ ಡಿ. ಎ. ಎರಡನ್ನೂ ಸೇರಿಸಿ ವೇತನವಾಗಿ ಕೊಟ್ಟರೆ ಬಹಳ ಅನುಕೂಲವಾಗುತ್ತದೆ. ಆ ರೀತಿ ಮಾಡುವುದು ಒಳ್ಳೆಯದು. ಇಂತಹ ಕಾರ್ಮಿಕರು ಬೇರೆ ಎಲ್ಲಿಯೂ ಇಲ್ಲ, ಯಾವ ಪ್ರೈವೇಟು ಏಜನ್ಸಿಗಳಲ್ಲೂ ಇಲ್ಲ, ಪಬ್ಲಿಕ್ಕು ಫ್ಯಾಕ್ಟರೀನಲ್ಲೂ ಇಲ್ಲ ಅಥವಾ ಬೇರೆ ಯಾವ ಕಡೆಯಲ್ಲೂ ಇಲ್ಲ. ಈ ವಿಚಾರವನ್ನು ಅನೇಕ ಸಾರಿ ಮಾನ್ಯ ಲೇಬರು ಮಿನಿಸ್ಟರವರ ಗಮನಕ್ಕೂ ಕೂಡ ತಂದಿದ್ದೇನೆ. ಗ್ರಾಮಾಂತರ ಪ್ರದೇಶಗಳಲ್ಲಿ ಹನ್ನೆರಡಾಣೆಯಿಂದ ಒಂದು

(ಶ್ರೀ ಬಿ. ಬಸವಯ್ಯ)

ರೂಪಾಯಿ 25 ನಯಾಪೈಸಾದವರೆಗೆ ಕೂಲಿಯನ್ನು ಕೊಡುತ್ತಿದ್ದಾರೆ, ಅವರ ಸ್ಟ್ಯಾಂಡರ್ಡನ್ನು ನೋಡುವಾಗ ಇಲ್ಲಿ ಕೆಲಸ ಮಾಡುವ ಕಾರ್ಮಿಕರಿಗೂ ಕೂಡ ಜಾಸ್ತಿಯಾದ ಕೂಲಿಗಳನ್ನು ಕೊಡುವ ವ್ಯವಸ್ಥೆ ಮಾಡುವುದು ಸೂಕ್ತ ಅದಕ್ಕಾಗಿ ಕನಿಷ್ಟ ವೇತನವೆಂದು ಕೊಡುವ ವ್ಯವಸ್ಥೆಯನ್ನು ನಿಗದಿ ಮಾಡಬೇಕು. ಸುಮಾರು ಮೂವ್ವತ್ತು ಸಾವಿರ ಜನರು ಕೆಲಸಮಾಡುವಂತಹ ಕಾರ್ಮಿಕರುಗಳಿಗೆ ಒಂದು ರೀತಿಯಾದ ಕನಿಷ್ಠ ವೇತನವನ್ನು ನಿಗದಿ ಮಾಡುವ ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜುಗಳ ಸಂಬಂಧವಾಗಿ ಇಲ್ಲಿ ಒಂದು ಮಾತನ್ನು ಹೇಳ ಬೇಕಾಗಿದೆ. ಇಷ್ಟು ಪೋಸ್ಟುಗಳಿವೆ ಎಂದು ಅದಕ್ಕಾಗಿ ನೋಟಿಫಿಕೇಷನ್ನುಗಳನ್ನು ಮಾಡಿ ಇಷ್ಟು ವೇಕೆನ್ಸಿಗಳಿವೆ ಎಂದು ಅಕ್ಟು ಪ್ರಕಾರ ಮಾಡುತ್ತಾರೆ. ಯಾವ ಪೋಸ್ಟುಗಳ ವೇಕೆನ್ಸಿ ಗಳು ಇವೆ ಎಂದು ನೋಟಿಫೈ ಮಾಡಿರುತ್ತಾರೋ ಅದರಂತೆ ಫ್ಯಾಕ್ಟರಿಗಳವರು ಇಲ್ಲಿನ ಎಂಪ್ಲಾಯ್‌ ಮೆಂಟು ಎಕ್ಸ್‌ಚೇಂಜು ಮೂಲಕ ನೇಮಕಗಳನ್ನು ಮಾಡಬೇಕು ಎಂದು ಒಂದು ಕಾನೂನನ್ನು ಮಾಡಿ ಕೊಂಡಿದ್ದೇವೆ. ಅನೇಕ ಸಂಧರ್ಭದಲ್ಲಿ ಎಂಪ್ಲಾಯ್‌ಮೆಂಟು ಎಕ್ಸ್‌ಚೇಂಜುಗಳಮೂಲಕ ಅಪಾಯಿಂಟ್‌ ಮೆಂಟುಗಳು ಆಗುತ್ತಿಲ್ಲ. ಹಾಗಾದರೆ ಎಂಪ್ಲಾಯ್‌ಮೆಂಟು ಎಕ್ಸ್‌ಚೇಂಜುಗಳಲ್ಲಿ ಕೆಲಸ ಮಾಡ ತಕ್ಕದ್ದು ಹೇಗೆ ಇದರಲ್ಲಿ ಅನಿಶ್ಚಿತತೆ ಇರುವುದು ಸರಿಯಲ್ಲ. ನನಗನಿಸುವುದು ಎಂಪ್ಲಾಯಮೆಂಟು ಎಕ್ಸ್‌ಚೇಂಜುಗಳಲ್ಲಿ ಪೋಸ್ಟುಗಳಿಗಾಗಿ ಒಬ್ಬರು ರಿಜಿಸ್ಟರು ಮಾಡಿ ಅದರ ಮೂಲಕ ಒಂದು ಕಡೆ ಕೆಲಸ ಮಾಡಿ ಮೂರು ನಾಲ್ಕು ವರ್ಷಗಳಾದ ಮೇಲೆ ಡಿವಿಜನಲ್ ರೆಕ್ರೂಟ್‌ಮೆಂಟು ಕಮಿಟಿ ಮೂಲಕ ಲಿಸ್ಟು ಬಂದು ಅಲ್ಲಿಗೆ ಕೆಲಸಕ್ಕೆ ಹೋಗಬೇಕಾದರೆ ಹಿಂದೆ ಕೆಲಸ ಮಾಡಿದಂತಹ ಮೂರು ವರ್ಷ ಗಳಷ್ಟು ಸರ್ವಿಸ್ಸನ್ನು ಅವರು ಪಡೆಯಲು ಅವಕಾಶವಿಲ್ಲ. ಹಿಂದೆ ಇದ್ದ ಕೆಲಸವನ್ನು ಬಿಟ್ಟು ಹೊಸ ದಾಗಿ ರೆಕ್ರೂಟುಮೆಂಟು ಕಮಿಟಿ ಮೂಲಕ ಬರುವ ಪೋಸ್ಟುಗಳಿಗೆ ನೇಮಕ ಮಾಡುವಾಗ ಹೊಸ ದಾಗಿ ಸರ್ವಿಸ್ಸು ಎಂದು ಷುರುವಾಗುತ್ತದೆ. ಈ ತರಹ ಮೊದಲು ಒಂದು ಕಡೆ ಕೆಲಸ ಮಾಡಿದರು ಇನ್ನೊಂದು ಕಡೆ ರೆಕ್ರೂಟುಮೆಂಟು ಕಮಿಟಿ ಮೂಲಕ ಕೆಲಸಗಳನ್ನು ಪಡೆದು ಮಾಡುವಾಗ ಇವರ ದನ್ನೂ ಸರಿಯಾಗಿ ರೆಗ್ಯುಲರೈಸು ಮಾಡಿ ಹಿಂದೆ ಕೆಲಸ ಮಾಡಿದಂತಹ ಲೋಕಲ್ ಕ್ಯಾಂಡಿಡೇಟು ಗಳಿಗೆ ಒಂದು ತರಹದ ಭದ್ರತೆಯನ್ನುಂಟು ಮಾಡಬೇಕು. ಇಲ್ಲದೇ ಇದ್ದರೆ ಇದರಲ್ಲಿ ಲೋಕಲ್ ಆಗಿ ಕೆಲಸ ಮಾಡಿ ಕೆಲವು ವರ್ಷಗಳ ಕಾಲ ಪಡೆದು ಸರ್ವಿಸ್ಸನ್ನು ಬಿಟ್ಟು ಬೇರೆ ಕಡೆಗೆ ಹೋಗುವುದೆಂದರೆ ಅದು ಸೂಕ್ತವಾಗಿರುವುದಿಲ್ಲ. ಇದನ್ನೆಲ್ಲಾ ಸರಿಯಾಗಿ ರೆಗ್ಯುಲರೈಸು ಮಾಡುವುದು ಸೂಕ್ತ ಎಂದು ನಾನು ಭಾವಿಸುತ್ತೇನೆ.

ಇನ್ನು ಪಬ್ಲಿಕ್ಕು ಹಾಗೂ ಪ್ರೈವೇಟು ಸೆಕ್ಟರು ಇಂಡಿಸ್ಟ್ರಿಗಳಲ್ಲಿ ಟ್ರೈನಿಂಗಿಗಾಗಿ ಜನರನ್ನು ನೇಮಿಸುತ್ತಾರೆ. ಇದರಲ್ಲಿ ಎಲ್ಲರಿಗೂ ಸರಿಯಾಗಿ ದೊರೆಯುವಂತೆ ಮಾಡುತ್ತಿಲ್ಲ. ನಮ್ಮ ಪ್ಲಾನಿ ನಲ್ಲಿ ಎಲ್ಲರಿಗೂ ಸುಮಾರು 11,000 ಜನರಿಗೆ ಟ್ರೇನಿಂಗು ಇನ್ನೈದು ವರ್ಷಗಳಲ್ಲಿ ಸಿಗಬೇಕೆಂದು ಇದ್ದುದಕ್ಕೆ ಇದರೊಳಗೆ ಸುಮಾರು 2,000 ಜನಕ್ಕೆಮಾತ್ರ ಟ್ರೈನಿಂಗು ಪಡೆಯುವುದಕ್ಕೆಅವಕಾಶವಿದೆ. ಅದರೆ ನಮ್ಮ ಮೈಸೂರು ಡಿವಿಜನ್ನು ಎಂಪ್ಲಾಯ್‌ಮೆಂಟು ಎಕ್ಸ್‌ಚೇಂಜಿನಲ್ಲಿ ಸುಮಾರು 14,000 ಜನರು ಕೆಲಸಕ್ಕಾಗಿ ರಿಜಿಸ್ಟರು ಮಾಡಿಸಿದ್ದಾರೆ. ಇದರಲ್ಲಿ 3,000 ಜನರು ಕ್ರಾಪ್ಟ್ಸಮನ್ನುಗಳು ಬೇಕೆಂದು ಡಿಮ್ಯಾಂಡು ಇದ್ದರೆ ಅದಕ್ಕಾಗಿ ಕೇವಲ ಮೂರು ಜನ ಮಾತ್ರ ರಿಜಿಸ್ಟರು ಮಾಡಿಸಿಕೊಂಡಿದ್ದಾರು. 3,000 ಜನರು ರಿಜಿಸ್ಟರು ಮಾಡಿದವರಲ್ಲಿ ಯಾರೂ ಕ್ರಾಫ್ಟ್ಸಮನ್ನುಗಳು ಸಿಗಲಿಲ್ಲ ಎಂದರೆ ಇದರಲ್ಲೇನೋ ದೋಷವಿದೆಎಂದು ತೋರುತ್ತೆ. ಇದಕ್ಕೋಸ್ಕರ ನಾವು ಇಟ್ಟುಕೊಂಡಿರುವ 11,000 ಜನರ ಟಾರ್ಜೆಟ್ಟನ್ನು ಪಡೆಯಲು ಇನ್ನೂ ಹೆಚ್ಚಾಗಿ ಟ್ರೈನಿಂಗು ಸೆಂಟರುಗಳನ್ನು ತೆಗೆದು ಜನರಿಗೆ ಹೆಚ್ಚಾಗಿ ಟ್ರೈನಿಂಗು ಸಿಗುವಂತೆ ಮಾಡಿದರೆ ಅನುಕೂಲವಾಗುತ್ತದೆ ಎಂದು ಇಷ್ಟು ಹೇಳಿನನ್ನ ಮಾತನ್ನು ಮುಗಿಸುತ್ತೇನೆ

2-30 P.M.

Sri V. M. DEO (Gubbi).—Mr. Speaker, Sir, I would like to confine myself to only two points. One is, some Newspaper Organisations have not fully implemented the Working Journalists Act under which the terms and conditions of the Journalists are regulated. In one Newspaper Organisation—I do not want to mention the name—as

I know, eight working journalists have filed claim petitions and all negotiations have broken down. The Labour Minisitry has not evinced inerest in respect of those petetions and the Evaluation machinery has not looked into it. I have an idea that unless we fail in the biggest possible world and unless we lose once, things will not improve. I hope that something will be done speedily to the working journalists and that relief is urgently needed. I would like to pay one compliment to this Ministry and for the first time so far as I am concerned. Very rarely Ministers of Cabinet rank are found here. But, to-day they are present for exchanging ideas about any ligislation. It does not matter if we disagree and fight tooth and nail, but something good will come out when we come to clash. Though they have never done it before, better late than never, they have done it.

About the Employment Exchanges, I am amazed to see that the Employment Exchanges are instituted all over the places to do the type of work that they are not expected to do in our socialist set up. What is the type of work the real Employment Exchanges are supposed to do? In our socialist set-up, where we have a tradition of nearly 18 years, the question of giving employment to various people should not be there. In fact, the unemployment problem should have been solved. Yet there are Labour Employment Exchanges. Why? The main reason is to see that many a time many people will be in certain jobs for which they have not got the aptitude, but still they want it. To solve that only, there should be Employment Exchanges. But, to have Employment Exchanges just to record every year the enhancing army of unemployment, I think, it is something very unethical and it requires deep thought and concern of not only the Ministry but also of this House. In that set-up optitude may be wanting. The desire to be in a particular calling may be another reason. Only when these two do not go together, it comes in the way of national production. To set right such things, there should be Employment Exchanges. But, it is unfortunate saying that we stand for a particular ideology and not following it. This is the state of affairs on which I hope the Hon'ble Members and particularly the Government who are responsible—because they are in possession of power—will deeply think over the problem.

With these few words, I thank you, Sir.

SRI K. S. SURYANARAYANA RAO (Mysore City).—Sir, on the demand for the grants of the Labour Department, the only point over which I would like to stress more is the one that is mentioned just now, *viz.*, the propriety or otherwise of men in authority being the Presidents and office bearers of Labour Unions. There is no law or rule prohibiting any person from holding any office. The only point would be whether the departmental officers who are charged to carry out the policies of the State Government in matters of labour relations or labour law administration can effectively deal with a situation that may arise. I was happy to hear that there are none at present. But, there is still one that is mentioned; the number is not that matters, but it is the policy that

(SRI K. S. SURYANARAYANA RAO)

matters very much. I know it would be embarrassing to the administration should something go wrong in a particular Union. They know something is wrong, but they will be ineffective to handle it. Whatever they do will be a half-hearted affair. To avoid such cases—it may not be in the Rules—there should be a self-denying principle or code of conduct. Supposing the Labour Minister happens to be a Chairman, nothing prevents ~~him~~ from being the Chairman. What should happen to the Labour Union and the Labour Commissioner? Can he enforce discipline or can he enforce law, and can he have a checkup of the Labour Union activities? No, it is not possible. Therefore, as a matter of policy, I should request the Labour Minister to see that such people are persuaded not to accept such office. That is all I could do because no law prevents them from being in office. The difficulty is, the Department will not be able to handle it. So far as the administration of the Department is concerned, I would request the Minister to review the working of the Department and to see how many Labour Unions conduct their general body meeting regularly, how many have defaulted and if there is any default what action the Department has taken. I knowsome Unions have not held their elections and general bodies even and may be beyond the period prescribed under the law they might have held the elections. Why not the Department take action against such people and Unions? Sir, this is one aspect of the problem. The other aspect is this. It is there from the beginning 'that justice delayed is justice denied'. In the matter of reference to Courts, of course, it is the discretion that is vested with the Department or with the Labour Minister to delay any reference to the Courts wouldit not defeat the ends of justice? Labour is also a weaker partner in the game. So the weeker section of the population stand to lose. Therefore the object of defeating the provisions of law is by deferred reference to Courts. Sir, when we accept the court as an arbitrator in these matters, we must be prepared to take decisions and implement them. So, the chances of machinations of the stronger section should not be allowed. Therefore, Sir, if no time limit is prescribed, let there be references as expeditiously or as quickly as possible. I should think is should not be delayed beyond a month because, Sir, many times it is said that laps of time is a healing factor or delaying tactics pays in the end. That should not be the motto in matters of labour relations because it is a question of weaker section. In matters where references are sought for, it should be done as quickly as possible. Sir, the other point I would like to mention for the consideration of Government is this: in a big organised Union, it is just possible they have got bargaining capacity and strength; but there are smaller institutions and smaller unions where the bargaining capacity is very low. They cannot just leave them to protest against the managements handling the situtíon. Their care is not properly taken. More often than not, the management gets the better of the situation and that

is how in the Stat of Mysore if labour is not well-organised, it is not because there are no unions in bigger establishments, but it is the smaller unions are not effectively made to work. How it should be made to work is for the Department to consider. The Department should assist them. Then the Management will think twice before going against the wishes of the Union. Unfortunately labour being the weaker section of the two sides, and their number being very small, they find it very hard to bargain and find it hard to meet the manoeuvrings of the management. It is not that all managements are bad. I never say that. But there are managements and managements. Otherwise, there was no need for labour legislation and many things could have been done by conventions. There are atleast a few managements who do not respect the law or who would like to go behind the law for their own benefit. In such cases, I know smaller unions do not get the benefit of labour legislation at all. What is the Department doing ? I wish I am wrong. What they are doing is they just keep themselves engaged more with statistics rather than attend to the welfare of the labour. Whenever there is a request for support or help, it should be forthcoming from the Department. I know they try to help them, but they cannot go too far- They have not been able to do it. What I would request the Labour Minister is this: take the statistics of smaller unions that are in the country and also small establishments where there are no unions and educate the labourers to form unions in those smaller units and perhaps co-ordination among such smaller units in a particular area will be desirable. Our friend Sri Devendrappa was complaining about labour unrest in mofussil. The labour there cannot assert itself and take advantage of the privileges that are given to them. Therefore, the Department should try to organise or help in organising labour unions in smaller establishments. There is the minimum prescribed for forming unions. In such units if they are formed and if they cannot themselves function effectively, at least a federation of such unions should be formed so that they could effectively deal with the situation. Sir, the same is the case with reference to beedi industry. Sir, there is a law for giving better facilities for the workers in the beedi industry. I would like to know if anything has been possible for the Government to do for this labour. It is just not possible however much the Minister may be anxious to help them because the problem, as I said is they are smaller units and they have their own powerful unions, but because they sre smaller units and there are rules and procedure by which the management could escape the clutches of the Act, they have not been able to deliver goods to those people. Therefore, Sir, I wish they take a realistic view of the situation. There was time when we could say that we may not be very much interested in labour or that labour is exploited —exploited not in the wrong sense for we made use of labour in attaining freedom for our country. What is it that we have done in these 16 or 18 years to effectively organise labour so that the last labourer gets maximum benefit ? We in the legislature pass laws; we provide benefits and we make provision for him to get best advantage. But has he been able to get it ? What is it that we have done to assist him to achieve

(SRI K. S. SURYANARAYANA RAO)

that? One thing that the Department can do is labour education. To be a better worker in his own establishment, what is it that we have done? We may say that it is for the labour union to do it; It is for them to have a good library, to arrange lecturers, teach them or give them instructions in a way. It is all good and fine. But has it been possible? If that has not been possible, then I should think the Department should take the responsibility to organise atleast a few institutions in key centres and educate the labovrers in their own trade and also educate them as to their responsibilities and obligations. A well-educated and enlightened labourer is an asset to the industry.

An unorganised, ill-advised and an un-educated labourer is a liability to the industry. Therefore, in the interest of the industry, in the interest of production itself, it is best if at least a few centres are organised, and the responsibilities, obligations and general standards and some information and technical knowledge about his own trade should be made known to him. Our responsibility does not consist in supervising the department. Our responsibility is also in the social field.

Lastly Sir, only one aspect. Sir, there has not been proper guidance in the way of employment. There are no doubt. Employment Exchanges district advisory bodies, which are constituted; I read the gazette notification; I do not know how far, they will be able to give guidance in the matter of labour employment. I should think that something is better than nothing, though it is good to have some thing in place of nothing. But I should think that is not the way. It is a highly technical job, It is a very painstaking work—this employment guidance is a very important aspect. I know these bodies may be advisory and people will come to us and ask us: 'you are a Member of the Advisory Body, so please get us a job'. What are the potentialities? where are all the facilities and what is the capacity of the workers we recommend for any job? The person who is the best guide is always not there to guide. He should be a technically qualified man and he is not there for giving guidance. The person who is there is an ordinary person, who holds some general qualification. He should be properly qualified and trained person. Then only he will be in a better position to guide. Sir, Guidance is half the work. Unfortunately, we have no guidance. That is the reason why we have a large percentage of unemployment among the qualified and trained hands today. We have polytechnics all over the districts and we workmen training centres, industrial training centres and we have diploma courses. I request the Hon'ble Minister to have a survey made of the unemployed trained persons. There is the National Employment Service. They have a training lasting for 18 months and I know half a dozen of them who are unemployed. They are paid stipends and trained and after completion of training, they do not get employment. The consequence is, trained men do not get employment in proper places and production suffers. Therefore,

employment guidance is not a matter that should be left to advisory bodies but should be handled by specially trained personnel.

Thank you very much, Sir.

Mr. SPEAKER.—The names that have been sent to me are exhausted.

(Sri Gopala Salenna stood up to speak)

Mr. SPEAKER.—I had called the Hon'ble Member and he was not there. Rule 294 says:

> " If any member who is so called upon does not speak, he shall not be entitled except by the permission of the Speaker to speak on the motion at any later stage of the debate."

the Hon'ble Member please note hereafter he should not put me into that position.

ಶ್ರೀ ಎಸ್. ಗೋಪಾಲ ಸಾಲೆನ್ನ (ಮೂಡಬಿದ್ರಿ).—ಸನ್ಮಾನ್ಯ ಅಧ್ಯಕ್ಷರೇ, ಆರಂಭದಲ್ಲಿ ನಾನು ಪ್ರಥಮತಃ ಕರೆಯುವಾಗ ಈ ಸ್ಥಳದಲ್ಲಿ ಇಲ್ಲದೇ ಇದ್ದುದಕ್ಕಾಗಿ ಕ್ಷಮಾಪಣೆಯನ್ನು ಕೇಳಿ ಈ ಮಜ ದೂರು ಇಲಾಖೆಯ ಡಿಮ್ಯಾಂಡಿನಮೇಲೆ ಕೆಲವು ಮಾತುಗಳನ್ನು ಹೇಳಬೇಕೆಂದು ಬಯಸುತ್ತೇನೆ. ಸ್ವಾಮಿ ಈ ಸರ್ಕಾರ ಸ್ವಾತಂತ್ರ್ಯಗಳಿಸಿ ಕಳೆದ 17 ವರ್ಷಗಳಿಂದ ಯಾವ ಒಂದು ಮಜದೂರು ನೀತಿ ಯನ್ನು ಜಾರಿಗೆ ತಂದಿದ್ದಾರೋ ಅದು ಮಜದೂರರ ಮೇಲೆ ಆಗಲಿ, ಉತ್ಪಾದಕರ ಮೇಲೆ ಆಗಲಿ ಅಥವಾ ರಾಷ್ಟ್ರದ ಉತ್ಪಾದನೆಯ ಮೇಲೆ ಆಗಲಿ ಒಂದು ಕ್ರಮವಾಗಿ, ಶಾಸ್ತ್ರೀಯವಾದ ಪರಿಣಾ ಮವನ್ನು ತರುವಂತೆ ಮಾಡಿದ್ದು ಕಂಡುಬರುವುದಿಲ್ಲ, ನಿಮ್ಮ ಮಜದೂರು ನೀತಿಯಿಂದ ಮಜ ದೂರನಿಗೆ ಸುಖ ಇಲ್ಲ, ಮಾಲೀಕನಿಗೆ ಸುಖ ಇಲ್ಲ, ರಾಷ್ಟ್ರದ ಉತ್ಪಾದನೆಗೆ ಧಕ್ಕೆ ಬರುತ್ತಾ ಇದೆ. ಅದರಿಂದ ಪರಿಣಾಮವಾಗಿ ಜನಸಾಮಾನ್ಯರು ಈ ದಿವಸ ತಮ್ಮ ಜೀವನಾವಶ್ಯಕ ಸಾಮಗ್ರಿಗಳಿಗೆ ಒದ್ದಾಡಬೇಕಾಗಿದೆ. ಈ ಪರಿಸ್ಥಿತಿಯನ್ನು ಹೋಗಲಾಡಿಸಬೇಕಾದರೆ ರಾಜ್ಯ ಸರ್ಕಾರದ ಮಜ ದೂರು ನೀತಿಯಲ್ಲಿ ಜೀವಂತವಾದ, ಉತ್ತಮ ಸತ್‌ಕ್ರಿಯಾತ್ಮಕ ನೀತಿಯುಂಟಾಗಿ ಅದು ಉತ್ಪನ್ನ ಅಭಿವೃದ್ಧಿ ಪಡುವಂತಾಗಬೇಕು. ಆ ಮಟ್ಟಿಗೆ ತಾವು ವರ್ಷಂಪ್ರತಿ ನಿಮ್ಮ ಬಡ್ಜೆಟ್‌ನಲ್ಲಿ ಹೆಚ್ಚು ಹೆಚ್ಚು ಹಣವನ್ನು ಕೇಳುತ್ತೀರಿ, ಈ ಸಭೆ ಮಂಜೂರು ಮಾಡುತ್ತದೆ. ಆದರೆ ಎಷ್ಟು ಖರ್ಚಾಗುತ್ತದೆ, ಆ ಖರ್ಚಿಗೆ ಸರಿಯಾದ ಉತ್ಪಾದನೆ ಏಕೆ ಆಗುವುದಿಲ್ಲ ಅಂತ ಕೇಳಿ ಇಲ್ಲಿ ಸ್ಪಷ್ಟಪಡಿಸಲು ಸರಿಯಾದ ಶಕ್ತರಾಗಿಲ್ಲದಿರುವುದಕ್ಕಾಗಿ ತುಂಬಾ ಶೋಚನೀಯವಾಗುತ್ತದೆ. ಸ್ವಾಮಿ ತಾವು ಮಜದೂರರಿಗೆ ವೆಲ್‌ಫೇರ್ ಸೆಂಟರ್ಸ್‌ನ್ನು ಮಾಡಿದ್ದೀರಿ. ಮಜದೂರರನ್ನು ವಿದ್ಯಾವಂತರನ್ನಾಗಿ ಮಾಡಿ ಅವರು ಉತ್ತಮ ಎನ್‌ಲೈಟೆಡ್ ಮೆಂಬರುಗಳಾಗಿ, ರಾಷ್ಟ್ರದಲ್ಲಿ ಉತ್ಪಾದನೆ ಮಾಡಲು ಬುದ್ಧಿವಂತರಾಗಿ, ದಕ್ಷರಾಗಿ ಆಗಬೇಕೆಂದು ಹೇಳುತ್ತಾ ಇದ್ದೀರಿ. ಅಲ್ಲಿ ಜಿಲ್ಲೆಗಳಲ್ಲೆಲ್ಲಾ ಅಧಿಕಾರಿಗಳು ಇರಬಹುದು. ಸದಸ್ಯರುಗಳಿರಬಹುದು ಆದರೆ ಆ ಕೇಂದ್ರಗಳಲ್ಲಿ ಎಷ್ಟು ಸಲ ಮಂತ್ರಿಗಳು ಸ್ವತಃ ಹೋಗಿ ಸಂಚಾರ ಕಾಲದಲ್ಲಿ ದರ್ಶನಮಾಡಿ ಆ ಕೇಂದ್ರದ ಎಲ್ಲಾ ವರ್ಗಗಳ ಮಜದೂರರನ್ನೂ ಸೇರಿಸಿ ಅವರ ಹಿತಚಿಂತನೆಯ ಸಂಬಂಧವಾಗಿ ವಿವರಗಳನ್ನು ತಿಳಿದು ಅವರಿಗೆ ಹಿತವಚನವನ್ನು ಕೊಟ್ಟಿದ್ದೀರಿ ? ಅಧಿಕಾರದಲ್ಲಿ ಇರುವಂತಹ ಸ್ಥಳೀಯ ಆಫೀಸರುಗಳು ವಿಧಾನ ಸಭೆಯ ಸದಸ್ಯರು ಆಗಲಿ, ಪಾರ್ಲಿ ಮೆಂಟಿನ ಸದಸ್ಯರಾಗಲಿ, ವಿಧಾನ ಪರಿಷತ್ತಿನ ಸದಸ್ಯರಾಗಲಿ ಇನ್ನಿತರ ಎನ್‌ಲೈಟನ್ಡ್ ಸಿಟಿಜನ್ಸ್ ಆಗಲಿ ಬರಮಾಡಿಸಿ ಆ ಕೇಂದ್ರಗಳಲ್ಲಿ ಎಷ್ಟು ಸಲ ಮಜದೂರರ ಹಿತಕ್ಕೆ ಭಾಷಣಗಳನ್ನು ಮಾಡಲು ಅಥವಾ ಸಂಪರ್ಕವನ್ನು ಬೆಳೆಸಲಿಕ್ಕೆ ಏನೇನು ಕಾರ್ಯಕ್ರಮಗಳನ್ನು ತೆಗೆದುಕೊಂಡಿದ್ದಾರೆ ಮತ್ತು ಅದಕ್ಕೆ ಸರಕಾರ ಏನು ಕಾರ್ಯಕ್ರಮಗಳನ್ನು ಹಾಕಿಕೊಟ್ಟಿದ್ದೀರಿ ಎಂಬುದನ್ನು ಅವರು ಈ ಸಭೆಗೆ ಸ್ಪಷ್ಟಪಡಿಸಬೇಕು. ನಾನು ತಿಳಿದಮಟ್ಟಿಗೆ ಹಾಗೇನು ಮಾಡಿದ್ದು ಕಂಡಿಲ್ಲ.

ಶ್ರೀ ಡಿ. ದೇವರಾಜಅರಸ್.— ಮಂತ್ರಿಗಳು ಅಲ್ಲಿಗೆ ಹೋಗಿ ಭಾಷಣಮಾಡಬೇಕು ಎಂತಲೇ ಅವರ ಅಭಿಪ್ರಾಯ ?

ಶ್ರೀ ಎಸ್. ಗೋಪಾಲಸಾಲೆನ್ನ.— ಮಾನ್ಯಮಂತ್ರಿಗಳು ಭಾಷಣವನ್ನೇ ಮಾಡಬೇಕೆಂಬ ವಿಷಯವನ್ನು ನಾನು ಹೇಳುವುದಿಲ್ಲ. ಆ ಕೇಂದ್ರಗಳು ಉಪಯುಕ್ತ (Recreative) ಮತ್ತು (Educative) ಆಗಿರಬೇಕೆಂಬ ಉದ್ದೇಶದಿಂದ ಯಾವ ಯಾವ ರೀತಿಯಲ್ಲಿ ಸಾರ್ವಜನಿಕ ತಜ್ಞರನ್ನು ಆ ಕೇಂದ್ರಗಳಿಗೆ ಕರೆದುಕೊಂಡು ಹೋಗಿ ಅವರನ್ನು ಈ ಮಜದೂರು ಹಿತ ಸಂಬಂಧವಾದ ಕೇಂದ್ರಗಳಲ್ಲಿ ಉಪಯೋಗ ಮಾಡಿದ್ದಾರೆ ನಿಮ್ಮ ಆಫೀಸರುಗಳು. ನೀವು ಕಾಂಗ್ರೆಸ್ ಕಚೇರಿಗಳಿಗೆ ಎಲ್ಲೆಲ್ಲೂ ಭೇಟಿಕೊಡುವಂತೆಯೇ ಇದಕ್ಕೂ ಭೇಟಿಇತ್ತಿದ್ದೀರಿ ? ಎಂದು ಕೇಳಿದೆನೇ ವಿನಾ ಮಂತ್ರಿಗಳು ಭಾಷಣ ಮಾಡಬೇಕೆಂದು ಅಲ್ಲ ಮಂತ್ರಿಗಳೂ ಕೂಡ ತಮ್ಮ ಪಕ್ಷ ರಾಜಕೀಯ ವಿಷಯಗಳನ್ನು ಮಾತ್ರ ಮಾತನಾಡುವುದಕ್ಕೆ ಬದಲಾಗಿ ಅವರು ಯಾವ ಇಲಾಖೆಯನ್ನು ಹಿಡಿದುಕೊಂಡಿದ್ದಾರೋ ಆ ಇಲಾಖೆಗೆ ಸಂಬಂಧಪಟ್ಟ ಹಿತಾಸಕ್ತಿಗಳಿಗಾಗಿ ಭಾಷಣ ಮಾಡಿದರೆ ಆ ಜನ ಸಮುದಾಯದೊಡನೆ ಮಾತನಾಡಿದರೆ, ಅವರ ಸಂಪರ್ಕವನ್ನು ಬೆಳೆಸಿದರೆ ಆದು ತಪ್ಪಾಗುವುದಿಲ್ಲ, ಅದು ಅವರ ಕರ್ತವ್ಯ ಎಂದು ಸ್ಪಷ್ಟವಾಗಿ ಹೇಳುತ್ತೇನೆ.

ಒಂದು ಕಡೆ ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್, ಒಂದು ಕಡೆ ಡಿವಿಜನಲ್ ರಿಕ್ರೂಟ್‌ಮೆಂಟ್ ಕಮಿಟಿ, ಇನ್ನೊಂದು ಕಡೆ ಸ್ಟೇಟ್ ಲೆವಲ್ ರಿಕ್ರೂಟ್‌ಮೆಂಟ್ ಕಮಿಟಿ, ಮತ್ತೊಂದು ಕಡೆ ಪಬ್ಲಿಕ್ ಸರ್ವಿಸ್ ಕಮಿಷನ್ ಸರಕಾರಿ ಹುದ್ದೆಗಳಿಗೆ ನೇಮಕಮಾಡುವುದು ಅಲ್ಲದೆ ತಾವು ಬೇರೆ ಆಜ್ಞೆಗಳನ್ನು ಹೊರಡಿಸಿ ಸ್ಥಳೀಯ ಅಧಿಕಾರಿಗಳು ಅಲ್ಲಿಯ ಅವಶ್ಯಕತೆ ಕಂಡಂತೆ ನಿಯಾಮಕಗಳನ್ನು ಮಾಡಿಕೊಳ್ಳಿ ಎಂದು ಹೇಳಿದ್ದೀರಿ. ಹೀಗೆ ವಿವಿಧ ರೂಪದಲ್ಲಿ ಉದ್ಯೋಗಗಳಿಗೆ ನೇಮಕ ಮಾಡುವಂತಹ ಒಂದು ಪದ್ಧತಿಯಿಂದಾಗಿ ನಿರುದ್ಯೋಗಿ ವಿದ್ಯಾವಂತರಿಗೆ ಇಷ್ಟು ಕಠಿಣವಾದ ಹೊಸ ಸಮಸ್ಯೆಗಳು ಬಹಳವಾಗಿ ಉದ್ಭವಿಸಿವೆ.

Mr. SPEAKER.— What more time does the member require ?

Sri GOPALA SALENNA.— I want another fifteen minutes Sir.

Mr. SPEAKER.— He will kindly finish in 10 minutes. After him Sri Byrappaji will take 10 minutes. The Hon'ble Minister will Commence the reply at 3-20 P.M. and voting will be between 4 P.M. and 4-15 P.M.

3-00 P.M.

ಶ್ರೀ ಎಸ್. ಗೋಪಾಲಸಾಲೆನ್ನ.—ಇವುಗಳೆಲ್ಲಾಗತಕ್ಕ ಗೊಂದಲಮಯ ವಾತಾವರಣವನ್ನು ತಪ್ಪಿಸಬೇಕಾಗಿದೆ. ಈಗಾಗಲೇ ನಿರುದ್ಯೋಗಿಗಳ ಸಂಖ್ಯೆ ಬೆಳೆಯುತ್ತಿದೆ, ಎಂಪ್ಲಾಯ್‌ಮೆಂಟ್ ಎಕ್ಸ್‌ಛೇಂಜಿನಲ್ಲಿ ರಿಜಿಸ್ಟರು ಮಾಡಿಸುವವರ ಸಂಖ್ಯೆ ದಿನೇ ದಿನೇ ಹೆಚ್ಚುತ್ತಿದೆ. ಇವನ್ನು ಕಡಮೆ ಮಾಡಲು ಏಕೆ ಸರಿಯಾದ ಕಾರ್ಯಕ್ರಮ ಕೈಕೊಂಡಿಲ್ಲ ? ಈ ಎಲ್ಲಾ ಏಜನ್ಸಿಗಳಿಗೂ ಅರ್ಜಿ ಕರೆದಾಗಲೆಲ್ಲಾ ಅರ್ಜಿ ಹಾಕುವವರಿದ್ದಾರೆ. ಎರಡು-ಮೂರು ಕಡೆ ಹುದ್ದೆಗಳಲ್ಲಿ ನೇಮಕವಾಗಿ ಯಾವುದು ಉತ್ತಮವೆನಿಸುತ್ತದೊ ಅದನ್ನು ಸ್ವೀಕರಿಸಿ ಮಿಕ್ಕವುಗಳನ್ನು ಬಿಟ್ಟುಬಿಡುತ್ತಾರೆ. ಆ ಸ್ಥಾನಗಳಿಗೆ ಪುನಃ ಆಯ್ಕೆಯ ಕೆಲ್ಸ ಬಡ ಅರ್ಜಿದಾರರಿಗೆ ಪುನಃ ಕಷ್ಟ ಇದೇನನ್ಯಾಯ ? ಈಗ ಎಂಪ್ಲಾಯ್‌ಮೆಂಟ್ ಎಕ್ಸ್‌ಛೇಂಜಿನಲ್ಲಿ ಹೆಸರನ್ನು ರಿಜಿಸ್ಟರು ಮಾಡಿರುವವರನ್ನು ಸ್ಥಳೀಯ ಉಮೇದುವಾರರಾಗಿ ನೇಮಕಮಾಡಿದ ಮೇಲೆ ಅವರಲ್ಲಿ ಸಾವಿರಾರು ಜನರನ್ನು ಸರಕಾರದವರು ಹೊರ ಹಾಕುವ ಆಜ್ಞೆಮಾಡಿ ಹೊರಗೆ ಹಾಕಿದ್ದಾರೆ. ಅವರು 3-4 ವರ್ಷಗಳಿಗಿಂತಲೂ ಹೆಚ್ಚಾಗಿ ಸರ್ವಿಸ್‌ಮಾಡಿ ಅನುಭವ ಪಡೆದಿರುತ್ತಾರೆ. ಅವರಿಂದ ಆಡಳಿತಕ್ಕೆ ಹೆಚ್ಚಿನ ಪ್ರಯೋಜನವಿದೆ. ಇದನ್ನು ಗಮನಿಸಿ ಈಗಾಗಲೇ ಕಂಗಾಲಾಗಿರುವ ಅವರ ಸಮಸ್ಯೆ ಪರಿಹರಿಸಿ ಅವರಿಗೆ ನಿರುದ್ಯೋಗವಾಗದಂತೆ ನೋಡಿಕೊಳ್ಳಬೇಕು. ಅವರನ್ನು ಕೆಲಸದಿಂದ ತೆಗೆಯುವಾಗ್ಗೆ ಹೆಚ್ಚಿನವರಿಗೆ ವಯಸ್ಸಾಗಿರುವುದರಿಂದ ಅವರು ಬೇರೆ ಕಡೆ ಉದ್ಯೋಗಗಳಿಗೆ ಸೇರುವುದಕ್ಕೆ ಕೂಡಾ ಕಷ್ಟವಾಗುತ್ತದೆ. ಇಂಥ ಸಮಸ್ಯೆಯನ್ನು ಪರಿಹಾರಮಾಡಿ ಚಿಕ್ಕಪುಟ್ಟ ಹುದ್ದೆಗಳಿಗೆ ನೇಮಿಸುವ ವಿಚಾರದಲ್ಲಿ ಎಂಪ್ಲಾಯ್‌ಮೆಂಟ್ ಎಕ್ಸ್‌ಛೇಂಜಿಗೆ ಸರಿಯಾದ ಸ್ಟೇಟಸ್ ಕೊಡಬೇಕ . ಅಲ್ಲಿಂದ ಬಂದವರಿಗೆಲ್ಲಾ ಅವರವರ ಹುದ್ದೆಗಳಲ್ಲೇ ನೌಕರಿಯನ್ನು ಮುಂದುವರಿಸುವ ಅವಕಾಶ ಮಾಡಿಕೊಡಬೇಕು. ಹೀಗೆ ನೇಮಕ ಮಾಡುವಲ್ಲದುದಕ್ಕೆ ಇದನ್ನು ಸ್ಟೇಟ್ ಲೆವಲ್ ರೆಕ್ರೂಟ್‌ಮೆಂಟ್ ಕಮಿಟಿ, ಡಿವಿಜನಲ್ ಲೆವಲ್ ರಿಕ್ರೂಟ್‌ಮೆಂಟ್ ಕಮಿಟಿ ಮತ್ತು ಪಬ್ಲಿಕ್ ಸರ್ವಿಸ್ ಕಮೀಷನ್ ವಿವರವಾಗಿ ಪರ್ಯಾಲೋಚಿಸಬೇಕು. ಅದರಲ್ಲೂ ಮುಖ್ಯವಾಗಿ ಷೆಡ್ಯೂಲ್ಡ್‌ಕ್ಯಾಸ್ಟ್ ಮತ್ತು ಷೆಡ್ಯೂಲ್ಡ್ ಟ್ರೈಬ್ಸ್‌ನವರಿಗೆ ಇದ

ರಿಂದಾಗಿ ಹೆಚ್ಚು ಧಕ್ಕೆಯಾಗಿದೆ ಎಂದು ಸ್ಪಷ್ಟವಾಗಿ ಹೇಳಬೇಕಾಗಿದೆ. ಯಾವ ಇಲಾಖೆಯಲ್ಲೂ ಅವರ ಹಕ್ಕು ಶೇಕಡ 18% ಮೂರ್ತಿಯಾಗಿಲ್ಲ. ಸರಕಾರ ಈ ಕಡೆ ಹೆಚ್ಚು ಗಮನಕೊಡಬೇಕು, ಕಾದಿರುವ ಅಂಕಿ-ಸಂಖ್ಯೆಗಳು ಪುಸ್ತಕದ ಬದನೆಕಾಯಿಯಾಗಬಾರದು. ಇದರಿಂದ ಬಹಳ ಜನರು ನಿರುದ್ಯೋಗಿಗಳಾಗುವುದಕ್ಕೆ ಅವಕಾಶದಿದೆ. ಈ ಬಗ್ಗೆ ಸರಕಾರದ ಕಡೆ ಪದೇಪದೇ ಮನವಿಗಳು ಬರುತ್ತಿರುವುದರಿಂದ ನಾನೂ ಎಲ್ಲಾ ಇಲಾಖೆಗಳ ಮಂತ್ರಿಗಳಿಗೂ ಬರೆದಿದ್ದೇನೆ. ಸರಕಾರ ಇತ್ತ ಕಡೆ ನಿಗಾ ಕೊಡಬೇಕಾಗಿದೆ ಮತ್ತು ಈ ಸಮಸ್ಯೆಯನ್ನು ಈಗಾಗಲೇ ಪರಿಹಾರ ಮಾಡುವುದಕ್ಕೆ ತಕ್ಕ ಪ್ರಯತ್ನ ಆಗಲೇಬೇಕು. ಅವರನ್ನು ಮುಂದುವರಿಸಿ ಹುದ್ದೆಯಲ್ಲಿರುವಂತೆ ಬೇಗ ಪರಿಹಾರ ಮಾಡಬೇಕು. ಇನ್ನೊಂದು, ಎಂಪ್ಲಾಯ್‌ಮೆಂಟ್ ಎಕ್ಸ್‌ಛೇಂಜುಗಳಲ್ಲಿ 3 ತಿಂಗಳಿಗೊಂದು ಸಲ ಅಥವಾ 2 ತಿಂಗಳಿಗೊಂದು ಸಲ ಹೆಸರನ್ನು ರಿಜಿಸ್ಟರು ಮಾಡಿಸಿದ ಮೇಲೆ ರೀನ್ಯೂ ಮಾಡಬೇಕು. ಕಾರಣಾಂತರದಿಂದ ಯಾರೊಬ್ಬರು ಅದಕ್ಕೆ ತಪ್ಪಿದಲ್ಲಿ ಆ ನಂತರ ಹೊಸಬನಾಗುತ್ತಾನೆ. ಹಾಗೆ ಮಾಡಿದ ಮೇಲೆ ಹೊಸ ಕ್ಯಾಂಡಿಡೇಟ್ ಎಂದು 2 ವರ್ಷ ಅಥವ 3 ವರ್ಷ ಪುನಃ ಕಾಯಬೇಕಾಗುವ ಸಂಭವಗಳು ಬಹಳ ಇವೆ. ಬಡ ಹಾಗೂ ಅಜ್ಞಾನ ಕುಟುಂಬದ ಅಭ್ಯರ್ಥಿಗಳು ಇದರಲ್ಲಿ ಸಿಕ್ಕಿಬಿದ್ದು ಕಷ್ಟಪಡುವುದು ಜಾಸ್ತಿ. ಈಗಿರುವ ಯೋಜನೆಯ ಪ್ರಕಾರ ಲೇಬರ್ ಕಾಲೋನಿಗಳನ್ನು ಒಂದು ಕಡೆ ರಿಜಿಸ್ಟರು ಮಾಡಿದ್ದ ಕಾರಣಾಂತರದಿಂದ ಅದನ್ನು ರೀನ್ಯೂಮಾಡಲು ಅವಕಾಶವಾಗದೆ ಹೋದರೆ ಎರಡನೆಯ ಸಲ ರಿಜಿಸ್ಟರು ಮಾಡಿದರೆ ಪುನಃ ಜಾಗ್ರತೆ ಉದ್ಯೋಗ ದೊರೆಯಲು ಬಹಳ ಸಮಯ ಕಷ್ಟವಾಗುತ್ತದೆಂಬುದು ಪರಿಶೀಲಿಸಿ ಇದನ್ನು ಸರಿಪಡಿಸುವಂತಾಗಬೇಕು.

[MR. B. V. MAGAVI in the Chair]

ಈಗ ಕಾರ್ಮಿಕ ಸಚಿವರ ಅಧೀನದಲ್ಲಿ ಹೌಸಿಂಗ್‌ಬೋರ್ಡ್ ಇದೆ, ಮನೆಗಳಿಗೆ ಸಾಲ ಮತ್ತು ಸಹಾಯಮಾಡುತ್ತಿದೆ. ಪ್ರತಿಯೊಂದು ಕಾರ್ಖಾನೆಯಲ್ಲೂ ಲೇಬರ್ ಜಾಸ್ತಿಯಿರುವ ಕಡೆ ಅದಷ್ಟು ಹೆಚ್ಚು ಮನೆಗಳನ್ನು ಸರಕಾರದವರು ಕಟ್ಟಿಸಿ ಲೇಬರ್ ಕಾಲೋನಿಗಳನ್ನು ಮಾಡಬೇಕು. ಮಾಡಿ ಎಲ್ಲಾ ಕನಿಷ್ಟ ಸವಲತ್ತುಗಳಿರುವಂತೆ ಕಾರ್ಮಿಕರಿಗೆ ಮನೆಗಳನ್ನೊದಗಿಸಬೇಕು.

ಕನಿಷ್ಟವೇತನದ ವಿಚಾರವನ್ನು ಸರಕಾರಕ್ಕೆ ಪದೇಪದೇ ಹೇಳಲಾಗುತ್ತಿದೆ, ಕಷ್ಟಜೀವಿಗಳಾದ ಕೂಲಿಗಾರರಿಗೆ ಲಿವಿಂಗ್ ವೇಜಸ್ ಸಿಕ್ಕಲೇಬೇಕಾಗಿದೆ. ಇದು ಅಂತರಾಷ್ಟ್ರೀಯವಾಗಿ ಒಪ್ಪಿಕೊಂಡ ನೀತಿ ಮುಖ್ಯವಾಗಿ ಬೇಸಾಯದ ಕೆಲಸಗಾರರಿಗೆ ಸರಿಯಾದ ಕೂಲಿ ದೊರೆಯುತ್ತಿಲ್ಲ, ಅವರಿಗೆ ಈಗೇನು ಉತ್ಪತ್ತಿಯಿದೆ ಎಂಬುದನ್ನು ವಿಮರ್ಶೆಮಾಡಲೇ ಬೇಕು. ಈಗ ಸರಕಾರ ನಡೆಸುವ ಹಲವು ಬೇಸಾಯ ಕೇಂದ್ರಗಳ ಕೆಲಸವೇ ತೆಗೆದುಕೊಳ್ಳಿ, ಅಗ್ರಿಕಲ್ಚರ್‌ಲ್ ರಿಸರ್ವ ಸ್ಟೇಷನ್‌ನಲ್ಲಿ ಹೆಂಗಸರಿಗೆ ದಿನಕ್ಕೆ ಒಂದು ರೂಪಾಯಿ ಎರಡಾಣೆ, ಗಂಡಸರಿಗೆ ಒಂದು ರೂಪಾಯಿ ಎಂಟಾಣೆ ಕೂಲಿ ಕೊಡುತ್ತಿದ್ದಾರೆ. ಅದೇ ಸ್ಥಳದಲ್ಲಿ ಬೇರೆಯವರು ದಿನ ಮಜೂರಿಯಿಂದ 3 ರಿಂದ ಮೂರುವರೆ ರೂಪಾಯಿ ದಿನಗೂಲಿ ಸಂಪಾದಿಸಿಕೊಳ್ಳುವಾಗ ಸರಕಾರವೇ ಈ ರೀತಿ ಕಡಮೆ ಕೂಲಿ ಕೊಡುವುದಾದರೆ ಅವರ ಜೀವನದ ಗತಿಯೇನು ? ಸರಕಾರ ರಾಷ್ಟ್ರದಲ್ಲಿ ಯಾವಾಗಲೂ ಒಂದು ಮಾದರಿ ಧಣಿ (Employee) ಆಗಿರಬೇಕು. ಸರಕಾರವೇ ಅಗ್ರಿಕಲ್ಚರಲ್ ಲೇಬರ್‌ಗೆ ಒಂದು ರೂಪಾಯಿ ಎರಡಾಣೆ, ಒಂದು ರೂಪಾಯಿ ಎಂಟಾಣೆ ಕೊಡುವುದಾದರೆ ಸರಕಾರ ಕಾಯಿದೆ ಮಾಡಿ ಉಳಿದವರಿಗೆ ನೀವು ಜಾಸ್ತಿ ಕೊಡಬೇಕೆಂದು ಹೇಗೆ ಹೇಳಲು ಸಾಧ್ಯ? ಮತ್ತು ಅದಕ್ಕೆ ನೈತಿಕ ಮೌಲ್ಯವೇನಿರುತ್ತದೆ.

ಇನ್ನು ಮುನಿಸಿಪಲ್ ಮತ್ತು ಲೋಕಲ್‌ಬೋರ್ಡ್ ಎಂಪ್ಲಾಯಿಗಳಿಗೆ ಸರಿಯಾದ ಗೌರವ ದೊರೆತಿಲ್ಲ, ಅವರ ಹಿತರಕ್ಷಣೆ ಸಾಕಷ್ಟು ಗಮನಕೊಟ್ಟಿಲ್ಲ. ಸ್ಕ್ಯಾವೆಂಜರ್ ಮಾಡುವಂಥ ಕೆಲಸಗಳನ್ನ ಮುಖ್ಯವಾಗಿ ಮಯಿಲೇ (night soil) ತೆಗೆಯುವ ಹಾಗೂ ಹೊರುವ ಕೆಲಸಗಳನ್ನು ಆದಷ್ಟು ಮಟ್ಟಿಗೆ ಕಡಮೆಮಾಡಬೇಕು, ಮಾನವೀ ವರ್ಗದ ಅವರು ತಲೆಯಮೇಲೆ ಹೊರ ಬಾರದ್ದನ್ನು ಹೊತ್ತುಕೊಂಡು ಹೋಗುವುದನ್ನು ತಪ್ಪಿಸಿ ಸ್ವತಂತ್ರ ಜನಾಂಗದಲ್ಲಿ ಅದಕ್ಕೆ ಅವಕಾಶವಿಲ್ಲದಂತೆ ಲೇಬರ್ ಇಲಾಖೆ ಸರಿಯಾದ ಕಾಯಿದೆ ಕಲ್ಪಿಸಿ ಜಾರಿ ಮಾಡಬೇಕು. ಕಡ್ಡಾಯವಾಗಿ ಅವರನ್ನು ಈಗ ಮಾಡುತ್ತಿರುವ ಹೀನ ಕೆಲಸದಿಂದ ತಪ್ಪಿಸಬೇಕು. ಇಲ್ಲವಾದರೆ ನಮಗೆ ಮಾನವಗೌರವ ದೊರೆಯಲಾರದು. ಈಗ ಮಾಡುತ್ತಿರುವುದು ರಾಜ್ಯದ ಗೌರವಕ್ಕೆ ಹಾಗೂ ಭಾರತದ ಹೆಮ್ಮೆಗೆ ಬಹಳ ಕುಂದಕ ತರುವುದರಿಂದ ಅದನ್ನೂ ಶೀಘ್ರ ತಪ್ಪಿಸಿ ಸುಧಾರಿಸಬೇಕು.

ಟೆಕ್ನಿಕಲ್ ಟ್ರೈನಿಂಗ್ ವಿಚಾರದಲ್ಲಿ ಒಂದೆರಡು ಮಾತು. ಅಲ್ಲಲ್ಲಿ ಉತ್ತಮ ವಿದ್ಯಾವಂತರು ಓದುಬರಹ ಬರುವ ತಜ್ಞರೂ ಆದ ಯುವಕರು ಇರುತ್ತಾರೆ. ಅವರಿಗೆ ಕೂಡ ಅಲ್ಲಲ್ಲಿ ಸಣ್ಣಸಣ್ಣ ಕೈಗಾರಿಕೆಗಳಿರುವ ಕಡೆಗಳಲ್ಲಿ ಇರುವ ವರ್ಕ್‌ಷಾಪುಗಳಲ್ಲಿ ತರಬೇತುಮಾಡಿ ಅವರನ್ನು ಸಣ್ಣ

(ಶ್ರೀ ಗೋಪಾಲ ಸಾಲೆನ್ನ)

ರೀತಿಯ ತಾಂತ್ರಿಕ ಅಭಿವೃದ್ಧಿಸ್ಥಿತಿಗೆ ತರಬೇಕೆಂಬುದಕ್ಕೆ ಈ ಸಮಯದಲ್ಲಿ ಸರಕಾರದ ಗಮನ ಸೆಳೆಯುತ್ತೇನೆ. ಇವರಿಗೆ ಕೂಡ ವಿದ್ಯಾರ್ಥಿವೇತನ ಕೊಟ್ಟು ಈ ಯುವಜನ ಶಕ್ತಿಯನ್ನು ಉಪಯೋಗಿಸಬೇಕೆಂದು ಯಾವತ್ತಿನತನಕ ಲೇಬರ್ ನೀತಿ ಆಡಳಿತ ಪರಿಣಾಮಕಾರಿಯಾಗಿ ಕಾರ್ಯಗತವಾಗಿ ಲೇಬರ್, ಮಾಲೀಕರು ಮತ್ತು ಸರಕಾರಗಳಿಗೆ ಹೆಚ್ಚಿನ ಉತ್ಪಾದನಕಾರ್ಯದಲ್ಲಿ ಸಹಾಯಕವಾಗುವಂತಿರುವುದಿಲ್ಲವೋ ಅಲ್ಲಿಯವರೆಗೆ ರಾಜ್ಯದ ಹಾಗೂ ರಾಷ್ಟ್ರದ ಉತ್ಪತ್ತಿಯಲ್ಲಿ ಸುಧಾರಣೆಯಾಗುವುದಿಲ್ಲ. ಈ ಕಡೆ ಸರಕಾರ ಹೆಚ್ಚು ಗಮನಕೊಡಬೇಕೆಂದಷ್ಟು ಹೇಳಿ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಭಾಷಣವನ್ನು ಮುಗಿಸುತ್ತೇನೆ.

† ಶ್ರೀ ಬಿ. ಬೈರಪ್ಪಾಜಿ (ತುರುವೇಕೆರೆ).—ಮಾನ್ಯ ಸಭಾಪತಿಯವರೇ, ನಮ್ಮ ಮುಂದಿರುವ ಲೇಬರ್ ಮತ್ತು ಎಂಪ್ಲಾಯ್‌ಮೆಂಟ್ ಡಿಮ್ಯಾಂಡಿನಮೇಲೆ ಈಗಾಗಲೆ ಅನೇಕ ಮಾನ್ಯ ಸದಸ್ಯರು ಅನೇಕ ಅತ್ಯುತ್ತಮವಾದ ಸಲಹೆಗಳನ್ನು ನೀಡಿದ್ದಾರೆ. ನಮ್ಮ ಕಾರ್ಮಿಕವರ್ಗದ ಸ್ಥಿತಿ ನಮಗೆ ಸ್ವಾತಂತ್ರ್ಯ ಬಂದು 17 ವರ್ಷಗಳಾಗ್ದಿರೂ ಕೂಡ ಉತ್ತಮವಾಗಿಲ್ಲ—ಎಂದು ಈ ಸಂದರ್ಭದಲ್ಲಿ ಹೇಳಲು ಇಷ್ಟಪಡುತ್ತೇನೆ. ಅನೇಕ ಕಾರ್ಖಾನೆಗಳಲ್ಲಿ ನೌಕರವರ್ಗ ಮತ್ತು ಕಾರ್ಮಿಕವರ್ಗವೇನಿದೆ ಅದಕ್ಕೂ ಮತ್ತು ಆಡಳಿತವರ್ಗಕ್ಕೂ ಸಾಮರಸ್ಯವಿಲ್ಲದೆ ದೇಶದಲ್ಲಿ ಅಗತ್ಯವಾದ ಉತ್ಪಾದನಾ ವ್ಯವಸ್ಥೆ ಕುಂಠಿತವಾಗುತ್ತಿದೆ ಎಂದು ಈ ಸಂದರ್ಭದಲ್ಲಿ ಹೇಳಬೇಕಾಗುತ್ತದೆ. ಉದಾಹರಣೆಗೆ ಮಂಡ್ಯ ಸಕ್ಕರೆ ಕಾರ್ಖಾನೆಯಲ್ಲಿ ಆಡಳಿತವರ್ಗ ಹಾಗೂ ಕಾರ್ಮಿಕವರ್ಗಕ್ಕಿರಬೇಕಾದ ಒಂದು ಸಾಮರಸ್ಯವಿಲ್ಲದೆ ಮತ್ತು ಆಡಳಿತದಲ್ಲಿ ಪದೇ ಪದೇ ಇಂಟರ್‌ಫಿಯರ್ ಆಗುತ್ತಾ ಇರುವುದರಿಂದ ಮತ್ತು ವ್ಯವಹಾರದಲ್ಲಿ ಕೈಹಾಕುತ್ತಾ ಇರುವುದರಿಂದ ಕಾರ್ಖಾನೆ ಯಾವರೀತಿಯಲ್ಲೂ ಉತ್ತಮವಾಗಿ ನಡೆಯುವುದಕ್ಕೆ ಅವಕಾಶವಾಗುತ್ತಿಲ್ಲ.
ಈ ರೀತಿ ಆಗುತ್ತ ಹೋದರೆ ದೇಶದಲ್ಲಿನ ಉತ್ಪಾದನಾ ಶಕ್ತಿ ಕಡಮೆಯಾಗುವುದಕ್ಕೆ ಅವಕಾಶವಾಗುತ್ತದೆ. ಕಾರ್ಖಾನೆಗಳಲ್ಲಿ ಕೂಲಿಕಾರರಿಗೂ ಸಂಸ್ಥೆಗಳಿಗೂ ಸಾಮರಸ್ಯವನ್ನು ತರುವುದಕ್ಕೆ ಹೊಂದಾಣಿಕೆಯನ್ನು ತರುವುದಕ್ಕೆ ಕಾರ್ಮಿಕ ಇಲಾಖೆ ವ್ಯವಸ್ಥಿತವಾದ ಕಾರ್ಯವನ್ನು ನಡೆಸಿದರೆ ಉತ್ತಮವಾಗುತ್ತದೆ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಸಣ್ಣ ಸಣ್ಣ ಕೈಗಾರಿಕಾ ಸಂಸ್ಥೆಗಳಲ್ಲಿ ಉದಾಹರಣೆಗೆ ಬೀಡಿ ಕಟ್ಟುವ ಕೈಗಾರಿಕೆ ಹಾಗೂ ವ್ಯವಸಾಯ ಕೂಲಿಗಾರರು ಸಂಘ ಸಂಸ್ಥೆಗಳನ್ನು ಕಟ್ಟುವುದಕ್ಕೆ ಅವಕಾಶವನ್ನು ಮಾಲೀಕರುಗಳು ಕೊಡುತ್ತಿಲ್ಲ. ಕಾರಣ ಅವರು ಸಂಘವನ್ನು ಕಟ್ಟಿದರೆ ತಮ್ಮ ಆದಾಯಕ್ಕೆ ಚ್ಯುತಿ ಬರುತ್ತದೆ, ಅವರಿಗೆ ಸಲ್ಲಬೇಕಾದ ಸೌಲಭ್ಯಗಳೆಲ್ಲವನ್ನೂ ಕೇಳಲು ಪ್ರಯತ್ನಮಾಡುತ್ತಾರೆ ಎಂದು. ಆ ದೃಷ್ಟಿಯಿಂದ ಕೂಲಿಕಾರರಲ್ಲಿ ಎರಡು ಪಂಗಡಗಳನ್ನು ಮಾಲೀಕರು ಮಾಡಿ ಅವರಲ್ಲಿ ಭಿನ್ನಾಭಿಪ್ರಾಯವನ್ನು ಹುಟ್ಟಿಸುವುದಕ್ಕೆ ಅನೇಕ ರೀತಿಯಿಂದ ಬಂಡವಾಳಗಾರರು ಕೆಲಸ ಮಾಡುತ್ತಿದ್ದಾರೆ. ಇದು ಇಲಾಖೆಯವರಿಗೆ ಗೊತ್ತಿದ್ದರೂ ಕೂಡ ಅದನ್ನು ಸರಿಪಡಿಸಿ ಒಂದೇ ಒಂದು ಕೂಲಿಕಾರರ ಸಂಘವನ್ನು ಸ್ಥಾಪನೆ ಮಾಡುವುದಕ್ಕಾಗಲೀ, ಅಥವಾ ಸಂಘವನ್ನು ಸ್ಥಾಪನೆ ಮಾಡತಕ್ಕ ಕೂಲಿಕಾರರಿಗೆ ನೆರವು ಕೊಡುವುದಕ್ಕಾಗಲೀ ಇಲಾಖೆ ಮುಂದೆ ಬರುತ್ತಿಲ್ಲ. ಅನೇಕ ಕಡೆಗಳಲ್ಲಿ ಬೀಡಿ ಕಟ್ಟತಕ್ಕ ಕೂಲಿಕಾರರು ಸಾವಿರಾರು ಜನ ಇದ್ದರೂ ಕೂಡ ಅವರ ಹಿತರಕ್ಷಣೆ ಮಾಡತಕ್ಕ ಜವಾಬ್ದಾರಿಯನ್ನು ಸರ್ಕಾರ ಇಲ್ಲವೇ ಇಲಾಖೆ ಸರಿಯಾದ ರೀತಿ ನೋಡಿಕೊಳ್ಳುತ್ತಿಲ್ಲ ಎಂದು ನಾನಾದರೂ ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ವ್ಯವಸಾಯ ಕಾರ್ಮಿಕರ ಸ್ಥಿತಿ ಏನಿದೆ ಅದನ್ನು ಕೂಡ ಉತ್ತಮಪಡಿಸಬೇಕಾದ್ದು ಮುಖ್ಯ. ಇಂದಿನ ಸ್ಥಿತಿಯಲ್ಲಿ ಕೂಲಿಯಿಂದ ಜೀವನ ಮಾಡತಕ್ಕ ವ್ಯವಸಾಯ ಕೂಲಿಗಾರನಿಗೆ ಗಂಡಾಳಿಗೆ ಒಂದು ದಿನಕ್ಕೆ ಒಂದರಿಂದ ಒಂದೂವರೆ ರೂಪಾಯಿ ಮತ್ತು ಹೆಣ್ಣಾಳಿಗೆ ಹನ್ನೆರಡಾಣೆಯಿಂದ ಒಂದು ರೂಪಾಯಿತನಕ ಕೊಡುತ್ತಿದ್ದಾರೆ. ಇದರಿಂದ ಅವನಿಗೆ ಇರತಕ್ಕ ಸಂಸಾರವನ್ನು, ಮಕ್ಕಳು ಮರಿಯನ್ನು ಸಾಕಿ ಈ ಸುಖೀ ರಾಜ್ಯದಲ್ಲಿ ಅವನು ಬಾಳಬೇಕು ಎಂದರೆ ಮಾನವೀಯತೆಯ ಅರಿವು ಸರ್ಕಾರಕ್ಕೆ ಆಗಿದೆಯೇ ಎಂದು ಕೇಳಬೇಕಾಗುತ್ತದೆ. ಅವರ ಸ್ಥಿತಿಯನ್ನು ಉತ್ತಮಪಡಿಸುವುದಕ್ಕೆ ವ್ಯವಸಾಯ ಕೆಲಸಗಾರರ ಕೂಲಿಯ ದರವನ್ನು ಪುನರ್ವಿಮರ್ಶೆ ಮಾಡಿ ಅವರಿಗೂ ಅನುಕೂಲ ಮಾಡಿಕೊಡಬೇಕಾದ್ದು ಸರ್ಕಾರದ ಮತ್ತು ಇಲಾಖೆಯ ಕರ್ತವ್ಯ. ಈ ದಿಸೆಯಲ್ಲಿ ಸರ್ಕಾರ ವ್ಯವಸಾಯ ಕೂಲಿಕಾರರಿಗೆ ಸಲ್ಲತಕ್ಕ ಸೌಲಭ್ಯಗಳನ್ನು ಒದಗಿಸಿಕೊಡಬೇಕೆಂದು ಹೇಳುತ್ತೇನೆ.

ಎಂಪ್ಲಾಯ್‌ಮೆಂಟ್ ವಿಷಯ. ಇದಕ್ಕಾಗಿ ಸರ್ಕಾರ ಅನೇಕ ಸಂಸ್ಥೆಗಳನ್ನು ಪ್ರಾರಂಭ ಮಾಡಿದೆ. ಒಂದು ಪಬ್ಲಿಕ್ ಸರ್ವಿಸ್ ಕಮಿಷನ್, ಎರಡನೆಯದು ರಾಜ್ಯಮಟ್ಟದ ರಿಕ್ರೂಟ್‌ಮೆಂಟ್ ಕಮಿಟಿ, ಮೂರನೆಯದು ಡಿವಿಷನಲ್ ಮಟ್ಟದ ರಿಕ್ರೂಟ್‌ಮೆಂಟ್ ಕಮಿಟಿ, ನಾಲ್ಕನೆಯದು ಜಿಲ್ಲಾ

ಮಟ್ಟದ ಎಂಪ್ಲಾಯಮೆಂಟ್ ಎಕ್ಸ್‌ಛೇಂಜ್. ಈ ರೀತಿ ನಾನಾ ಸಂಸ್ಥೆಗಳನ್ನು ಪ್ರಾರಂಭ ಮಾಡಿ ಯಾವ ಸಂಸ್ಥೆಗೂ ಕೂಡ ವ್ಯವಸ್ಥಿತವಾದ ರೀತಿಯಲ್ಲಿ ಉತ್ತಮವಾದ ರೀತಿಯಲ್ಲಿ ಕೆಲಸಮಾಡುವುದಕ್ಕೆ ಅವಕಾಶವನ್ನು ಮಾಡಿಕೊಟ್ಟಿಲ್ಲ. ಆದಕ್ಕೆ ಕಾರಣ ವಿಷ್ಟೆ. ಡಿವಿಜನಲ್ ಲೆವಲ್ ರಿಕ್ರೂಟ್‌ಮೆಂಟ್ ಕಮಿಟಿ ಹಾಗೂ ಸ್ಟೇಟ್ ಲೆವಲ್ ಡಿಕ್ರೂಟ್‌ಮೆಂಟ್ ಕಮಿಟಿ ಮತ್ತು ಜಿಲ್ಲಾ ಮಟ್ಟದ ಕಮಿಟಿ, ಈ ಮೂರು ಸಂಸ್ಥೆಗಳೂ ಮಾಡುವ ಕಾರ್ಯ ಒಂದೇ ಆಗಿರುವುದರಿಂದ ಅವರು ಮೂರನೇ ದರ್ಜೆ ನೌಕರರನ್ನು ಆರಿಸಿಕೊಳ್ಳುವುದಕ್ಕೆ ನಿಯಮಗಳನ್ನು ಇಟ್ಟುಕೊಂಡಿದ್ದಾರೆ? ಆ ಪ್ರಕಾರವಾಗಿ ಜನರನ್ನು ಆರಿಸಿಕೊಳ್ಳುತ್ತಾರೆ. ರಾಜ್ಯ ಮಟ್ಟದಲ್ಲಿ ಕೂಡ ಇದೇ ಕೆಲಸವನ್ನು ಮಾಡುತ್ತಿದ್ದಾರೆ. ಹಾಗೆಯೇ ಜಿಲ್ಲಾ ಮಟ್ಟದಲ್ಲಿ ಮತ್ತು ಡಿವಿಜನ್ ಮಟ್ಟದಲ್ಲಿ ಕೆಲಸಮಾಡುತ್ತಿದ್ದಾರೆ. ಇದರಿಂದ ಸರ್ಕಾರಕ್ಕೆ ಖರ್ಚು ಒಂದಕ್ಕೆ ನಾಲ್ಕರಷ್ಟು ಆಗುತ್ತಿದೆಯೇ ವಿನಾ ಮತ್ತೆ ಏನೂ ಪ್ರಯೋಜನ ಆಗುತ್ತಿಲ್ಲ. ಈ ಕಾರ್ಯವನ್ನು ಒಂದೇ ಒಂದು ಏಜೆನ್ಸಿಯ ಮೂಲಕ ಮಾಡಬೇಕಾಗಿತ್ತು. ಅದಕ್ಕೆ ಬದಲಾಗಿ ಮೂರು ಏಜೆನ್ಸಿಯನ್ನು ಮಾಡಿರುವುದು ಒಳ್ಳೆಯ ಮಾರ್ಗವಲ್ಲ ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಜಿಲ್ಲಾ ಮಟ್ಟದಲ್ಲಿರುವ ಸಂಸ್ಥೆ ಇರಲಿ, ಹಾಗೂ ರಾಜ್ಯ ಮಟ್ಟದಲ್ಲಿರುವ ಸಂಸ್ಥೆ ಇರಲಿ. ಮಧ್ಯೆ ಇರತಕ್ಕ ಡಿವಿಜನಲ್ ರಿಕ್ರೂಟ್‌ಮೆಂಟ್ ಕಮಿಟಿ ಏನಿವೆ ಅದರ ಕಾರ್ಯವನ್ನು ಈ ಎರಡೂ ಸಂಸ್ಥೆಗಳಿಗೆ ವಹಿಸಿ ಅನ್ಯಾಯವಾಗಿ ಯಾವ ಪ್ರತಿಫಲವೂ ಇಲ್ಲದೆ ಖರ್ಚಾಗತಕ್ಕ ಪೋಲುಮಾಡುವ ರೀತಿಯ ಸಂಸ್ಥೆಯನ್ನು ರದ್ದುಮಾಡಿ ಅದೇ ಕೆಲಸವನ್ನು ರಾಜ್ಯಮಟ್ಟದ ಕಮಿಟಿಗೂ ಜಿಲ್ಲಾಮಟ್ಟದ ಕಮಿಟಿಗೂ ವರ್ಗಾಯಿಸಬೇಕು ಎಂದು ಈ ಸಂದರ್ಭದಲ್ಲಿ ಸರ್ಕಾರಕ್ಕೆ ಸೂಚನೆ ಮಾಡುತ್ತೇನೆ.

ಪಬ್ಲಿಕ್ ಸರ್ವಿಸ್ ಕಮಿಷನ್‌ನಲ್ಲಿ ದಿನೇ ದಿನೇ ಸದಸ್ಯರ ಸಂಖ್ಯೆಯನ್ನು ಸರ್ಕಾರ ಏರಿಸಿಕೊಂಡು ಹೋಗುತ್ತಿದೆ. ಇದರಲ್ಲಿರುವ ಸಂಖ್ಯೆಯನ್ನು ಕಡಿಮೆ ಮಾಡಿ, ಆದರ ಖರ್ಚನ್ನು ಕಡಮೆ ಮಾಡಬೇಕು. ಅದರ ಕಾರ್ಯರಂಗದಲ್ಲಿ ದಿನನಿತ್ಯದ ಕೆಲಸ ಬಹಳ ಕಡಮೆ ಆಗಿದೆ. ಈಗ ರಾಜ್ಯಮಟ್ಟದಲ್ಲಿ, ಡಿವಿಜನಲ್ ಮಟ್ಟದಲ್ಲಿ ಹಾಗೂ ಜಿಲ್ಲಾ ಮಟ್ಟದಲ್ಲಿ ರಿಕ್ರೂಟ್‌ಮೆಂಟ್ ಕಮಿಟಿಗಳಿರುವುದರಿಂದ ಪಬ್ಲಿಕ್ ಸರ್ವಿಸ್ ಕಮಿಷನ್ ಕಾರ್ಯ ಕ್ಷೇತ್ರ ಬಹಳ ಕಡಮೆಯಾಗಿದೆ. ಆದ್ದರಿಂದ ಪಬ್ಲಿಕ್ ಸರ್ವಿಸ್ ಕಮಿಷನ್ನಿಗೆ ಆಗತಕ್ಕ ಖರ್ಚನ್ನೂ ಕೂಡ ಕಡಮೆಮಾಡಬಹುದು ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇವೆ.

ಜಿಲ್ಲಾಮಟ್ಟದಲ್ಲಿ ಒಂದು ಕಡೆ ಒಬ್ಬ ಅಧಿಕಾರಿ ಇದ್ದಾರೆ. ಅವರಿಗೆ ಜಿಲ್ಲೆಯಲ್ಲಿನ ಜನ ಮಾತನಾಡತಕ್ಕ ಭಾಷೆ ಬರುವುದಿಲ್ಲ. ನೂರಕ್ಕೆ 95 ಜನ ಕನ್ನಡ ಮಾತನಾಡುವವರಿದ್ದರೂ ಕೂಡ ಮದ್ರಾಸಿನಿಂದ ಒಬ್ಬ ಅಧಿಕಾರಿಯನ್ನು ತಂದು ಆ ಜಾಗಕ್ಕೆ ಹಾಕಿದ್ದಾರೆ. ಹೀಗಾದರೆ ಅವರಿಗೆ ಆ ಜಿಲ್ಲೆಯ ಜನತೆಯ ಅರಿವು ಏನಿರುತ್ತದೆ, ಆ ಜನತೆಯ ಕೆಲಸವನ್ನು ಮಾಡುವುದಕ್ಕೆ ಅವರಿಗೆ ಶಕ್ತಿ ಇದೆಯೇ ಎನ್ನುವುದನ್ನು ಸರ್ಕಾರ ಸ್ವಲ್ಪ ಯೋಚನೆ ಮಾಡಬೇಕಾಗಿದೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ತುಮಕೂರು ಜಿಲ್ಲೆಯಲ್ಲಿರುವ ಜಿಲ್ಲಾಧಿಕಾರಿಗಳಿಗೆ ಕನ್ನಡವೇ ಬರುವುದಿಲ್ಲ. ಅದನ್ನು ಹೇಳಿ.

ಶ್ರೀ ಬಿ. ಬೈರಪ್ಪಾಜಿ.—ಜಿಲ್ಲಾಧಿಕಾರಿಗಳನ್ನು ಕೂಡ ಆಯಾ ಜಿಲ್ಲೆಯಲ್ಲಿ ಮಾತನಾಡುವ ಭಾಷೆ ಬಲ್ಲವರನ್ನು ನೇಮಿಸುವುದು ಉತ್ತಮ. ಹಾಗೇಯೆ ಎಂಪ್ಲಾಯ್‌ಮೆಂಟ್ ಎಕ್ಸ್‌ಛೇಂಜಿನಲ್ಲಿ ಕೂಡ ಅಧಿಕಾರಿಗಳನ್ನು ನೇಮಿಸುವಾಗ ಮದ್ರಾಸಿನಿಂದ ಬಂದವರನ್ನೋ. ಬೊಂಬಾಯಿನಿಂದ ಬಂದವರನ್ನೋ ನೇಮಿಸಿದರೆ ಆ ಕಾರ್ಯ ಕ್ಷೇತ್ರದಲ್ಲಿ ಕೆಲಸ ಸುಗಮವಾಗಿ ಆಗುವುದಕ್ಕೆ ಅಡ್ಡಿ ಆತಂಕಗಳು ಬರುತ್ತವೆ ಎಂದು ನಾನು ಸರ್ಕಾರಕ್ಕೆ ಸೂಚನೆಯನ್ನು ಕೊಡುತ್ತ ಅಂಥ ನೇಮಕಗಳೇನಾದರೂ ಆದರೆ ಅದನ್ನು ಸರ್ಕಾರ ಸರಿಪಡಿಸಬೇಕೆಂದು ಮನವಿ ಮಾಡುತ್ತ, ಈ ಎರಡು ಮಾತನ್ನು ಆಡಲು ಅವಕಾಶ ಕೊಟ್ಟಿದ್ದಕ್ಕಾಗಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†Sri D. DEVARAJ URS.—Sir, I thank all the hon'ble members who have participated in this debate and made very useful and valuable suggestions to tone up the administration of the employment exchanges and training wing, to make the employment exchange more useful and purposeful, to expand the training wing and to increase the number of industrial training centres. While giving these suggestions some of the members doubted the efficient functioning of the department. They seem to think that the conciliation machinery is not functioning effectively and the department is not stream lined.

(SRI D. DEVARAJ URS)

Another point that was made out by the Hon'ble Member from K. G. F. is that the frequent change of the Labour Commissioner is one of the reasons for the Department not functioning effectively. To a crtain extent there is some force in what the Hon'ble Member stated, but such changes could not be helped for various administrative reasons. I can now assure the House that the present incumbent will not be changed under normal circumstances unless something extraordinary happens and I can assure that he will continue in this office for a considerable time to come.

With regard to streamlining of the administration, as the House is aware, the Labour Commissioner happens to hold more than one office. He was not only the Labour Commissioner but he was also the Chief Inspector of Factories, and also the Director of Employment Exchange and Training. Now we have bifurcated all these offices. Now we have a separate Senior I. A. S. Officer as Director of Employment and Training. We have another person as the Chief Inspector of Factories and the Labour Commissioner is exclusively looking after labour administration. Besides the Chief Inspector of Factories we have for the training programme a Joint Director of Training and in addition we have another Apprenticeship Adviser. So the picture is somewhat different from what it was a couple of years ago. With these offices bifurcated and with separate officers holding the jobs now each Department is functioning efficiently and effectively.

Another point which I want the House to know is that formerly the Factory Wing and the Boiler Wing had not been separately functioning. Now the Factory Wing has been separated from the Boiler Wing so much so that there is efficiency in the Factory Wing.

With regard to the functioning of the Labour Department, I am afraid that some of the criticisms levelled by certain Hon'ble Members like Sri Suryanarayana Rao were made without having a correct idea of the purpose for which the Department is created. The Hon'ble Member wanted the Department to take up the job of Trade Unions. I am afraid that is not the function of the Department nor is it legally or otherwise possible for the Department to take up that work. It is not possible for the Labour Inspector or Commissioner to get into the Trade Union movement and to organise trade unions. Perhaps he wanted the department to educate the workers to organise themselves into unions. I would rather appeal to the Hon'ble Members whoever are interested in trade unions movement to take up this work. The Department is just there to guide and regulate and it is the right and monopoly of trade union leaders to organise trade unions. The Department is there to see that good and healthy relationship exists between labour and management and it is conducive to greater production. It is not their job to interfere in the affairs of the trade unions.

Another point that was made out was that the department is not looking into the working of the various trade unions in the State and that many a time these trade unions are not holding their annual general body meetings and giving their accounts and they wanted the department to be more severe and take drastic action against the erring trade unions. If I give the House the statistical information about the number of trade unions that have been cancelled perhaps it will give a fair indication of the activities of the department and the Registrar of Trade Unions. In 1963-64 there were about 523 registered trade unions. Fresh registration came to 61 trade unions. Out of the total, nearly 142 registered unions were cancelled and towards the end of the year only 442 remained. During 1964-65 up-to-date about 80 trade unions have been cancelled. That shows that what they say is not true of the Registrar of Trade Unions or the Department. We have been vigilant and we have been taking all possible steps under the Trade Unions Act and the Rules. Beyond the purview of the Act and the Rules I do not think Hon'ble Members want the Registrar to go and it is not possible also. Here, I must mention one thing. Some people say that we must be strict about the cancellation of unions and their activities. In another breath we hear a number of representations from the Union leaders not to be very hard or harsh about the tarde unions. We have to balance between the two extreme views. After all in our State and also in India the organised labour is very much less when compared to in other places. The working class and trade union movement has still got to take roots. So, the department is not taking too lenient a view nor too drastric a view. We feel that too much of drastic steps will result in dampening the trade union movement itself. So, it is very difficult for the department or the concerned officer to balance between the two views and carry on administration.

3-30 P.M.

Another thing that was said was that one of the ministers happen to be Trade Union leader and he was President of the Union and the Legislative Council Chairmau happens to be the President of a federation. Whether that is proper or not, I do not wish to deal with that aspect of the problem. But, I can assure the hon'ble member that whether a minister was Union Leader or not, I must say in all fairness to him, that he never interfered with the working of union *vis a vis* the Government or that particular trade union. Nor the Chairman at any time has interfered with the Union or in the affairs of the corporation either on behalf of the trade union or members of the union. So, even though there is nothing in law to prevent either a minister or a Chairman or anybody to be the leader of a trade union, I must say that it is not coming in the way of the working of the department or the Government taking an impartial view of things whenever questions pertaining to particular federation or union comes up before the Government.

SRI C. J. MUCKANNAPPA.—What about poor officers ? How can they deal with the Chairman ?

Mr. CHAIRMAN.—If they were in the labour organisation or the minister had organised a labour movement and if the labour has still confidence in him, he can continue to be the leader. In what way does it come in the discharge of his work ?

Sri C. J. MUCKANNAPPA—Sir, supposing you were the Chairman of the Legislative Council and Chairman of a labour organisation. How can the Labour Commissioner touch you because you are above the Government. That is the apprehension.

Mr. CHAIRMAN.—Perhaps the welfare of labour may be dearer to him than the office.

Sri D. DEVARAJ URS.—Sir, whatever thereotical apprehension my friend might have, my experience is no Labour Officer is prevented from doing his dutv simply because a certain person holds a particular position.

Sri G. V. GOWDA.—If he considers the position of Chairman of a labour organisation dearer to him, then he must resign the other office.

Sri D. DEVARAJ URS.—Sir, I am not yielding. That is not a subject matter. May be it might be left to the individuals concerned.

There was a criticism that the labour inspectors are not conducting enough number of inspections. I am giving the number of inspections. done by our officers. Under the Factories Act so far 3,386 inspections have been done; under the Shops and Establishment Act about 50,000 inspections have been done during the last three years. Under the Minimum Wages Act 10,962 inspections have been conducted; under the Payment of Wages Act 3,213 inspections have been conducted; under the plantation Labour Act 346 inspections have been done. Wherever action was called for either to give notice or prosecute, the Department has not hestitated to take action. It is not correct to say that the officers are not inspecting or looking after the effective administration of various labour laws that are there for the benefit of working classes.

The hon'ble member Sri Rajagopal made a point with regard to evaluation and implementation department. To a certain extent it is true that this department has not been able to function as effectively as we desire. That was partly because of late due to administrative reasons I could not find a suitable officer since a few months. I hope to see that this department functions more vigorously after we put a suitable person as officer in charge of this department.

With regard to organisations that are given representation on various committees at the State level, a charge was made that Government discriminating between certain trade unions and political groups. As you are aware we have three main trade unions in the country, Hind Mazdoor Sangh, All-India Trade Union Congress and Indian National Trade Union Congress. At least in our State whenever we think of State or district level, we take care to see that all these, trade unions are duly represented. When that is the case, I do not know what reasons they have in mind to say that we are partial to this or that trade union.

Sri SANJEEVANATH AIKALA.—The facts prove otherwise.

Sri D. DEVARAJ URS.—He has not been able to give one single instance.

Mr. CHAIRMAN. —The Hon'ble Member can put question after the reply is over. Frequent interruptions will not enable him to give a proper reply.

Sri B. P. KADAM.—It will confuse the Minister.

Mr. CHAIRMAN.—Please don't pass such remarks.

Sri D. DEVARAJ URS.—Sir, another point raised by Sri Rajagopal was about the administration report. He wanted the report to be given every year. It is true that the Government had taken a decision some time back as a measure of economy not to print Administration Reports of some departments. Now that the House desires to have Administration Report of the Labour Department hereafter, I assure the House that we are going to see that report is published and given to all the members. With regard to the Labour Journal, it was published every month. This practice was given up as a measure of economy. Now that there is need for it and most of the Trade Union Leaders as well as Unions not only representatives of the workers but also managements want such a journal to be published, the Government will consider the suggestion about a journal hereafter.

So far as the taxes on vehicles in concerned, Rs. 25 lakhs is being paid to local bodies. Many buses are plying within the local limits of panchayats, but no panchayat is being paid any share of this tax. Is it the opinion of the Government that no buses are plying through the local limits of any panchayat or that they do not deserve any share of this tax? We are requiring the panchayats to construct approach roads and to maintain them. That being the case, these panchayats also deserve a certain contribution in proportion to the length of the road maintained by them. Even in respect of the taluk boards, I do not know whether it is being distributed to them in proportion to the length of roads maintained by them because no statement of that kind is furnished to us. So I request

(SRI G. V. GOWDA)

the Finance Minister to see that out of the amount realised by way of taxes on vehicles a certain proportion is distributed to the panchayats in proportion to the length of roads maintained by them.

Even in respect of the entertainment tax 90% of it is being distributed to the municipalities where the picturehouses are located. At present the panchayats nearabout these picture houses are not getting any portion of the collection of the entertainment tax. Suppose in village A, there is a picturehouse and people from the nearby villages B, C and D go to that picturehouse then it is only but proper that out of the allocation to be made from that picturehouse, the nearby viilages also are paid a certain shafe. Is it not justifiable to pay them a certain shere? We cannot expect all village panchayats to have picture houses. There are cases where certain village panchayats are having two or three picturehouses. So I request to Government to see whether it is not possible to adopt a policy by which even the nearby villages adjacent to the picture house situated in a particular panchayat are also given a share of the collection of the entertainment tax.

With these words I expect that in the coming year things would improve and so far as the incidence of indirect tax is concerned it will be reduced and only those persons who are liable to pay the tax will be made to pay and that arrears will not be allowed to accrue as we have been seeing today.

ಶ್ರೀಮತಿ ಸುಶೀಲಾಬಾಯಿ ಹೀರಾಚಂದ್ ಷಾ (ಬಾಗೇವಾಡಿ).—ಮಾನ್ಯ ಸಭಾಪತಿಯವರೇ, ಸೇಲ್ಸ್ ಟ್ಯಾಕ್ಸ್ ವಿಷಯ ಹೇಳಬೇಕು ಎಂದರೆ ನಮ್ಮ ಹಣಕಾಸಿನ ಮಂತ್ರಿಗಳು ಎರಡು ಮೂರು ವರ್ಷದೊಳಗೆ ಆದಾಯುವನ್ನು ಹೆಚ್ಚು ಹೆಚ್ಚು ಮಾಡಿ ಎಲ್ಲರ ಕಡೆಯಿಂದ ಸಲಹೆಗಳನ್ನೂ ಪಡೆದು ಸರ್ಕಾರಕ್ಕೆ ಬರತಕ್ಕ ಟ್ಯಾಕ್ಸ್ ಏನಿದೆ ಅದನ್ನು ಒಂದಕ್ಕೆ ಎರಡರಷ್ಟು ಮಾಡಿದ್ದಾರೆ. ಆ ದೆಸೆಯಿಂದ ನಾನು ಅವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತಿದ್ದೇನೆ.

ಅಗ್ರಿಕಲ್ಚರಲ್ ಇನ್‌ಕಂಟ್ಯಾಕ್ಸ್ ದೆಸೆಯಿಂದ ನನಗೂ ಮಾನ್ಯ ಮಂತ್ರಿಗಳಿಗೂ ತಕರಾರು ಇದೆ. ನಾಲ್ಕು ಕೋಟಿ ರೂಪಾಯಿ ಭೂಮಿಯ ಕಂದಾಯ ಇರುವುದನ್ನು ಸರ್ವೆ ಸೆಟಲ್‌ಮೆಂಟ್ ಮಾಡಿ 13 ಕೋಟಿಗೆ ಏರಿಸಬೇಕೆಂದು ಇದ್ದಾರೆ. ಸರ್ಕಾರಕ್ಕೆ ಅಗ್ರಿಕಲ್ಚರಲ್ ಇನ್‌ಕಂಟ್ಯಾಕ್ಸ್‌ನಿಂದ 80 ಲಕ್ಷ ರೂಪಾಯಿ ಮಾತ್ರ ಮೈಸೂರು ರಾಜ್ಯದಲ್ಲಿ ಬರುತ್ತಿದೆ. 80 ರಕ್ಷ ರೂಪಾಯಿಗಳ ದೃಷ್ಟಿಯಿಂದ ರೈತರಿಗೆ ತೊಂದರೆ ಕೊಡುವುದು ಒಳ್ಳೆಯದಲ್ಲ. ಯಾವ ರೈತರಿಗೆ ಸಾಲ ಕೊಡುತ್ತಾರೆ, ಹೆಚ್ಚು ಬೆಳೆ ತೆಗೆಯಲು ಅನುಕೂಲಮಾಡಿಕೊಡುತ್ತಾರೆ ಅಂಥ ರೈತನಿಗೆ ತಗಾವಿ ಸಾಲ, ಬೀಜ, ಗೊಬ್ಬರ ಕೊಡಬೇಕು. ಅಂಥ ರೈತರ ಕಡೆಯಿಂದ ಅಗ್ರಿಕಲ್ಚರಲ್ ಇನ್‌ಕಂಟ್ಯಾಕ್ಸ್ ಸರ್ಕಾರ ತೆಗೆದುಕೊಳ್ಳುವದು ಅವರಿಗೆ ತ್ರಾಸ ಕೊಟ್ಟಂತಾಗುತ್ತದೆ. ಇದು ಒಳ್ಳೆಯದಲ್ಲ. ಯಾರು ಆರು ಎಕರೆ ಭೂಮಿಯಲ್ಲಿ ಬೆಳೆಯುತ್ತಾರೆಯೋ ಅವರು ಈ ಟ್ಯಾಕ್ಸ್ ಕೊಡಬೇಕಾಗುತ್ತದೆ. ಅದಕ್ಕೆ ಅವರು ಐದು ಎಕರೆಯಲ್ಲಿ ಮಾತ್ರ ಬೆಳೆ ತೆಗೆಯುತ್ತಾರೆ. ಒಬ್ಬ ರೈತನ ಹೆಸರಿನಲ್ಲಿ ಇದ್ದುದನ್ನು ಎರಡು ಮಂದಿ ಹೆಸರಿನಲ್ಲಿ ಮಾಡಲಿಕ್ಕೆ ಹತ್ತಿದ್ದಾರೆ, ಎಷ್ಟು ಜಮೀನಿನಲ್ಲಿ ಬೆಳೆ ತೆಗೆದಿರುತ್ತಾರೆ ಎನ್ನುವ ಲೆಕ್ಕಗಳನ್ನು ಬರೆಯುವವರು ಪಟೇಲ್ ಮತ್ತು ಕುಲಕರ್ಣಿ ಇರುವುದರಿಂದ ಅವರು ಹತ್ತು ಎಕರೆ ಇದ್ದರೂ ನಾಲ್ಕು ಎಕರೆ ಎಂದು ಬರೆಯುವ ಸಂದರ್ಭಗಳೂ ಉಂಟು. ಲೆಕ್ಕದಲ್ಲಿ ನಾಲ್ಕು ಎಕರೆ ಎಂದು ಬರೆಸಿ ಹತ್ತು ಎಕರೆಯಲ್ಲಿ ಬೆಳೆಯುವವರೂ ಇದ್ದಾರೆ. ಇಡೀ ತಾಲ್ಲೂಕಿನಲ್ಲಿ ಹೋಗಿ ನೋಡಲು ಯಾರಿಗೂ ಸಾಧ್ಯವಾಗುವುದಿಲ್ಲ. ಕೆಲವು ಸಂದರ್ಭಗಳಲ್ಲಿ ನಾಲ್ಕು ಎಕರೆ ಮಾಡಿದ್ದರೆ ಹತ್ತು ಎಕರೆ ಎಂದು ಬರೆದಿರುತ್ತಾರೆ. ನನ್ನ ವಿಚಾರವನ್ನು ಹೇಳಬೇಕಾದರೆ ಕಳೆದ ಮೂರು ವರ್ಷದಿಂದ ಏನೂ ಬೆಳೆ ತೆಗೆಯದೆ ಇದ್ದರೂ ಆರು ಎಕರೆ ಭೂಮಿಯಲ್ಲಿ ಬೆಳೆ ಆಗಿದೆ ಎಂದು ಬರೆದು ಬಿಟ್ಟಿರುತ್ತಾರೆ. ರಾಜ್ಯದಲ್ಲಿ ಧಾನ್ಯದ ಪರಿಸ್ಥಿತಿ ಕೆಟ್ಟದ್ದು ಇದ್ದುದರಿಂದ ಧಾನ್ಯ ಬೆಳೆಯಬೇಕು.

ಆದರೆ ಏನೂ ಬೆಳೆಯದೆ ಇರುವಾಗ ಅಗ್ರಿಕಲ್ಚರಲ್ ಇನ್‌ಕಂಟ್ಯಾಕ್ಸ್ ಹಾಕುವುದು ಸರಿಯಲ್ಲ. ಸರ್ಕಾರಕ್ಕೆ ಕಂದಾಯದ ರೂಪದಲ್ಲಿ ಹಣ ಕೊಡುವಾಗ ಟ್ಯಾಕ್ಸ್ ಬೇರೆ ಕೊಡಬೇಕು ಎನ್ನುವುದು ಸರಿಯಲ್ಲ. ರೈತರ ಮೇಲೆ ವ್ಯವಸಾಯ ವರಮಾನ ತೆರಿಗೆಯನ್ನು ಹಾಕುವುದನ್ನು ತಪ್ಪಿಸಬೇಕು. ಇಲ್ಲದಿದ್ದರೆ ಅವರಿಗೆ ಬಹಳ ಕಷ್ಟವಾಗುತ್ತದೆ. ಅವರಿಗೆ ಬೆಳೆದಂತಹ ಸಾಮಾನುಗಳನ್ನು ಯಾವ ರೀತಿ ಸ್ಟಾಕ್ ಇಟ್ಟುಕೊಳ್ಳಬೇಕೆಂದು ಗೊತ್ತಾಗುವುದಿಲ್ಲ. ಅವರಿಗೆ ಸರಿಯಾಗಿ ಲೆಖ್ಖ ಇಟ್ಟುಕೊಳ್ಳುವುದಕ್ಕೂ ಆಗುವುದಿಲ್ಲ. ಇದರಿಂದ ರೈತರ ಮೇಲೆ ಈ ತೆರಿಗೆ ಹಾಕಿದರೆ ಅವರು ನಾಲ್ಕೈದು ಸಾವಿರ ರೂಪಾಯಿಗಳವರೆಗೆ ಲಾಯರ್ ಫೀಸನ್ನು ಕೊಡಬೇಕಾಗುತ್ತದೆ. ವಕೀಲರಿಗೆ ಅದನ್ನು ಕೊಡಬೇಕಾಗುತ್ತದೆ. ಒಂದು ವೇಳೆ ಅವರು ಈ ತೆರಿಗೆಯನ್ನು ಕೊಡಬೇಕೆಂದು ವಿಧಿಸಿದರೆ ಅನಾವಶ್ಯಕವಾದ ಲಿಟಿಗೇಷನ್ಸ್ ಆಗುತ್ತದೆ. ಈ ತೆರಿಗೆಯನ್ನು ಹಾಕುವುದನ್ನು ತೆಗೆಯುವುದರಿಂದ ಸರ್ಕಾರಕ್ಕೆ ಇದಕ್ಕೆ ಸಂಬಂಧಪಟ್ಟ ಸಿಬ್ಬಂದಿ ಇತ್ಯಾದಿಗಳಿಗೆ ಖರ್ಚಾಗುವುದನ್ನು ಉಳಿಸಬಹುದು. ಗ್ರಾಮಾಂತರ ಪ್ರದೇಶಗಳಲ್ಲಿ ರೈತರಿಗೆ ಈ ಬಾಬಿನಲ್ಲಿ ತೊಂದರೆಯಾದರೆ ಅವರು ಬೆಂಗಳೂರಿಗೆ ಬಂದು ಕೋರ್ಟಿನಲ್ಲಿ ಅಪೀಲನ್ನು ಫೈಲ್ ಮಾಡಬೇಕಾಗುತ್ತದೆ. ಇದು ಅನಾವಶ್ಯಕವಾಗಿ ರೈತರಿಗೆ ತೊಂದರೆ ಕೊಡುವುದಾಗುತ್ತದೆ. ಸರ್ಕಾರದಲ್ಲಿರತಕ್ಕ ಆಫೀಸರುಗಳು ಕೆಲವು ಸಂದರ್ಭಗಳಲ್ಲಿ ರೈತರನ್ನು ಸರಿಯಾಗಿ ಕಾಣುವುದಿಲ್ಲ. ಹಿಂದೆ ಎಷ್ಟೋ ಸಾರಿ ಆರ್ಥಿಕ ಮಂತ್ರಿಗಳು ಹಾಗೂ ಮುಖ್ಯ ಮಂತ್ರಿಗಳು ರೈತರ ಕಲ್ಯಾಣವಾಗಬೇಕಾದರೆ ಅವರಿಗೆ ಯಾವ ವಿಧದಲ್ಲೂ ತೊಂದರೆ ಕೊಡಬೇಡಿ, ರೈತರ ಕಡೆ ಬೇಕಾದಷ್ಟು ಅಭಿವೃದ್ಧಿ ಕೆಲಸ ಕಾರ್ಯಗಳಾಗಬೇಕು ರೈತರಿಗೆ ವಿಶೇಷವಾಗಿ ತ್ರಾಸಾಗಬಾರದು ಎಂದು ಹೇಳಿದ್ದಾರೆ. ಅವರಿಗೆ ಲೆಕ್ಕಗಳನ್ನು ಇಡಲು ಸರಿಯಾಗಿ ಬಾರದೇ ಇರುವುದರಿಂದ ಹೆಚ್ಚು ಹಣವನ್ನು ವಕೀಲರಿಗೆ ಕೊಡಬೇಕಾಗುತ್ತದೆ. ಅವರು ಸರ ್ಕರದವರಿಗೆ ಕೊಡಬೇಕಾದ್ದನ್ನೆಲ್ಲಾ ತಿಳಿದುಕೊಂಡು ಲೆಕ್ಕಗಳನ್ನಿಡಬೇಕಾದರೆ ಅವರಿಗೆ ಇನ್ನು 20 ವರ್ಷಗಳಾದರೂ ಬೇಕಾಗುತ್ತದೆ. ಸರ್ಕಾರದವರು ವ್ಯವಸಾಯ ವರಮಾನ ತೆರಿಗೆಯ ರೂಪದಲ್ಲಿ ಪಡೆಯುವುದು ಕೇವಲ ಒಂದು ಕೋಟಿ ರೂಪಾಯಿಗಳು ಮಾತ್ರ. ಇದು ಬಹಳ ಅತ್ಯಲ್ಪವಾದುದು. ಇದನ್ನು ಸರ್ಕಾರದವರು ವಜಾ ಮಾಡಿದರೂ ಚಿಂತೆ ಇಲ್ಲ. ಏನೂ ನಷ್ಟವಿಲ್ಲ. ಏಕೆಂದರೆ ವಕೀಲರುಗಳೇ ಅವರಿಂದ ಸಾವಿರಾರು ರೂಪಾಯಿಗಳನ್ನು ತೆಗೆದುಕೊಳ್ಳುತ್ತಾರೆ. ರೈತರ ಜೇಬಿನಿಂದ ಸರ್ಕಾರಕ್ಕೆ ಈ ತೆರಿಗೆಯ ಮೂಲಕ ಹಣ ವಸೂಲಾಗುವುದು ಬೇಡ, ಅವರಿಗೆ ಅಷ್ಟಾಗಿ ತ್ರಾಸಾಗಬಾರದು. ಈಗ ಎಷ್ಟೋ ಕಡೆ ಸರ್ವೆ ಕೆಲಸ ಕಾರ್ಯಗಳು ಮುಗಿದಿವೆ. ಈ ತೆರಿಗೆಯನ್ನು ಹಾಕುವ ಬಗ್ಗೆ ಮುಂದೆ ವಿಚಾರ ಮಾಡಬೇಕು. ಆದರೆ ಈ ತೆರಿಗೆಯನ್ನು ವ್ಯಾಪಾರಸ್ಥರೂ ಹಾಗೂ ಶ್ರೀಮಂತರ ಮೇಲೆ ವಿಧಿಸಿ. ಅವರು ಅನ್ಯಾಯ ಮಾಡದ ಹಾಗೆ ಸರ್ಕಾರದವರು ನಿಗಾ ತೆಗೆದುಕೊಳ್ಳಬೇಕು. ಒಟ್ಟಿನಲ್ಲಿ ರೈತರಿಗೆ ಎಲ್ಲ ವಿಧದಲ್ಲೂ ಕಲ್ಯಾಣವಾಗಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಟಿ. ಎಚ್. ಮಾದಪ್ಪಗೌಡ (ನಾಗಮಂಗಲ).—ಮಾನ್ಯ ಅಧ್ಯಕ್ಷರೇ, ಈಗ ಶ್ರೀಮಾನ್ ವೆಂಕಟೇಗೌಡರು ಮಾತನಾಡಿದ ಮೇಲೆ ನನಗೆ ಹೆಚ್ಚಿಗೆ ಹೇಳುವುದಕ್ಕೆ ತೋಚಲಿಲ್ಲ. ಆದರೆ ಈ ಮಾರಾಟ ತೆರಿಗೆ ವಿಚಾರದಲ್ಲಿ ಸ್ವಲ್ಪ ವಿಷಯಗಳನ್ನು ಹೇಳಬೇಕಾಗುತ್ತದೆ. ಈ ಉದ್ದೇಶವೇನೋ ಬಹಳ ಒಳ್ಳೆಯದು. ಆದರೆ ಈ ತೆರಿಗೆಯನ್ನು ವಸೂಲುಮಾಡುವ ರೀತಿ, ಸರ್ಕಾರೀ ಅಧಿಕಾರಿಗಳು ನಡೆಯುತ್ತಾ ಇರತಕ್ಕ ನಡತೆ, ಇವು ಈ ದೇಶಕ್ಕೆ ಮಾನತರತಕ್ಕುದು ಅಲ್ಲವೆಂದು ನಾನು ಈಗ ಇಲ್ಲಿ ಹೇಳಬೇಕಾಗಿದೆ. ನಮ್ಮ ಊರು ಬಹಳ ಸಣ್ಣ ಊರು. 6 ಸಾವಿರ ಪ್ರಜಾಸಂಖ್ಯೆ ಇರತಕ್ಕ ಟೌನ್. ಮಾರಾಟತೆರಿಗೆ ಆಫೀಸರುಗಳು ಒಂದು ತಿಂಗಳು ಅಥವಾ ಒಂದೂವರೆ ತಿಂಗಳಿಗೆ ಒಮ್ಮೆ ಅಲ್ಲಿಗೆ ಬಂದು ಇರುತ್ತಾರೆ. ಸಣ್ಣ ಪುಟ್ಟ ಬೀಡಿ ಅಂಗಡಿಗಳು, ಕಡಲೇಪುರಿ, ಹಲಸಿನತೊಳೆ ಮಾರುತ್ತಿದ್ದವರಿಂದಲೂ ಬೆದರಿಕೆಯ ಮೂಲಕ ಈ ತೆರಿಗೆಯನ್ನು ವಸೂಲುಮಾಡಿಕೊಂಡು ಸುಮಾರು ಒಂದುಸಾವಿರ ರೂಪಾಯಿಗಳನ್ನು ಮಾಡಿಕೊಂಡು ರಾತ್ರ್ಯಾನು ರಾತ್ರೆಯೇ ಅವರು ಹೋಗಿಬಿಡುತ್ತಾರೆ. ಇದಕ್ಕೊಂದು ರುಜುವಾತು ಕೊಡುವುದಕ್ಕೂ ನಾನು ಸಿದ್ಧನಾಗಿದ್ದೇನೆ. ಬೇರೆ ಅಧಿಕಾರ ವರ್ಗದವರು ಇದನ್ನು ಕರೆಕ್ಟ್‌ಮಾಡುವ ಹಾಗೆ ಮಾಡುವುದು ಸೂಕ್ತ. ಇಲ್ಲದೇ ಹೋದರೆ ಅನೇಕ ಅವಿದ್ಯಾವಂತರು ಇಲ್ಲಿ ಇದ್ದಾರೆ. ಅವರಿಂದ ಲೆಕ್ಕ ಪತ್ರಗಳನ್ನು ಸರಿಯಾದ ರೀತಿಯಲ್ಲಿಡುವುದಕ್ಕೆ ಆಗುವುದಿಲ್ಲ. ಅಲ್ಲದೆ ಸಣ್ಣಪುಟ್ಟ ಅಧಿಕಾರಿಗಳಿಂದ ಸಣ್ಣ ವರ್ತಕರಿಗೆ ಹೆಚ್ಚಿಗೆ ಕಿರುಕುಳವಾಗುತ್ತಿದೆ. ಸಣ್ಣ ಪುಟ್ಟ ವರ್ತಕರಿಗೆ ಈ ತೆರಿಗೆಯನ್ನು ಜಾಸ್ತಿಯಾಗಿ ಹಾಕುವುದರಿಂದ ಅವರಿಗೆ ಕೊಡಲು ಶಕ್ತಿ ಇರುವುದಿಲ್ಲ. ದೊಡ್ಡ ವರ್ತಕರು ಲೆಕ್ಕ ಪತ್ರಗಳನ್ನು ಚೆನ್ನಾಗಿ ಇಟ್ಟಿರುತ್ತಾರೆ. ಅಂತಹವರಿಗೆ ಈ ತೆರಿಗೆಯನ್ನು ಜಾಸ್ತಿ ಕೊಡುವ ಶಕ್ತಿ ಇರುತ್ತದೆ. ಅಂತಹವರ ವಿಷಯದಲ್ಲಿ ಈ ತೆರಿಗೆಯನ್ನು ಹಾಕದೆ ಸಣ್ಣ ಪುಟ್ಟ ವರ್ತಕರ ಮೇಲೆ ಈ ತೆರಿಗೆಯನ್ನು ವಿಧಿಸುವುದು ಸರಿಯಲ್ಲ. ಈ ಬಗ್ಗೆ ಸರ್ಕಾರ ನಿಗಾ

(ಶ್ರೀ ಟಿ. ಎನ್. ಮಾದಪ್ಪ ಗೌಡ)

ತೆಗೆದುಕೊಳ್ಳಬೇಕು. ವರ್ತಕನ ಒಂದು ಯೋಗ್ಯತೆ ಮೇಲೆ ಇಷ್ಟೇ ತೆರಿಗೆಯನ್ನು ಕೊಡಬೇಕು ಎಂಬುದಾಗಿ ನಿಗದಿಮಾಡಿದರೆ ಒಳ್ಳೆಯದೆಂದು ನನಗನ್ನಿಸುತ್ತದೆ.

ಇನ್ನು ಚೆಕ್‌ಪೋಸ್ಟ್ಸ್ ವಿಷಯ. ಇದನ್ನು ಈಗ ಬೆಂಗಳೂರು ಸುತ್ತಮುತ್ತಲೂ ಹಾಕಿದ್ದಾರೆ. ನಾನು ಒಂದು ಸಾರಿ ಈ ಊರಿಗೆ ಬಹಳ ಅರ್ಜೆಂಟಾಗಿ ರಾತ್ರಿಯ ವೇಳೆ ಲಾರಿಯಲ್ಲಿ ಬರುವ ಪ್ರಮೇಯ ಬಂತು. ಡ್ರೈವರ್ ಆದವನು ಅಲ್ಲಿಗೆ ಬಂದ ಕೂಡಲೆ ಅವನ ಕೈಗೆ ಏನೋ ಹಾಕಿದ. ಕೂಡಲೇ ಅವನು ಆ ಕಡೆ ಈ ಕಡೆ ಎಲ್ಲಿಯೂ ನಿಲ್ಲದೆ ಮುಂದಕ್ಕೆ ಹೋದ. ಹೀಗೆ ನಾವು ಪ್ರತ್ಯಕ್ಷವಾಗಿ ಕಾಣುವ ಹಾಗೆ ನಮ್ಮಲ್ಲಿ ಇಷ್ಟು ಅನೀತಿ ಇದೆಯಲ್ಲಾ ಎಂಬುದಾಗಿ ನಮ್ಮ ಮನಸ್ಸಿಗೆ ಬಹಳ ವ್ಯಥೆಯಾಯಿತು. ಆದರೂ ಕೂಡ ದಿನೇ ದಿನೇ ಹೆಚ್ಚು ಅಧಿಕಾರಿಗಳನ್ನು ಕ್ರಿಯೇಟ್ ಮಾಡಿ ನಾವೇ ಅವರಿಂದ ನಮ್ಮ ಜನಗಳಿಗೆ ತೊಂದರೆಯಾಗತಕ್ಕ ಕೆಲಸವನ್ನು ಮಾಡುತ್ತಿದ್ದೇವೆ ಇದನ್ನು ನಿಜವಾಗಿ ತಿದ್ದಿಕೊಳ್ಳುವುದಕ್ಕಾಗುತ್ತಿಲ್ಲವಲ್ಲಾ ಎಂದು ನನಗೆ ಆಗಾಗ್ಗೆ ಅನ್ನಿಸುತ್ತಿದೆ. ಅದೂ ಅಲ್ಲದೆ ಈಗ ಹೊಸದಾಗಿ ಸರ್ಕಾರೀ ಕೆಲಸಕ್ಕೆ ಹೋದಂತಹ ನೌಕರರು ಕೇವಲ 3 ತಿಂಗಳುಗಳಲ್ಲಿಯೇ ಸ್ಕೂಟರ್ ಮೇಲೆ ಓಡಾಡುತ್ತಿರುತ್ತಾರೆ. ಅವರಿಗೆ ಅಷ್ಟು ಹಣ ಹೇಗೆ ಬರಬೇಕು ? ಸಂಬಳವಗೈರೆ ಅವರಿಗೆ ಅಚ್ಚುಕಟ್ಟಾಗಿ ಕೊಟ್ಟರೆ ಅವರು ಲಂಚ ತಿನ್ನುವುದು ತಪ್ಪುತ್ತದೆಂಬುದಾಗಿ ನಾನು ಹೇಳುತ್ತೇನೆ.

ಇನ್ನು ಪೆನ್‌ಷನ್ ಮತ್ತು ರಿಟೈರ್‌ಮೆಂಟ್ ಬೆನಿಫಿಟ್ಸ್ ಕೊಡುವ ಏರ್ಪಾಡಿನ ಬಗ್ಗೆ ನಾನು ಪ್ರತಿಯೊಂದು ಸಾರಿಯೂ ಹೇಳುತ್ತಿದ್ದೇನೆ. ಅಧಿಕಾರಿಗಳು ರಿಟೈರಾಗಿ ಅನೇಕ ಕಾಲವಾದರೂ ಕೂಡ ಅವರಿಗೆ ಪೆನ್‌ಷನ್ ಸಿಕ್ಕುತ್ತಾ ಇಲ್ಲ. ಆದಷ್ಟು ತೀವ್ರಾಸಕ್ತಿಯಿಂದ ಸರ್ಕಾರೀ ಕೆಲಸವನ್ನು ಮುವ್ವತ್ತು ವರ್ಷಗಳು ಮಾಡಿ ಅವನು ಮನೆಗೆ ಹೋಗುವ ಕಾಲದಲ್ಲಿ ಅವನಿಗೆ ಸಂಬಂಧಪಟ್ಟ ಕಾಗದ ಪತ್ರಗಳನ್ನೆಲ್ಲಾ ವಿಲೇವಾರಿಮಾಡಿ ಆತ ಪೆನ್‌ಷನ್ ಆದ ಮುಂದಿನ ತಿಂಗಳಿನಿಂದಲೇ ಪೆನ್‌ಷನ್ ಪಡೆಯುವ ಏರ್ಪಾಡನ್ನು ಕಡ್ಡಾಯವಾಗಿ ಈ ಸರ್ಕಾರದವರು ಮಾಡಬೇಕೆಂದು ನಾನು ಹೇಳುತ್ತೇನೆ. ಈಗ ಎನ್. ಜಿ. ಓ. ಗಳಿಗೆ 5 ರೂಪಾಯಿಗಳನ್ನು ಹೆಚ್ಚುವರಿ ಕೊಟ್ಟಿರುವ ಹಾಗೆ ಎಲ್ಲಾ ಪೆನ್‌ಷನ್‌ದಾರರುಗಳಿಗೂ ಅದೇ ರೀತಿ ಪರಿಹಾರ ಕಲ್ಪನೆ ಮಾಡುತ್ತೇವೆಂದು ಈಗಾಗಲೇ ಸರ್ಕಾರ ಒಪ್ಪಿಕೊಂಡಿರುವುದರಿಂದ ಈ ರಾಜ್ಯದಲ್ಲಿ ರಿಟೈರ್ ಆಗಿರುವ ಜನರಿಗೆಲ್ಲರಿಗೂ ಈ ಬೆನಿಫಿಟ್ ಸಿಕ್ಕುವ ವ್ಯವಸ್ಥೆ ಮಾಡಬೇಕೆಂದು ಹೇಳಿ ಸರ್ಕಾರಕ್ಕೆ ಈ ಒಂದು ಸಲಹೆಯನ್ನು ಮತ್ತೊಮ್ಮೆ ಕೊಡಲು ಇಷ್ಟಪಡುತ್ತೇನೆ.

ಇನ್ನು ಪಂಚಾಯತಿಗಳು ಮತ್ತು ಲೋಕಲ್‌ಬಾಡಿಗಳು ಸರ್ಕಾರವನ್ನು ಕೆಲವು ಅಭಿವೃದ್ಧಿ ಕಾರ್ಯಗಳಿಗಾಗಿ ಲೋನ್ಸ್ ಮತ್ತು ಅಡ್ವಾನ್ಸ್ ಕೇಳತಕ್ಕ ಸಂದರ್ಭದಲ್ಲಿ ಸರಿಯಾದ ಪ್ರತಿಫಲ ಸರ್ಕಾರದಿಂದ ಸಿಕ್ಕುತ್ತಾ ಇಲ್ಲ. ಅವು ಆದಷ್ಟು ಅಭಿವೃದ್ಧಿ ಕಾರ್ಯಗಳನ್ನು ಇತ್ತೀಚೆಗೆ ವಿಶೇಷವಾಗಿ ಮಾಡುತ್ತಿರುವಾಗ ಪ್ರತಿಫಲ ಅಡ್ವಾನ್ಸ್ ಕೇಳಿದರೆ ಸರ್ಕಾರದವರು ಧಾರಾಳವಾಗಿ ಕೊಡುವ ಏರ್ಪಾಡು ಮಾಡಬೇಕೆಂದು ಈ ಸಂದರ್ಭದಲ್ಲಿ ನಾನು ಸರ್ಕಾರಕ್ಕೆ ಸಲಹೆ ಮಾಡುತ್ತೇನೆ. ಇನ್ನು ಹೆಚ್ಚಿಗೆ ಮಾತನಾಡುವುದಕ್ಕೆ ನಾನು ಇಷ್ಟಪಡುವುದಿಲ್ಲ ಇಷ್ಟು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಂ. ಸಿ. ಬಸಪ್ಪ (ಚಾಮರಾಜನಗರ).—ಮಾನ್ಯ ಸಭಾಧ್ಯಕ್ಷರೇ, ಈ ದಿನ ಹಣಕಾಸಿನ ಸಚಿವರು ಈ ಸಭೆಯಮುಂದೆ ಇಟ್ಟಿರತಕ್ಕ ಬೇಡಿಕೆಗಳನ್ನು ನಾನು ಸಂಪೂರ್ಣವಾಗಿ ಅನುಮೋದಿಸುತ್ತಾ ಕೆಲವು ಮಾತುಗಳನ್ನು ಪ್ರಸ್ತಾಪ ಮಾಡಬೇಕೆಂದು ನಾನು ಅಭಿಪ್ರಾಯ ಪಡುತ್ತೇನೆ. ಇದರಲ್ಲಿ ನಾನು ಬಹಳ ಪ್ರಾಮುಖ್ಯವಾಗಿ ಪ್ರಸ್ತಾಪ ಮಾಡಬೇಕೆಂದು ಅಪೇಕ್ಷೆ ಮಾಡುವುದು ರೈತನಿಗೆ ಕೊಡುವ ಸಾಲಗಳ ಬಗ್ಗೆ ಇವತ್ತು ಸರ್ಕಾರದ ಧೋರಣೆ ಏನಿದೆ ಅದರಿಂದೇನೇನು ಕಂಟಕಗಳಾಗುತ್ತವೆ, ಅವನ್ನು ಯಾವ ರೀತಿ ಸರಿಪಡಿಸುವುದಕ್ಕೆ ಸಾಧ್ಯವಿದೆ ಎಂಬುದನ್ನು ಮಾತ್ರ ಹೇಳುವುದಕ್ಕೆ ಅಪೇಕ್ಷೆ ಪಡುತ್ತೇನೆ. ಶ್ರೀಮಾನ್ ವೆಂಕಟೇಗೌಡರು ಹಣಕಾಸಿನ ಸಚಿವರು ಬಡ್ಜೆಟ್ ಭಾಷಣದಲ್ಲಿ ಈ ವರ್ಷದಲ್ಲಿ ಸರ್ಕಾರ ಈ ವಿಚಾರದಲ್ಲಿ ಏನೇನು ತೀರ್ಮಾನಗಳನ್ನು ತೆಗೆದುಕೊಂಡಿದೆ ಎಂಬ ವಿಚಾರಗಳನ್ನು ಬಹಳ ಸೂಕ್ಷ್ಮವಾಗಿ ತಿಳಿಸಿದ್ದಾರೆ.

5-00 P.M.

ಈಗ ರೈತರಿಗೆ ಸರ್ಕಾರದವರು ನಾನಾ ವಿಧವಾದ ಸಾಲಗಳನ್ನು ಕೊಡಬೇಕೆಂದು ಯೋಜನೆಗಳನ್ನು ಹಾಕಿಕೊಂಡಿದ್ದಾರೆ. ಅನೇಕ ಸಾಲಗಳು ಎಂದರೆ ತಗಾಯಿ ಲೋನು ಎಂದು ವ್ಯವಸಾಯಕ್ಕೆ ಬೇಕಾದ ಉಪಕರಣಗಳನ್ನು ತೆಗೆದುಕೊಳ್ಳುವುದಕ್ಕೆ ಕೊಡುತ್ತಾರೆ. ಲ್ಯಾಂಡ್ ಇಂಪ್ರೂವ್‌ಮೆಂಟ್ ಲೋನು ಎಂದು ಜಮೀನನ್ನು ಆಬಾದು ಮಾಡುವುದಕ್ಕೆ ಸಾಲವನ್ನು ಕೊಡುತ್ತಾರೆ. ಟ್ರಾಕ್ಟರನ್ನು

ಕೊಂಡುಕೊಳ್ಳುವುದಕ್ಕೆ ಸಾಲವನ್ನು ಕೊಡುತ್ತಾರೆ, ವಿದ್ಯುಚ್ಛಕ್ತಿ ಮೋಟಾರು ಮತ್ತು ಪಂಪು ಸೆಟ್ಟು ಗಳನ್ನು ತೆಗೆದುಕೊಳ್ಳುವುದಕ್ಕೆ ಸಾಲವನ್ನು ಕೊಡುತ್ತಾರೆ. ಈ ಸಾಲಗಳು ರೈತರಿಗೆ ಸಿಕ್ಕಬೇಕಾದರೆ ಯಾವ ಯಾವ ಏಜನ್ಸಿಗಳು ಕೆಲಸ ಮಾಡುತ್ತವೆ, ಯಾವ ಯಾವ ಇಲಾಖೆಗಳ ಮುಖಾಂತರ ರೈತರಿಗೆ ಈ ಸಾಲಗಳು ದೊರೆಯುತ್ತವೆ ಎಂದು ನಾವು ಆಲೋಚನೆಯನ್ನು ಮಾಡುವುದಾದರೆ, ಲ್ಯಾಂಡ್ ಇಂಪ್ರೂವ್‌ಮೆಂಟ್ ಲೋನ್ ರೆವಿನ್ಯೂ ಇಲಾಖೆಯ ಮುಖಾಂತರ ರೈತರಿಗೆ ದೊರೆಯುತ್ತಿದೆ. ಒಂದೊಂದು ತಾಲ್ಲೂಕಿನಲ್ಲಿರತಕ್ಕ ತಹಶೀಲ್ದಾರರಿಗೆ 20-30-50 ಸಾವಿರ ಅರ್ಜಿಗಳು ಬರುತ್ತವೆ. ಆಮೇಲೆ ಆ ಅರ್ಜಿಗಳನ್ನು ಜಿಲ್ಲಾಧಿಕಾರಿಗಳು ತರಿಸಿಕೊಂಡು ರೈತರಿಗೆ ಲ್ಯಾಂಡ್ ಇಂಪ್ರೂವ್‌ಮೆಂಟ್ ಸಾಲವನ್ನು ಮಂಜೂರು ಮಾಡಿ ಅದನ್ನು ರೆವಿನ್ಯೂ ಇಲಾಖೆಯ ಮುಖಾಂತರ ವ್ಯವಸಾಯಗಾರರಿಗೆ ಕೊಡುತ್ತಾರೆ. ಆಮೇಲೆ ನೀರಾವರಿ ಸೌಲಭ್ಯವನ್ನು ಒದಗಿಸುವುದಕ್ಕೋಸ್ಕರ ಬಾವಿಗಳಿಗೆ ಸಾಲವನ್ನು ಕೊಡುವುದು, ಪಂಪುಸೆಟ್ಟು ಮತ್ತು ವಿದ್ಯುಚ್ಛಕ್ತಿ ಮೋಟಾರು ತೆಗೆದುಕೊಳ್ಳುವುದಕ್ಕೋಸ್ಕರ 2-3 ಏಜನ್ಸಿಗಳನ್ನು ಮಾಡಿದ್ದಾರೆ. ತಹಶೀಲ್ದಾರರು ರೈತನ ಜಮೀನಿನ ಸಂಬಂಧದಲ್ಲಿ ವಿವರಣೆ ಕೊಡಬೇಕು. ಬ್ಲಾಕ್ ಡೆವಲಪ್‌ಮೆಂಟ್ ಆಫೀಸರು ಅವನಿಗೆ ಬಾವಿ ಇದೆಯೇ, ನೀರು ಇದೆಯೇ ಎಂಬ ಬಗ್ಗೆ ವಿವರಣೆ ಕೊಡಬೇಕು. ಆಮೇಲೆ ಅಗ್ರಿಕಲ್ಚರಲ್ ಡಿಪಾರ್ಟ್‌ಮೆಂಟಿನಲ್ಲಿ ಡಿಸ್ಟ್ರಿಕ್ಟ್ ಅಗ್ರಿಕಲ್ಚರಲ್ ಆಫೀಸರು ಅವನಿಗೆ ಎಷ್ಟು ದುಡ್ಡು ಬೇಕಾಗುತ್ತದೆ ಎಂಬುದನ್ನು ನೋಡಿ ಅವನಿಗೆ ದುಡ್ಡನ್ನು ಮಂಜೂರು ಮಾಡಬೇಕು. ಮಂಜೂರಾತಿ ದೊರೆತ ಮೇಲೆ ವಿದ್ಯುಚ್ಛಕ್ತಿ ಇಲಾಖೆಯವರು ನೀರಾವರಿ ಪಂಪು ಸೆಟ್ಟು ಮೋಟಾರುಗಳನ್ನು ಕೊಡಬೇಕೆಂದು ಹೇಳಿ ಒಂದು ಯೋಜನೆಯನ್ನು ಹಾಕಿಕೊಂಡಿದ್ದಾರೆ. ಪ್ರತಿವರ್ಷವೂ ಸ್ವಲ್ಪ ಹೆಚ್ಚು ಕಡಿಮೆ ಒಂದು ಕೋಟಿ ರೂಪಾಯಿಗಳನ್ನು ಅದಕ್ಕಾಗಿ ಸರ್ಕಾರದವರು ಖರ್ಚುಮಾಡುತ್ತಿದ್ದಾರೆ. ಒಂದು ವರ್ಷಕ್ಕೆ ಆ ಬಾಬಿಗೆ ಸರ್ಕಾರದವರು ಒಂದು ಕೋಟಿ ರೂಪಾಯಿಗಳನ್ನು ಒದಗಿಸಿದ್ದರೂ ಕೂಡ ಆ ಹಣ ರೈತನಿಗೆ ದೊರೆಯಬೇಕಾದರೆ ಎಷ್ಟು ಕಷ್ಟ ಇದೆ ಎಂದರೆ ನಾಲ್ಕು ಏಜೆನ್ಸಿಗಳು, ಎಂದರೆ ನಾಲ್ಕು ಇಲಾಖೆಗಳು ಆತನ ಸಾಲಕ್ಕೆ ಸಂಬಂಧಪಟ್ಟ ರೆಕಾರ್ಡನ್ನು ಪರಿಶೀಲನೆ ಮಾಡಿ ಅದು ಸರಿಯಾಗಿದೆ, ಆತನಿಗೆ ಸಾಲವನ್ನು ಕೊಡಬಹುದು ಎಂದು ಒಪ್ಪಿಗೆಯನ್ನು ಕೊಟ್ಟ ಮೇಲೆ ಆತನ ಕೈಗೆ ಸಾಲದ ಹಣ ಸಿಕ್ಕುತ್ತದೆ. ಈ ರೀತಿ ರೈತನಿಗೆ ಆ ಸಾಲ ಸಿಕ್ಕಬೇಕಾದರೆ ಎಷ್ಟು ಕಷ್ಟ ಇದೆ ಎಂಬುದನ್ನು ಯಾರೂ ಹೇಳಬೇಕಾಗಿಲ್ಲ, ಅದು ಹಣಕಾಸಿನ ಮಂತ್ರಿಗಳಿಗೂ ಗೊತ್ತಿದೆ. ಆ ಕಷ್ಟವನ್ನು ಹೋಗಲಾಡಿಸುವುದಕ್ಕೋಸ್ಕರ ಏನು ಮಾಡಬೇಕೆಂದು ತೀರ್ಮಾನ ಮಾಡಿದ್ದಾರೆಂಬುದನ್ನು ಮಾನ್ಯ ಹಣಕಾಸಿನ ಸಚಿವರ ಬಡ್ಜೆಟ್ ಭಾಷಣದಲ್ಲಿ ಹೇಳಿದ್ದಾರೆ. ಅದರಲ್ಲಿ ರೈತನಿಗೆ ನೀರಾವರಿ ಬಾವಿಗಳನ್ನು ತೋಡುವ ಸಲುವಾಗಿ ನೀಡುವ ಎಲ್ಲಾ ಸಾಲಗಳನ್ನೂ ಇನ್ನು ಮುಂದೆ ಜಮೀನು ಅಡಮಾನ ಬ್ಯಾಂಕುಗಳ ಮೂಲಕ ಕೊಡಿಸಬೇಕೆಂದು ತೀರ್ಮಾನವನ್ನು ಕೈಗೊಂಡಿದ್ದಾರೆ. ಬಹುಶಃ ಇದು ಹೊಸ ತೀರ್ಮಾನವಲ್ಲ ಎನಿಸುತ್ತದೆ. ಇದು ಎರಡು ಮೂರು ವರ್ಷಗಳಿಂದಲೂ ಇದೆ. ಆಗ ಸರ್ಕಾರದವರು ಈ ವಿಷಯದಲ್ಲಿ ಕೈಗೊಂಡಂತಹ ತೀರ್ಮಾನವನ್ನು ಕಾರ್ಯರೂಪಕ್ಕೆ ತರಬೇಕಾದರೆ ಏನು ಭಿನ್ನಾಭಿಪ್ರಾಯ ಬಂತು ಎಂಬುದು ಗೊತ್ತಾಗಲಿಲ್ಲ. ಆದರೆ ಈಗ ಸರ್ಕಾರದವರು ಹೇಳತಕ್ಕಂಥ ಸಮಜಾಯಿಷಿ ಪ್ರಕಾರ ಎಲ್ಲಾ ತಾಲ್ಲೂಕುಗಳಲ್ಲಿಯೂ ಕೂಡ ಜಮೀನು ಅಡಮಾನ ಬ್ಯಾಂಕುಗಳು ಸಾಕಷ್ಟು ಪ್ರಮಾಣದಲ್ಲಿ ಅಭಿವೃದ್ಧಿಯಾಗಿಲ್ಲ, ಅದ್ದರಿಂದ ಹಣಕಾಸನ್ನು ಕೊಡತಕ್ಕ ಒಂದು ಹೆಚ್ಚಿನ ಜವಾಬ್ದಾರಿಯನ್ನು ಆ ಬ್ಯಾಂಕುಗಳಿಗೆ ವಹಿಸಿದರೆ ನಮ್ಮ ಉದ್ದೇಶ ಸಫಲವಾಗುವುದಿಲ್ಲ, ಅದರಿಂದ ಅನುಕೂಲಕ್ಕಿಂತ ಹೆಚ್ಚು ಪ್ರತಿಕೂಲವೇ ಆಗುತ್ತದೆ ಎನ್ನುವ ದೃಷ್ಟಿಯಿಂದ ಇನ್ನೂ ಸ್ವಲ್ಪಕಾಲ ನಾನಾ ಇಲಾಖೆಗಳ ಮುಖಾಂತರವೇ ರೈತರಿಗೆ ಸಾಲವನ್ನು ಕೊಡತಕ್ಕದ್ದು ಅವಶ್ಯಕ ಎಂದು ಆ ಯೋಜನೆಯನ್ನ ಜಾರಿಗೆ ತರಲಿಲ್ಲ ಎಂದು ಹೇಳುತ್ತಿದ್ದಾರೆ. ಈ ವಿಚಾರದಲ್ಲಿ ನನಗೆ ಏನು ಅನಿಸುತ್ತದೆ ಎಂದರೆ ಈಗ ಎಲ್ಲಾ ತಾಲ್ಲೂಕುಗಳಲ್ಲಿಯೂ ಕೂಡ ಜಮೀನು ಅಡಮಾನ ಬ್ಯಾಂಕುಗಳು ಬಹಳ ಚೆನ್ನಾಗಿ ಕೆಲಸ ಮಾಡುತ್ತಿವೆ. ಅವುಗಳಿಗೆ ಈ ಸಾಲಗಳನ್ನು ಕೊಡುವ ಜವಾಬ್ದಾರಿಯನ್ನು ವಹಿಸಿ ಅವುಗಳ ಮುಖಾಂತರ ಆ ಸಾಲಗಳನ್ನು ಕೊಡುವುದಾದರೆ ತೊಂದರೆಯಾಗುತ್ತದೆ ಎನ್ನುವ ದೃಷ್ಟಿಯಿಂದ ಆ ಯೋಜನೆಯನ್ನು ಜಾರಿಗೆ ತರಲಿಲ್ಲ ಎಂದು ಅರ್ಥವಾಗುತ್ತಿದೆ. ಆದರೆ ಈಗ ರೈತ ನೀರಾವರಿ ಬಾವಿಗಳನ್ನು ಕೊಡುವ ಸಲುವಾಗಿ ಸಾಲವನ್ನು ಪಡೆಯಬೇಕಾಗಿದ್ದರೆ ನಾನಾ ಇಲಾಖೆಗಳಿಗೆ ಹೋಗಿ ತಿರುಗಿ ಅಲ್ಲಿ ಅವನ ರೆಕಾರ್ಡು ಸರಿಯಾಗಿದೆ ಎಂದು ಎಲ್ಲರೂ ಒಪ್ಪಿದರೆ ನಂತರ ಅವನಿಗೆ ಸಾಲ ದೊರೆಯುತ್ತದೆ, ಇದರಿಂದ ರೈತನಿಗೆ ತೊಂದರೆಯಾಗುತ್ತದೆ ಎನ್ನುವ ವಿಷಯವನ್ನು ಸರ್ಕಾರದವರು ಮನಗಂಡು ಈಗ ಆ ಸಾಲವನ್ನು ಜಮೀನು ಅಡಮಾನ ಬ್ಯಾಂಕುಗಳ ಮೂಲಕ ಕೊಡಿಸಬೇಕೆಂದು ತೀರ್ಮಾನ ಮಾಡಿದ್ದಾರೆಂದು ಮಾನ್ಯ ಹಣಕಾಸಿನ ಸಚಿವರ ಬಡ್ಜೆಟ್ ಭಾಷಣದಲ್ಲಿ ಹೇಳಿದ್ದಾರೆ. ಬಹುಶಃ ಇದನ್ನು ಕಾರ್ಯರೂಪಕ್ಕೆ ತಂದರೆ ರೈತನಿಗೆ ಹೆಚ್ಚಿನ ಅನುಕೂಲವಾಗುತ್ತದೆ, ಮತ್ತು ತೊಂದರೆಗಳೆಲ್ಲಾ ತಪ್ಪುತ್ತದೆ ಎಂದು ನಾನು ಹೇಳುವುದಕ್ಕೆ ಅಪೇಕ್ಷೆಪಡುತ್ತೇನೆ.

(ಶ್ರೀ ಎಂ. ಸಿ. ಬಸಪ್ಪ)

ಇನ್ನು ವಿದ್ಯುಚ್ಛಕ್ತಿ ಇಲಾಖೆಯವರು ಪಂಪುಸೆಟ್ಟು ಮತ್ತು ಮೋಟಾರುಗಳನ್ನು ಸರಬರಾಜು ಮಾಡತಕ್ಕ ವಿಷಯದಲ್ಲಿ ನಿಜವಾಗಿಯೂ ಒಂದು ಕಷ್ಟ ಬಂದಿದೆ. ಅದನ್ನು ಇಲಾಖೆಯ ಅಧಿಕಾರಿಗಳ ಗಮನಕ್ಕೆ ಕೂಡ ನಾವು ತಂದಿದ್ದೇವೆ. ಆದರೂ ಕೂಡ ಅದನ್ನು ಸರಿಪಡಿಸುವುದಕ್ಕೆ ಇನ್ನೂ ಆಗಿಲ್ಲ. ಸಾಮಾನ್ಯವಾಗಿ ರೈತರು 3—5—7½ ಮತ್ತು 10 ಈ ರೀತಿ ಬೇರೆ ಬೇರೆ ಅಶ್ವಶಕ್ತಿ ಇರತಕ್ಕ ಮೋಟಾರುಗಳನ್ನು ಅಪೇಕ್ಷೆ ಮಾಡುತ್ತಾರೆ. ಈಗ ನನ್ನ ಗಮನಕ್ಕೆ ಬಂದಿರುವ ಹಾಗೆ ಅನೇಕ ತಾಲ್ಲೂಕುಗಳಲ್ಲಿ 5 ಅಶ್ವಶಕ್ತಿ ಇರತಕ್ಕ ಮೋಟಾರುಗಳು ಸಿಕ್ಕುತ್ತಿಲ್ಲ ಎಂದು ಹೇಳುತ್ತಿದ್ದಾರೆ. ಇನ್ನೊಂದು ತಾಲ್ಲೂಕಿನಲ್ಲಿ ನೋಡಿದರೆ 5 ಅಶ್ವಶಕ್ತಿ ಮೋಟಾರುಗಳು ಇರುತ್ತವೆ. ಆದರೆ ಅವುಗಳಿಗೆ ಅರ್ಜಿಗಳು ಇರುವುದಿಲ್ಲ. ಈ ರೀತಿ ಯಾವ ಪ್ರಮಾಣದ ಅಶ್ವಶಕ್ತಿ ಮೋಟಾರು ಯಾವ ತಾಲ್ಲೂಕಿಗೆ ಬೇಕಾಗುತ್ತದೆಯೋ ಅದು ಅಲ್ಲಿ ಇಲ್ಲ. ಅದು ಬೇರೆ ತಾಲ್ಲೂಕಿನಲ್ಲಿದ್ದರೆ ಅದನ್ನು ತರಿಸಿಕೊಡತಕ್ಕಂಥ ವ್ಯವಸ್ಥೆ ಇಲ್ಲ. ಒಂದೆರಡು ತಾಲ್ಲೂಕುಗಳಲ್ಲಿ 5 ಅಶ್ವಶಕ್ತಿ ಇರತಕ್ಕ ಮೋಟಾರುಗಳು ಬೇಕಾದಷ್ಟು ಇದೆ. ಅದರೆ ಮೈಸೂರು ಜಿಲ್ಲೆಯಲ್ಲಿ 5 ಅಶ್ವಶಕ್ತಿ ಇರತಕ್ಕ ಮೋಟಾರುಗಳು ಬೇಕೆಂದು ಬಹಳ ದಿವಸಗಳಿಂದಲೂ ಕೇಳುತ್ತಿದ್ದಾರೆ, ಅವರಿಗೆ ಪಂಪು ಸೆಟ್ಟುಗಳು ಮತ್ತು ಮೋಟಾರು ಮಂಜೂರಾಗಿವೆ. ಆದರೂ ಕೂಡ ಅದು ಅವರಿಗೆ ಸಿಕ್ಕುತ್ತಿಲ್ಲ. ಅದು ಸ್ಟಾಕು ಇಲ್ಲ ಬಂದಮೇಲೆ ಕೊಡುತ್ತೇವೆಂದು ಸಬೂಬು ಹೇಳುತ್ತಿದ್ದಾರೆ. ಎಲ್ಲೆಲ್ಲಿ 5 ಅಶ್ವಶಕ್ತಿ ಇರತಕ್ಕ ಮೋಟಾರುಗಳು ಇದ್ದು ಅವು ಅನುಪಯೋಗವಾಗಿರುತ್ತವೆಯೋ ಅಂಥವುಗಳನ್ನೆಲ್ಲಾ ತರಿಸಿ ಎಲ್ಲಿ ಅವುಗಳ ಉಪಯೋಗ ಇದೆಯೋ ಅಂಥಾ ಕಡೆಗೆ ಅವುಗಳನ್ನು ಒದಗಿಸತಕ್ಕದ್ದು ಅಗತ್ಯ ಇದೆ ಎಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಆ ರೀತಿ ಮಾಡುವುದಾದರೆ ಜನಗಳಿಗೆ ಅನುಕೂಲವನ್ನು ಒದಗಿಸಿದಂತಾಗುತ್ತದೆ. ಸಕಾಲದಲ್ಲಿ ರೈತನಿಗೆ ಹೆಚ್ಚಿನ ಅನುಕೂಲವನ್ನು ಕೊಡಬೇಕು. ರೈತ ನಾನಾ ಇಲಾಖೆಗಳಿಗೆ ಹೋಗಿ ತಿರುಗಿ ಅಲ್ಲಿ ಅವನ ರೆಕಾರ್ಡ್ ಸರಿಯಾಗಿದೆ ಎಂದು ಎಲ್ಲರೂ ಒಪ್ಪಿ ಅವನಿಗೆ ಸಾಲ ದೊರೆಯಬೇಕಾದರೆ ಅವನಿಗೆ ಹೆಚ್ಚು ಕಾಲ ವ್ಯರ್ಥವಾಗುತ್ತದೆ ಮತ್ತು ತೊಂದರೆಯಾಗುತ್ತದೆ ಅದಕ್ಕಾಗಿ ಸಹಕಾರ ಸಂಘಗಳ ಮುಖಾಂತರ ಆ ಸಾಲವನ್ನು ಹಂಚತಕ್ಕ ವ್ಯವಸ್ಥೆಯನ್ನು ಮಾಡಿದರೆ ಅದರಿಂದ ರೈತನಿಗೆ ಹೆಚ್ಚಿನ ಅನುಕೂಲವಾಗುತ್ತದೆ ಎಂದು ನಾನು ಹೇಳಬಯಸುತ್ತೇನೆ. ಮೈನರ್ ಇರಿಗೇಷನ್ ಗೋಸ್ಕರ ಹೆಚ್ಚಿನ ಸೌಲಭ್ಯವನ್ನು ಒದಗಿಸಬೇಕೆಂದು ಕೇಂದ್ರ ಸರ್ಕಾರದವರು ಕಳೆದ ವರ್ಷ ಎನ್. ಇ. ಎಸ್. ಯೋಜನೆಯ ಮುಖಾಂತರ ಸುಮಾರು 40-50 ಲಕ್ಷ ರೂಪಾಯಿಗಳನ್ನು ಒದಗಿಸಿದ್ದರು. ಆದರೂ ಸಹ ಕಳೆದ ವರ್ಷ ಪ್ರಾರಂಭಮಾಡಿರತಕ್ಕ ಅನೇಕ ಬಾವಿಗಳ ಕೆಲಸ ಇನ್ನೂ ಪೂರ್ಣ ಮಾಡುವುದಕ್ಕೆ ಆಗಿಲ್ಲ. ಅವುಗಳೆಲ್ಲಾ ಅರ್ಧಂಬರ್ಧ ಆಗಿವೆ. ಈಗ ಹೊಸ ಬಾವಿಗಳಿಗೆ ಸಾಲವನ್ನ ಕೊಡುತ್ತೇವೆಂದು ನಮ್ಮ ಸರ್ಕಾರದವರು ಒಂದು ಆಜ್ಞೆಯನ್ನ ಹೊರಡಿಸಿದ್ದಾರೆ. ಆದರೆ ಕೇಂದ್ರ ಸರ್ಕಾರದವರು ಹೊಸ ಬಾವಿಗಳಿಗೆ ಸಾಲವನ್ನ ಕೊಡುವುದಿಲ್ಲ ಎನ್ನುವಂತಹ ಒಂದು ತೀರ್ಮಾನವನ್ನು ತೆಗೆದುಕೊಂಡಿದ್ದರು. ಅದರಿಂದ ಹೊಸದಾಗಿ ಬಾವಿಗಳನ್ನ ಪ್ರಾರಂಭಮಾಡತಕ್ಕವರಿಗೆ ಹೆಚ್ಚಿನ ತೊಂದರೆಯಾಗುತ್ತದೆ ಮುಂದಿನ ಪ್ರಗತಿಯನ್ನ ಸಾಧನೆ ಮಾಡುವುದಕ್ಕೆ ತೊಂದರೆಯಾಗುತ್ತದೆ ಎಂದು ನಾವು ಭಾವನೆ ಮಾಡಿಕೊಂಡಿದ್ದೆವು. ಆದರೆ ಕಳೆದ ಒಂದು ವಾರದ ವಿಚಾರವನ್ನ ನೋಡುವುದಾದರೆ ಈಗ ಆ ತೀರ್ಮಾನವನ್ನ ಬದಲಾವಣೆ ಮಾಡಿದ್ದಾರೆಂದು ಗೊತ್ತಾಗಿದೆ. ಅದಕ್ಕೋಸ್ಕರ ಈಗ ಮತ್ತೆ ಸರ್ಕಾರದವರು ಹೊಸದಾಗಿ ಬಾವಿಗಳನ್ನು ತೆಗೆಯಲು ಸಾಲಕ್ಕೋಸ್ಕರ ರೈತರಿಂದ ಬರತಕ್ಕ ಅರ್ಜಿಗಳನ್ನೂ ಕೂಡ ಪರಿಶೀಲನೆ ಮಾಡಿ ನೀರಾವರಿ ಬಾವಿಗಳಿಗೆ ಹೆಚ್ಚಿನ ಹಣವನ್ನು ಕೊಡುತ್ತೇವೆಂದು ಜಿಲ್ಲಾಧಿಕಾರಿಗಳಿಗೆ ಮತ್ತು ಸಂಬಂಧಪಟ್ಟ ಅಧಿಕಾರಿಗಳಿಗೂ ತಿಳುವಳಿಕೆಯನ್ನ ಕೊಟ್ಟಿದ್ದಾರೆಂದು ತಿಳಿದು ಬಂದಿದೆ. ಅದರ ಬಗ್ಗೆ ಸರ್ಕಾರದವರು ಹಣ ಸಹಾಯವನ್ನು ಮಾಡುವುದಾದರೆ ನಿಜವಾಗಿಯೂ ಹೊಸದಾಗಿ ನೀರಾವರಿ ಬಾವಿಗಳನ್ನು ತೆಗೆಯತಕ್ಕವರಿಗೆ ಹೆಚ್ಚಿನ ಉತ್ತೇಜನವನ್ನು ಕೊಟ್ಟಂತಾಗುತ್ತದೆ. ಈಗ ಸರ್ಕಾರದವರು ವ್ಯವಸಾಯಗಾರರಿಗೆ ವ್ಯವಸಾಯದ ಅಭಿವೃದ್ಧಿಗಾಗಿ ಉತ್ತೇಜನ ಕೊಡುವುದಕ್ಕೋಸ್ಕರ, ಸಾಲವನ್ನು ಕೊಡುವುದಕ್ಕೋಸ್ಕರ ಏನು ಒಂದು 600 ಲಕ್ಷ ರೂಪಾಯಿಗಳ ಅಂದಾಜನ್ನ ಮಾಡಿದ್ದಾರೆಯೋ ಅದು ಸಾಲದು ಎಂದು ನನಗನ್ನಿಸುತ್ತದೆ. ಇನ್ನು ಅದಕ್ಕೆ ಹೆಚ್ಚಿನ ಹಣವನ್ನು ಒದಗಿಸಿ ರೈತರಿಗೆ ಹೆಚ್ಚಿನ ರೀತಿಯಲ್ಲಿ ಸಾಲಗಳನ್ನು ಕೊಡಬೇಕೆಂದು ನಾನು ಹೇಳಬಯಸುತ್ತೇನೆ.

ಇನೊಂದು ವಿಷಯವೇನೆಂದರೆ, ರೈತರು ಸರ್ಕಾರಕ್ಕೆ ಕೊಡಬೇಕಾದ ಸಾಲವನ್ನ ಸಕಾಲದಲ್ಲಿ ವಾಪಸ್ಸು ಮಾಡುತ್ತಿಲ್ಲ, ರೈತರು ಸಾಲವನ್ನ ವಾಪಸ್ಸು ಕೊಡತಕ್ಕ ಅಭ್ಯಾಸವನ್ನು ಇಟ್ಟುಕೊಂಡಿಲ್ಲ ಎನ್ನುವಂತಹ ಒಂದು ದೂರು ಕೇಳಿ ಬರುತ್ತಿದೆ. ಆ ರೀತಿ ಆಗುವುದಕ್ಕೆ ಒಂದು ಕಾರಣವಿದೆ. ಆ ವಿಷಯವನ್ನು ಸ್ವಲ್ಪ ಯೋಚನೆ ಮಾಡುವುದಾದರೆ, ಸರ್ಕಾರದವರು ರೈತರಿಗೆ ಕೊಟ್ಟಂತಹ

ಸಾಲದ ವಸೂಲಾತಿಯ ಬಗ್ಗೆ ಹೆಚ್ಚಿನ ಒಂದು ಆಸಕ್ತಿ ವಹಿಸಿ ಪ್ರಯತ್ನ ಮಾಡಿಲ್ಲ ಅನೇಕ ತಾಲ್ಲೂಕುಗಳಲ್ಲಿ ಲೋನ್ ಲೆಡ್ಜರ್ಸ್ ಮೇಂಟೇನ್ ಮಾಡಿಲ್ಲ. ಅಷ್ಟೇ ಅಲ್ಲ ರೈತರು ತೆಗೆದುಕೊಂಡಂಥ ಸಾಲದ ಹಣಕ್ಕೆ ಎಷ್ಟು ಬಡ್ಡಿಯನ್ನ ಕೊಡಬೇಕೆಂಬ ಒಂದು ತಿಳುವಳಿಕೆಯನ್ನ ರೈತರಿಗೆ ಕೊಡತಕ್ಕಂಥ ವ್ಯವಸ್ಥೆಯನ್ನು ಮಾಡಿಲ್ಲ. ರೈತರಿಗೆ ಕೊಟ್ಟ ಸಾಲ ವಸೂಲು ಆಗುವುದು ಕಷ್ಟ, ಕೊಟ್ಟ ಸಾಲ ವಾಪಸ್ಸು ಬರಲಿಲ್ಲ ಎಂದು ಹೇಳುವುದು ಸರಿಯಲ್ಲ. ರೈತರಿಗೆ ಕೊಟ್ಟ ಸಾಲವನ್ನು ವಸೂಲು ಮಾಡಲು ತಕ್ಕ ಕ್ರಮವನ್ನು ತೆಗೆದುಕೊಳ್ಳತಕ್ಕ ಒಂದು ಏರ್ಪಾಡನ್ನು ಮಾಡುವುದು ಸೂಕ್ತ ಎಂದು ನಾನು ಹೇಳಬಯಸುತ್ತೇನೆ.

ಇನ್ನು ಈ ವರ್ಷ ರೈತರಿಗೆ ವ್ಯವಸಾಯದ ಅಭಿವೃದ್ಧಿಗಾಗಿ, ನೀರಾವರಿ ಸೌಲಭ್ಯವನ್ನು ಒದಗಿಸತಕ್ಕ ಬಗ್ಗೆ ಒದಗಿಸಿರತಕ್ಕ ಹಣ ಕಡಿಮೆ ಇದೆ. ಆದ್ದರಿಂದ ಅದಕ್ಕೆ ಇನ್ನೂ ಹೆಚ್ಚಿನ ಮೊಬಲಗನ್ನು ಒದಗಿಸಬೇಕು. ಆ ರೀತಿ ಮಾಡುವುದಾದರೆ ರೈತರು ವ್ಯವಸಾಯದಲ್ಲಿ ಇನ್ನೂ ಹೆಚ್ಚಿನ ಒಂದು ಪ್ರಗತಿಯನ್ನು ಸಾಧನೆ ಮಾಡುವುದಕ್ಕೆ ಅವಕಾಶವಾಗುತ್ತದೆ ಎಂದು ಹೇಳಿ ನನಗೆ ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟದ್ದಕ್ಕಾಗಿ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಸ್ವಾಮಿ, ಅಧ್ಯಕ್ಷರೇ, ನಮ್ಮ ರಾಜ್ಯದ ಹಣಕಾಸಿನ ಪರಿಸ್ಥಿತಿಯನ್ನು ಎಷ್ಟು ಚೆನ್ನಾಗಿ ಕಾಯ್ದುಕೊಂಡು ಬಂದಿದ್ದಾರೆ ಎಷ್ಟು ಹಣ ವಸೂಲ್ಮಾಡಿದ್ದಾರೆ ಎನ್ನುವುದನ್ನು ಸ್ವಲ್ಪ ಯೋಚನೆ ಮಾಡಿ ನೋಡಬೇಕಾಗಿದೆ. ಈ ಹತ್ತನೆ ಡಿವ್ಯಾಂಡಿಗೆ ಇರತಕ್ಕ ಹಣಕಾಸಿನ ಸಂಬಂಧಪಟ್ಟಂತೆ ಒಂದು ಕಥೆ ಜ್ಞಾಪಕಕ್ಕೆ ಬರುತ್ತದೆ. ಈ ಮೂರು ವರ್ಷದಲ್ಲಿ ನಮ್ಮ ರಾಜ್ಯದ ಹಣಕಾಸಿನ ಪರಿಸ್ಥಿತಿ ಏನಾಗಿದೆ ಎಂದರೆ ಹಿಂದಕ್ಕೆ ಹೈದರಾಬಾದಿನಲ್ಲಿ ರಾಜಾ ಚಂದೂಲಾಲ ಎನ್ನುವವರು ದಿವಾನರಾಗಿದ್ದರು. ಅವರು ಹೋದ ಕಡೆಗೆ ರಿಪೋರ್ಟ್ ಕೊಡಿ ಎಂದು ಹೇಳುತ್ತಿದ್ದರು. ಏನಾದರೂ ಕೇಳಿದರೆ ರಿಪೋರ್ಟ್ ನೋಡಿ ಎಂದು ಹೇಳುತ್ತಿದ್ದರು. ಈ ಮೂರು ವರ್ಷದಲ್ಲಿ ನಮ್ಮ ರಾಜ್ಯದ ಹಣಕಾಸಿನ ಪರಿಸ್ಥಿತಿ ರಾಜಾ ಚಂದೂಲಾಲ ಆಗಿದೆ. ಹೇಗೆ ಅಂದರೆ ಆತನಲ್ಲಿ ಬಡವರಿಗೋಸ್ಕರ ಅನುಕಂಪ ಇತ್ತು.

> "He is naturally humane and benevolent, but like all weak men in power he allows great injustice and severity to be practiced under the sanction of his authority. His virtues belong to his private conduct and his fall to his private character." ಎಂದು ಹೇಳುತ್ತಿದ್ದರು.

ನಿಮಗೆ ದುಡ್ಡಿನ ಮೇಲೆ ಮಮತೆ ಇದೆ. ಹಾಗಾದರೆ ಕೊಟ್ಟಿರತಕ್ಕ ದುಡ್ಡನ್ನು ವಸೂಲ್ಮಾಡಿದ್ದೀರಾ ? ಹಣ ಕಾಸಿನ ಪರಿಸ್ಥಿತಿ ಚಂದೂಲಾಲ್‌ಕಾ ಜಮಾನಾ ಆಗಿಬಿಟ್ಟಿದೆ. ಇದನ್ನು ಮಂತ್ರಿಗಳು ಕೂಲಂಕಷವಾಗಿ ವಿಚಾರ ಮಾಡಬೇಕು. ಮೈಸೂರು ರಾಜ್ಯದಲ್ಲಿ ಪೌರಸಭೆಗಳಿಗೆ ಕೊಟ್ಟಿರತಕ್ಕ ಹಣ ಎಷ್ಟು? ಚಾರ್ಜ್ ಮಾಡಿದ ಇಂಟರೆಸ್ಟ್ ಎಷ್ಟು? ವಸೂಲ್ಮಾಡಿರತಕ್ಕ ಹಣ ಎಷ್ಟು? ಹಣಕಾಸಿನ ಸ್ಥಿತಿಗತಿ ಬಗ್ಗೆ ದ್ರವ್ಯ ಶಾಖಾ ಮಂತ್ರಿಗಳು ಹೇಳಬೇಕಾಗಿದೆ. 1947ರಲ್ಲಿ ಮೈಸೂರು ರಾಜ್ಯದಲ್ಲಿ ಜವಾಬ್ದಾರಿ ಸರಕಾರ, ಪ್ರಜಾಪ್ರಭುತ್ವ ಬಂದ ಮೇಲೆ ತಾವು ಲೋನ್ಸ್ ಎಷ್ಟು ಕೊಟ್ಟಿದ್ದೀರಿ ? ಬರಬೇಕಾದ ಹಣ ವಸೂಲ್ಮಾಡಿದ್ದೀರಾ ? ಹಾಗಾದರೆ ಸೇಲ್ಸ್ ಟಾಕ್ಸ್ ವಿಚಾರದಲ್ಲಿ ಸ್ಟೇ ಆರ್ಡರ್ ಏತಕ್ಕೆ ಕೊಟ್ಟಿರಿ ? You say that Circumstances compelled the Government to pass the orders. Why ? It is because he belonged to your party ಹೀಗಾದರೆ ಇವರು ತನ್ನವರು ಅವರು ತಮ್ಮವರು ಎಂದು ಸರಕಾರದ ಹಣ ವಸೂಲ್ಮಾಡುವಾಗ್ಗೆ ಇಟ್ಟುಕೊಂಡರೆ ಸರಕಾರದ ಬೊಕ್ಕಸಕ್ಕೆ ಹಣ ಬರುತ್ತದೆಯೇ ? ನಿರೀಕ್ಷಿಸಿದಷ್ಟು ಫಲ ದೊರೆಯುತ್ತದೆಯೇ ? ಒಂದು ಉದಾಹರಣೆ ಹೇಳುವುದಾದರೆ ಸಂಸ್ಥಾನದ ಸರಕಾರಕ್ಕೆ ಬರತಕ್ಕ ಸೇಲ್ಸ್ ಟ್ಯಾಕ್ಸ್ 72,000 ರೂಪಾಯಿಗಳನ್ನು 72 ತಿಂಗಳುಗಳಲ್ಲಿ ಪ್ರತಿಯೊಂದು ತಿಂಗಳಿಗೆ 1,000ರೂಪಾಯಿ ಕೊಡುವ ಹಾಗೆ ದಾವಣಗೆರೆ ಟಾನಿನಲ್ಲಿರತಕ್ಕ ಒಬ್ಬ ದೊಡ್ಡ ವರ್ತಕರಿಗೆ ಕಂತುಗಳನ್ನು ಮಾಡಿ ಏತಕ್ಕೆ ಕೊಟ್ಟಿರಿ ? ಇದು ಯಾವ ನ್ಯಾಯ ? ಇದರ ಬಗ್ಗೆ ಒಂದು ಚಕಾರ ಶಬ್ದ ನಿಮ್ಮ ಬಾಯಲ್ಲಿ ಬರಲಿಲ್ಲ. ಮನಸ್ಸಿಗೆ ಬಂದ ಹಾಗೆ ಸ್ವೇಚ್ಛೆಯಿಂದ ವಸೂಲ್ಮಾಡುತ್ತೀರಿ. ನೀವು ಬಡವರ ಮೇಲೆ ಅಧಿಕಾರಿಗಳ ಮೇಲೆ ದರ್ಪ ತೋರಿಸುತ್ತೀರಿ ಆದರೆ ಶ್ರೀಮಂತರ ಕಡೆ ಹೋಗುವುದಿಲ್ಲ. ಯಾಕಂದರೆ ತಿರುಗುವ ಪಲ್ಲಂಗು, ಕುಶನ್ನೂ ಇದರ ಸುಖದಲ್ಲಿ ನಿಮ್ಮನ್ನು ಮರಳುಮಾಡುತ್ತಾರೆ. ತುಮಕೂರು ಜಿಲ್ಲೆಯಲ್ಲಿ ಫಾರೆಸ್ಟ್ ಇಲಾಖೆಗೆ ಬರಬೇಕಾದ ಹಣದ ಬಗ್ಗೆ ಪತ್ರ ಬರೆದರೆ ಏನೂ ಕ್ರಮ ತೆಗೆದುಕೊಂಡಿಲ್ಲ. ಲಕ್ಷಾಂತರ ರೂಪಾಯಿ ವ್ಯವಹಾರ ನಡೆದಿದೆ. ಈ ಕಾಗದಗಳನ್ನು ಡೆಪ್ಯುಟಿ

(ಶ್ರೀ ಸಿ. ಜೆ. ಮುಕ್ಕಣ್ಣಪ್ಪ)

ಕಮಿಷನರ್‌ರು ಕೆಳಗೆ ಹಾಕಿ ಕೂತಿದ್ದಾರೆ. ಆದರೆ ನನ್ನ ಊರಿನಲ್ಲಿ 55 ಸಾವಿರ ರೂಪಾಯಿಗೆ ಹರಾಜು ಮಾಡಿದರು. ಹಣ ವಸೂಲ್ಮಾಡಬೇಕಾಗಿದೆ. ಹರಾಜು ಹಾಕಿಬಿಡಿ ಎಂದು ಹೇಳಿದರು. ಡೆಪ್ಯೂಟಿ ಕಮಿಷನರ್‌ರು ಹರಾಜು ಹಾಕಬೇಡಿ ಎಂದು ಟೆಲಿಗ್ರಾಂ ಕಳಿಸಿದರೂ ಕೇಳಲಿಲ್ಲ. ಅಧಿಕಾರ ಇಷ್ಟು ಶಿಥಿಲವಾಗಿದೆ. ಹಣ ವಸೂಲಾಗುತ್ತಿಲ್ಲ. ಅಧಿಕಾರ ದುರುಪಯೋಗವಾಗುತ್ತಿದೆ. ಇದು ಬೇಡ, ಇದು ಬೇಡ ಎಂದು ಹೇಳುತ್ತೇನೆ. ಸರಕಾರದ ಸಾಲಸೂಲ ವಸೂಲಿ ಸರಿಯಾಗಿ ನಡೆದಿಲ್ಲ. ಡೆಫಿಸಿಟ್ ಬಜೆಟ್ ಕೊಟ್ಟಿದ್ದೀರಿ. ಆದರೂ ಕೂಡ ಅಪಾಯಿಂಟ್‌ಮೆಂಟ್ ಕ್ರಿಯೇಟ್ ಮಾಡುತ್ತೀರಿ, ಬೋರ್ಡ್ ಕ್ರಿಯೇಟ್ ಮಾಡುತ್ತೀರಿ. ಒಳ್ಳೇ ಕೆಲಸಕ್ಕೆ ಹಣ ಇಲ್ಲ ಎಂದು ಹೇಳುತ್ತೀರಿ. ಇದು ನಮ್ಮ ದುರ್ದೈವ. ಸೇಲ್ಸ್‌ಟ್ಯಾಕ್ಸ್‌ನಲ್ಲಿ ಹತ್ತರಿಂದ ಇಪ್ಪತ್ತು ಮೂರು ಪರ್ಸೆಂಟ್ ರೈಸ್ ಆಗಿದೆ ಎಂದು ಹೇಳಿಕೊಳ್ಳುತ್ತಾರೆ. ಅಧಿಕಾರಿಗಳ ಭುಜ ತಟ್ಟಿದ್ದಾರೆ. ಒಳ್ಳೇ ಕೆಲಸ ಮಾಡಿದರೆ ಭುಜ ತಟ್ಟಬೇಕಾಗುತ್ತದೆ. ಇಲ್ಲದಿದ್ದರೆ ನಿರುತ್ಸಾಹ ಉಂಟಾಗುತ್ತದೆ. ಆದರೆ ಅವರಿಗೂ ಸಹ ಅವರ ಬಗ್ಗೆ ಖಾರ ಇದೆ. ಆದರೆ ಅದನ್ನು ಈ ಸಭೆಯಲ್ಲಿ ಹೇಳುವುದಿಲ್ಲ. ಏನೇ ಆದರೂ ಕೂಡ ತತ್ತ್ವ ಕೈಬಿಡಬೇಡಿ. ನನ್ನ ಜೊತೆಗೆ ಆರು ಗಂಟೆಗೆ ಜತ್ತಿಯವರ ಕಾರು ಅಲ್ಲ ನನ್ನ ಕಾರಿನಲ್ಲಿ ಕೂತು ಬರಲಿ ನಾನು ಕರೆದುಕೊಂಡು ಹೋಗಿ ಏನೇನು ನಡೆದಿದೆ ತೋರಿಸುತ್ತೇನೆ. ನಾಳೆ ಸಿ.ಐ.ಡಿ. ಯವರು ಹೋಗಿ ನೋಡಿ ರಿಪೋರ್ಟ್ ಮಾಡಲಿ. ಸೇಲ್ಸ್‌ಟ್ಯಾಕ್ಸ್ ಹೆಡ್ಡಿನಲ್ಲಿ ಏನು ಇದೆ ತೋರಿಸುತ್ತೇನೆ. ಕಮರ್ಷಿಯಲ್ ಟ್ಯಾಕ್ಸ್ ಕಮೀಷನರ್, ಡೆಪ್ಯುಟಿ ಕಮೀಷನರ್ ಮುಂತಾದ ಆಫೀಸರುಗಳಿಗೆ ಮೂರು ಸಾವಿರ ಐದು ಸಾವಿರ ಸಂಬಳ ಕೊಟ್ಟು ಇಟ್ಟುಬಿಟ್ಟಿದ್ದೀರಿ. ಬಸವನಗುಡಿ ಶಂಕರಮಠ ರೋಡ್‌ನಲ್ಲಿ ಆಫೀಸ್ ಇದೆ. ಅಲ್ಲಿಗೆ ಎಫಿಷಿಯಂಟ್ ಅಧಿಕಾರಿಗಳನ್ನು ತಂದಿದ್ದೀರಾ ? ಅವರು ಆಫೀಸಿನಲ್ಲಿ ಇರುತ್ತಾರೆಯೇ ? ಈಗ ಯಾರನ್ನಾದರೂ ಕಳಿಸಿಬಿಟ್ಟು ನೋಡಿ. ಅವರು ಆರು ಗಂಟೆಗೆ ಆಫೀಸಿನಲ್ಲಿ ಇದ್ದರೆ ನಾನು ರಾಜೀನಾಮೆ ಕೊಟ್ಟು ಹೋಗುತ್ತೇನೆ. ಬ್ಲಾಕ್ ಮಾರ್ಕೆಟ್ಟಿನಲ್ಲಿ ದೊರೆಯುವ ಫೌಂಟನ್‌ಪೆನ್ನು, ಗಡಿಯಾರ, ಟ್ರಾನ್ಸಿಸ್ಟರ್, ರೆಫ್ರಿಜರೇಟರ್ ಇವರಿಗೆ ಮಾತ್ರ ಹೇಗೆ ಸಿಕ್ಕುತ್ತವೆ ? ಮಿಕ್ಕಾದವರಿಗೆ ಯಾಕೆ ಸಿಕ್ಕುವುದಿಲ್ಲ ? ಹಣಕಾಸಿನ ಬಗ್ಗೆ ಏನು ಹೇಳುತ್ತಾರೆ ? ಅವರು ಹೇಳುವಷ್ಟು ಉತ್ತಮವಾದ ರೀತಿಯಲ್ಲಿ ಸೇಲ್ಸ್‌ಟ್ಯಾಕ್ಸ್ ಡಿಪಾರ್ಟ್‌ಮೆಂಟಿನಲ್ಲಿ ಕೆಲಸ ನಡೆಯುತ್ತಿಲ್ಲ. ಸೇಲ್ಸ್‌ಟ್ಯಾಕ್ಸ್ ಡಿಪಾರ್ಟ್‌ಮೆಂಟು ಸರಿಯಾಗಿ ನಡೆಯುತ್ತಿಲ್ಲ ಎಂದು ಹೇಳುತ್ತೇನೆ.

ಸ್ವಾಮೀ, ಒಂದು ಉದಾಹರಣೆ ಇಲ್ಲಿ ಹೇಳುತ್ತೇನೆ. ಒಬ್ಬರು ಸೆಕೆಂಡು ಡಿವಿಜನ್ನು ಕ್ಲಾರ್ಕು ಕಮರ್ಷಿಯಲ್ ಟ್ಯಾಕ್ಸು ಆಫೀಸಿನಲ್ಲಿರುವವರು ಅವರಿಗೆ ಬರತಕ್ಕ ಸಂಬಳ ಕೇವಲ 80 ರಿಂದ 100 ರೂಪಾಯಿಗಳು ; ಅವರು ತಮ್ಮ ಮನೆಯಲ್ಲಿ ಶುಭ, ಶೋಭನ ಹಾಗೂ ಕಲ್ಯಾಣದ ಕೆಲಸಗಳನ್ನು ಮಾಡಬೇಕಾದರೆ ಸುಮಾರು 10-15 ಸಾವಿರ ರೂಪಾಯಿಗಳಷ್ಟು ಖರ್ಚು ಮಾಡಿ ಈ ಕೆಲಸಕಾರ್ಯಗಳನ್ನು ಮಾಡಬೇಕಾದರೆ ಆ ಗುಮಾಸ್ತರಿಗೆ ಇರತಕ್ಕ ವರಮಾನ ಎಷ್ಟು ? ಹಣವಂತರಾಗಿದ್ದು ಗುಮಾಸ್ತಗಿರುವ ಜನ ಎಷ್ಟು ಜನ ಇದ್ದಾರೆ ಎನ್ನುವುದನ್ನು ನಮ್ಮ ಮಾನ್ಯ ಆರ್ಥಿಕ ಮಂತ್ರಿಗಳು ಪರಿಶೀಲನೆ ಮಾಡಿದರೆ ಅವರಿಗೇ ಅರ್ಥವಾಗುತ್ತದೆ. ಅವರಿಗೂ ಗೊತ್ತಿದೆ. ಇಲ್ಲಿ ನಿಜವಾಗಿ ಎಷ್ಟು ಮಟ್ಟಿಗೆ ಸರಕಾರಕ್ಕೆ ಆದಾಯ ಬರಬೇಕಾಗಿತ್ತೋ ಅಷ್ಟು ಬರದೆ ಎಷ್ಟು ಪ್ರಮಾಣದಲ್ಲಿ ಕೆಲಸ ಕಾರ್ಯಗಳು ಆಗಬೇಕಾಗಿತ್ತೋ ಅಷ್ಟು ಮಟ್ಟಿಗೆ ಆಗುತ್ತಿಲ್ಲ ಎಂದು ನಾನು ಸರಕಾರಕ್ಕೆ ತಿಳಿಸಬೇಕಾಗಿದೆ.

ಇನ್ನು ಚೆಕ್ ಪೋಸ್ಟುಗಳನ್ನು ಮಾಡಿದ್ದಾರೆ. ಈ ಚೆಕ್ ಪೋಸ್ಟುಗಳಲ್ಲಿರುವ ನಿಮ್ಮವರೇ ರಿಪೋರ್ಟನ್ನು ಕಳುಹಿಸುತ್ತಿದ್ದಾರೆ. ಆದರೆ ಆ ರಿಪೋರ್ಟು ಸತ್ಯಕ್ಕೆ ದೂರವಾದುದು. ನಮ್ಮ ಊರಿನ ದಾರಿಯಲ್ಲೇ ಒಂದು ಚೆಕ್ ಪೋಸ್ಟು ಇದೆ. ಈ ಚೆಕ್ ಪೋಸ್ಟು ಹತ್ತಿರವೇ ನೂರಾರು ಲಾರಿಗಳು ನಿಂತಿರುತ್ತವೆ. ಈ ಚೆಕ್‌ಪೋಸ್ಟು ಹತ್ತಿರವೇ ಇದಕ್ಕೆ ಸಂಬಂಧಪಟ್ಟವರು ಒಂದು ಹೋಟಲನ್ನು ನಡೆಸುತ್ತಿದ್ದಾರೆ. ಆ ಹೊಟಲಿನಲ್ಲೇ ಇವರ ಎಲ್ಲ ವ್ಯವಹಾರಗಳೂ ನಡೆಯುತ್ತಿರುತ್ತವೆ. ರಾತ್ರಿ ಒಂಬತ್ತು ಗಂಟೆಗೆ ಬಂದ ಲಾರಿಗಳು ಮೂರನೇ ದಿನದ ಹನ್ನೆರಡು ಗಂಟೆಯವರೆಗೆ ಅಲ್ಲೇ ನಿಂತಿರುತ್ತವೆ. ಇದೇ ರೀತಿ ಜಯನಗರದಲ್ಲಿ ಒಂದು ಚೆಕ್‌ಪೋಸ್ಟು ಮಾಡಿರುತ್ತಾರೆ. ಈ ಚೆಕ್ ಪೋಸ್ಟಿನಲ್ಲಿ ಕೆಲಸಮಾಡುತ್ತಿರುವವರೊಬ್ಬರು ಅವರ ಕುಟುಂಬದವರ ಹೆಸರಿನಲ್ಲಿ ಸುಮಾರು 55 ಸಾವಿರದಷ್ಟು ಬೆಲೆಬಾಳುವ ಮೂರು ಸೈಟುಗಳನ್ನು ಕೊಂಡುಕೊಂಡಿದ್ದಾರೆ. ನನ್ನ ಹತ್ತಿರ ಆ ಸೈಟುಗಳ ನಂಬರುಗಳೂ ಇವೆ, ಬೇಕಾದರೆ ಅದನ್ನೂ ಕೊಡುತ್ತೇನೆ. ಈ ರೀತಿ ಮಾಡುವುದು ಸರಿಯೇ ? ತಾವು ಇಂತಹ ಚೆಕ್ ಪೋಸ್ಟುಗಳನ್ನು ಮಾಡಿದ್ದೇವೆಂದು ಹೇಳುತ್ತ ಸೇಲ್ಸ್ ಟ್ಯಾಕ್ಸು ಲೆಕ್ಕವನ್ನು ತಳಕಮಳಕಾ ಮಾಡಿ ಈ ರೀತಿ ಸರಕಾರದವರು ತೆಗೆದುಕೊಂಡಿರುವ ಕಾರ್ಯಕ್ರಮ

ಸರಿಯಾಗಿದೆಯೇ? ನೀವೇನೋ ಕಾರ್ಯಕ್ರಮಗಳನ್ನೇನು ತೆಗೆದುಕೊಳ್ಳುತ್ತಿದ್ದೇವೆಂದು ಹೇಳಬಹುದು. ಆದರೆ ಇಲ್ಲಿ ಹೇಗಾಗಿದೆ ಎಂದರೆ ಚಾಪೆಯ ಕೆಳಗೆ ನೀವು ತೂರುತ್ತೇವೆ ಎಂದರೆ ಅವರು ರಂಗೋಲೆ ಕೆಳಗೇ ತೂರುತ್ತೇವೆ. ಎಂದ ಹಾಗೆ ನಮ್ಮ ಹಣಕಾಸಿನ ಸಚಿವರು ಸ್ಥಿತಿಗತಿಗಳನ್ನು ನೋಡುವುದನ್ನು ಬಿಟ್ಟು ಬಿಟ್ಟು ಈಚೆಗೆ ಬಸವಣ್ಣನನ್ನು ಹಿಡಿದುಕೊಂಡು ಹೋಗುತ್ತಿದ್ದಾರೆ. ದೇಶದ ಹಣಕಾಸಿನ ಸ್ಥಿತಿಗಳು ಯಾವ ಮಟ್ಟದಲ್ಲಿವೆ, ಯಾವ ಸ್ಥಿತಿಯಲ್ಲಿದೆ ಅದರಲ್ಲಿರುವ ಲೋಪದೋಷಗಳೇನಿವೆ ಅದನ್ನು ಬಿಟ್ಟು ಬಿಟ್ಟು ಬಸವಣ್ಣನನ್ನು ಹಿಡಿದುಕೊಂಡು ಹೋಗಬೇಕು ಎಂದು ಹಿಡಿದುಕೊಂಡು ಹೋಗುತ್ತಿದ್ದಾರೆ. ಬಸವಣ್ಣನವರು ಅವರ ವಚನದಲ್ಲಿ 'ದೇವನೊಬ್ಬ, ನಾಮ ಹಲವು' 'ಕಾಯಕವೇ ಕೈಲಾಸ' ಎನ್ನುವಂತೆ ಇವರು ಕೆಲಸ ಮಾಡಿಲ್ಲ. 'ಸರಕಾರದ ಕೆಲಸ ದೇವರ ಕೆಲಸ' ಎಂದು ದೇಶದ ಜನತೆಯ ಕಲ್ಯಾಣಕ್ಕೋಸ್ಕರ ತಾವು ಕೆಲಸಗಳನ್ನು ಮಾಡಿದರೆ ಅದರಿಂದ ಎಲ್ಲರಿಗೂ ಒಳ್ಳೆಯದಾಗುತ್ತದೆ. 61-62, 62-63, 63--64, ಮತ್ತು 64-65 ಈ ವರ್ಷಗಳಲ್ಲಿ ಎಷ್ಟು ಪರ್ಸೆಂಟು ಜಾಸ್ತಿ ಬಂದಿದೆ, ಕಲೆಕ್ಷನ್ನು ಎಷ್ಟು ಜಾಸ್ತಿಯಾಗಿದೆ? ಯಾವ ರೀತಿಯಾಗಿ ಲೀಕೇಜನ್ನು ಸ್ಟಾಪ್ ಮಾಡಿದ್ದೀರಿ ಎಂದು ಕೇಳಿದರೆ 'It is not to the satisfaction to the Government' ಎಂದು ಹೇಳಿ ತಾವು ಒಪ್ಪಿಕೊಳ್ಳಬೇಕು. ಇನ್ನು ಮುಂದಾದರೂ ಇದನ್ನು ತಾವು ಹೇಗೆ ಕಂಡುಹಿಡಿಯಬೇಕು ಎನ್ನುವುದನ್ನು ತಿಳಿದುಕೊಳ್ಳಬೇಕು.

ಸ್ವಾಮಿ, ತಮ್ಮ ಸರಕಾರಕ್ಕೆ ಬಹಳ ಆಪ್ತಸ್ನೇಹಿತರೊಬ್ಬರು ಬೊಂಬಾಯಿನಿಂದ ಕ್ಯಾಲಿಕೋ ಮಿಲ್ಸ್‌ಗೆ ಸೇರಿದಂತಹ ಬಟ್ಟೆಗಳನ್ನು ಲೋಡು ಮಾಡಿಕೊಂಡು ಬಂದಂತಹ ಮೂರು ಲಾರಿಗಳು ಚೆಕ್ ಪೋಸ್ಟು ಬಳಿ ಬಂದಾಗ ಅದನ್ನು ತಡೆದು ಒಬ್ಬರು ಗುಮಾಸ್ತರನ್ನು ಲಾರಿಗೆ ಸಂಬಂಧಪಟ್ಟವರು ಹೆದರಿಸಿ ಚೀಫ್ ಮಿನಿಸ್ಟರವರಿಗೆ ಫೋನು ಮಾಡುತ್ತೇವೆ ಎಂದು ಹೇಳಿದುದನ್ನು ನಾನು ಅಲ್ಲೇ ಪಕ್ಕದಲ್ಲಿ ನಿಂತು ಕೇಳುತ್ತಿದ್ದೆ. ಅವರು ಉಪಯೋಗ ಮಾಡಿದಂತಹ ಭಾಷೆಗಳು ಮತ್ತು ಲ್ಯಾಂಗ್ವೇಜನ್ನು ಇಲ್ಲಿ ಹೇಳುವುದು ಸರಿಯಲ್ಲ. ಚೀಫ್ ಮಿನಿಸ್ಟರಿಗೆ ಟೆಲಿಫೋನು ಮಾಡುತ್ತೇವೆ, ಜತ್ತಿಯವರಿಗೆ ಹೇಳುತ್ತೇವೆ ಎಂದು ಅಲ್ಲಿ ಮಾತನಾಡಿದಂತಹ ಲ್ಯಾಂಗ್ವೇಜು ಕೇಳಿದಾಗ ನಾನೇನಾದರೂ ಅಧಿಕಾರದಲ್ಲಿದ್ದಿದ್ದರೆ ಅವರಿಗೆ ಸರಿಯಾಗಿ ಹೇಳುತ್ತಿದ್ದೆ. ಅವರನ್ನು ಕೂರಿಸಿಕೊಂಡು ಅವರೇನಾದರೂ ಕಂಪ್ಲೇಂಟು ಮಾಡಿದ್ದರೆ ಅವರು ಎಷ್ಟೇ ದೊಡ್ಡ ಶ್ರೀಮಂತರಾಗಿರಲಿ ಅವರಿಗೆ ಬೇರೆ ತರಹದಲ್ಲಿ ತಕ್ಕ ಶಾಸ್ತಿ ಮಾಡುತ್ತಿದೆ. ಆದರೆ ತಾವು ಅಧಿಕಾರದಲ್ಲಿರುವಂತಹ ಜನ ಬಹಳ ಹ್ಯುಮಾನಿಟೇರಿಯನ್ ಕನ್‌ಸಿಡರೇಷನ್ನು ಎಂದು ನನಗೆ ಬೇಕಾದವರು ಎಂದು, ತಮಗೆ ಸಮಯದಲ್ಲಿ ರಕ್ಷಣೆ ಕೊಡಬೇಕಾದವರು ಎಂದು ಗಮನದಲ್ಲಿಟ್ಟುಕೊಂಡು ಈ ರೀತಿ ಮಾಡುತ್ತಿದ್ದೀರಿ ಎಂದು ಕಾಣುತ್ತೆ. ಯಾರು ಯಾರು ಇದಕ್ಕೆ ಅಂಟಿಕೊಂಡಿದ್ದಾರೋ ಗೊತ್ತಿಲ್ಲ. ಈ ಮೂರು ಲಾರಿ ಲೋಡಿನಲ್ಲಿ ಬಂದ ಕ್ಯಾಲಿಕೋ ಮಿಲ್ಲು ಬಟ್ಟೆಗಳಿಂದ ಮೈಸೂರು ಸರಕಾರಕ್ಕೆ ಬರಬೇಕಾದ ಸೇಲ್ಸ್ ಟ್ಯಾಕ್ಸು ಕೊಡದೇ ಹಾಗೆ ಬಂದಿವೆ. ಹೀಗೆ ಬಟ್ಟೆ ಲೋಡುಗಳಿಂದ ತುಂಬಿನ ಲಾರಿಗಳು ಚೆಕ್ ಪೋಸ್ಟು ಆಫೀಸಿನಲ್ಲಿ ಸೇಲ್ಸ್‌ಟ್ಯಾಕ್ಸು ಕಟ್ಟದೆ ಬಂದಿವೆ ಎಂಬ ದೂರನ್ನು ತಮ್ಮ ಗಮನಕ್ಕೆ ತಂದು ಕೊಟ್ಟರೆ ಅದರ ಮೇಲೆ ಏನು ಕಾರ್ಯಕ್ರಮ ತೆಗೆದುಕೊಳ್ಳುತ್ತೀರಿ ಎಂದು ನಾನು ಸರಕಾರದಲ್ಲಿ ಕೇಳುತಿದ್ದೇನೆಯೇ ಹೊರತು ಬೇರೇನಿಲ್ಲ.

ಇನ್ನೊಂದು ವಿಚಾರ. ಸಣ್ಣ ಪುಟ್ಟ ಅಂಗಡಿಯನ್ನು ಇಟ್ಟುಕೊಂಡಿರುತ್ತಾರೆ. ಅದರಲ್ಲಿ ಬೀಡಿ, ಬೆಂಕಿಪೊಟ್ಟಣ ಇತ್ಯಾದಿಗಳನ್ನು ಇಟ್ಟುಕೊಂಡಿರುವವರ ಹತ್ತಿರ ಹೋಗಿ ಜಬರುದಸ್ತಿನಿಂದ ಸೇಲ್ಸ್ ಟ್ಯಾಕ್ಸನ್ನು ವಸೂಲು ಮಾಡುತ್ತಾರೆ. ಬೆಂಗಳೂರು ಸಿಟಿ, ಒಳಗೆ, ದಾವಣಗೆರೆ, ಪಟ್ಟಣದಲ್ಲಿ ಮೈಸೂರು ನಗರದಲ್ಲಿ, ಹುಬ್ಬಳ್ಳಿಯಲ್ಲಿ, ಗುಲ್ಬರ್ಗಾದಲ್ಲಿ, ಹಾಗೂ ಇತರ ದೊಡ್ಡ ದೊಡ್ಡ ಪಟ್ಟಣಗಳಲ್ಲಿ ಎಲ್ಲೆಲ್ಲಿ ದೊಡ್ಡ ವ್ಯವಹಾರಗಳು ನಡೆಯುತ್ತವೋ ಎಂದರೆ ಸೇಂಗಾ, ಕಾಟನ್, ಜವಾರ್, ಅರಕಾ ನಟ್ಸ್, ಕೋಕನಟ್ಸ್ ಅವುಗಳ ಮೇಲೆ ಬರಬೇಕಾದ ಸೇಲ್ಸ್ ಟ್ಯಾಕ್ಸುಗಳನ್ನು ಸರಿಯಾಗಿ ವಸೂಲು ಮಾಡುತ್ತಿಲ್ಲ, ಬರಬೇಕಾದ ಸೇಲ್ಸ್‌ಟ್ಯಾಕ್ಸುಗಳನ್ನು ಎಷ್ಟರಮಟ್ಟಿಗೆ ವಸೂಲು ಮಾಡಿದ್ದೀರಿ ಎನ್ನುವುದನ್ನು ತಾವು ಇಲ್ಲಿ ಸ್ವಲ್ಪ ಹೇಳಿದರೆ ಅದರಿಂದ ನಮಗೆ ಅನುಕೂಲವಾಗುತ್ತದೆ. ಸೇಲ್ಸ್ ಟ್ಯಾಕ್ಸು ಇಲಾಖೆಯೊಳಗಡೆ ಎಲ್ಲೆಲ್ಲೂ ಕಾಯಿಲೆಗಳು ಇದ್ದರೂ ಅವುಗಳನ್ನು ಇನ್ನೂ ದೂರ ಮಾಡಿಲ್ಲ. ಇಲ್ಲಿರುವ ಕಾಯಿಲೆಗಳು ದೂರವಾಗಬೇಕಾದರೆ ಬೇರೆತರಹದ ಔಷಧಿಗಳನ್ನು ಕಂಡುಹಿಡಿಯಬೇಕು ಎಂದು ಸರಕಾರಕ್ಕೆ ಸಲಹೆ ಮಾಡುತ್ತೇನೆ.

Mr. SPEAKER.—If the Hon'ble Members avoids padding, he will be a little quick.

Sri C. J. MUCKANNAPPA.—If there is no padding I cannot drive home my argument into the ears of these people, because they are thick-skinned. ಸೇಲ್ಸ್ ಟ್ಯಾಕ್ಸ್ ವಿಷಯದಲ್ಲಿ ಸರಕಾರದವರ ಗಮನ ಸೆಳೆಯಬೇಕು ಎಂದು ಅಲ್ಲಿ ಪ್ರಯತ್ನ ಮಾಡುತ್ತಿದ್ದೇನೆ. ಸಣ್ಣಪುಟ್ಟ ಅಂಗಡಿಗಳನ್ನು ಇಟ್ಟುಕೊಂಡಿರುವವರಿಗೆ ಬಹಳ ತೊಂದರೆ ಯಾಗಿದೆ.

ಅದನ್ನು ತಪ್ಪಿಸಲು ತಕ್ಕ ಪ್ರಯತ್ನ ಮಾಡಬೇಕು. ಇಲ್ಲಿ ಎಷ್ಟು ಅರಿಯರ್ಸ್ ಕೊಡಬೇಕೋ ಅದನ್ನು ಡಿಪಾಸಿಟ್ಟು ಮಾಡದೇ ಹೋದರೆ ಅವರು ವ್ಯವಹಾರ ಮಾಡಲು ಶಕ್ಯವಿಲ್ಲ ಎಂದು ಹೇಳಿದರೆ ಸರಿಯಾಗಿರುವುದಿಲ್ಲ. ತಾವು ಮತ್ತೊಮ್ಮೆ ಇದನ್ನು ರೀ ಕನ್‌ಸಿಡರ್ ಮಾಡಬೇಕು ಎಂದು ಹೇಳುತ್ತೇನೆ ಹತ್ತು ಸಾವಿರದಿಂದ ಐದುಸಾವಿರದೊಳಗಡೆ ಅರಿಯರ್ಸು ಇರತಕ್ಕವರು ಏನಾದರೂ ಡಿಪಾಸಿಟ್ಟು ಹಾಕಿದ್ದರೆ, ಹಾಕಿರತಕ್ಕ ವೊಬಲಗು ಜಾಸ್ತಿಯಾಗಿದೆ ಎಂದು ಕಂಡುಬಂದರೆ, ಅಪೀಲು ಮಾಡುವಾಗ ಆ ರೀತಿ ಡಿಪಾಸಿಟ್ಟನ್ನು ಮಾಡತಕ್ಕದ್ದನ್ನು ಸ್ವಲ್ಪ ರಿಲ್ಯಾಕ್ಸ್ ಮಾಡಬೇಕು. ಇಲ್ಲದೇ ಹೋದರೆ ಬಡ ವರು ಹಾಗೂ ಸಣ್ಣ ಪುಟ್ಟ ಅಂಗಡಿಗಳನ್ನು ಇಟ್ಟುಕೊಂಡಿರುವವರಿಗೆ ತಕ್ಕ ಪ್ರತಿಫಲ ಸಿಗಬೇಕಾದರೆ, ಸರಕಾರದವರು ಇಂತಹ ಜನರ ಕಷ್ಟವನ್ನು ರಿಡ್ರೆಸ್ಸು ಮಾಡದೇ ಇದ್ದರೆ ಇಂತಹ ಅಂಗಡಿಗಳವರು ಶಕ್ಯವಿಲ್ಲದೆ ಹಣ ಕೊಟ್ಟು ಕೈಕಟ್ಟಿಕೊಂಡು ಕೂತುಕೊಳ್ಳಬೇಕಾಗುತ್ತದೆ. ಮಾನ್ಯ ಸದಸ್ಯರಾದ ಶ್ರೀಮತಿ ಸುಶೀಲಾಬಾಯಿ ಹಿರಾಚಂದ್ ಷಾ ರವರು ಈಗತಾನೇ ಹೇಳಿದಂತೆ ಲಾಯರುಗಳು ಹೋಗಿ ಹಣ ಕಟ್ಟಬೇಕು, ಆಡಿಟರುಗಳಿಗೆ ಹಣ ಕೊಡಬೇಕು ಇವರಿಗೆಲ್ಲಾ ಪ್ರತಿಫಲ ಸಿಗಬೇಕಾದರೆ ಒಂದು ಸಾವಿರದಿಂದ ಐದು ಸಾವಿರದೊಳಗಡೆ ಇರುವವರಿಗೆ ಏನಾದರೂ ರಿಲೀಫ್ ಕೊಡದೆ ಇದ್ದರೆ ಕಷ್ಟವಾಗುತ್ತದೆ. ಸರಕಾರದವರು ಇದನ್ನು ಯೋಚನೆ ಮಾಡಬೇಕು. ತಮ್ಮಲ್ಲಿ ಸಣ್ಣಪುಟ್ಟ ವರ್ತಕರ ಪರವಾಗಿ ತಮ್ಮನ್ನು ಇಲ್ಲಿ ಕೇಳಿಕೊಳ್ಳುತ್ತೇನೆ.

ಇನ್ನು ಅಗ್ರಿಕಲ್‌ಚರಲ್ ಇನ್‌ಕಂ ಟ್ಯಾಕ್ಸಿನಲ್ಲಿ ನಾವೆಲ್ಲಾ ಯೋಚನೆ ಮಾಡಿದಂತೆ ಈ ಇಲಾಖೆ ಯಿಂದ ಜನರಿಗೆ ಒಳ್ಳೆಯದಾಗಬೇಕು, ಜನಗಳಿಗೆ ನ್ಯಾಯ ಸಿಗಬೇಕು ಎಂದು ನಾನಾದರೂ ತಿಳಿದು ಕೊಂಡಿದ್ದೆ. ಆದರೆ ಇಲ್ಲಿರುವ ಅಸಿಸ್ಟೆಂಟು ಕಮೀಷನರ ಹತ್ತಿರ ಏನಾದರೂ ಒಂದು ಕೆಲಸಕ್ಕೆ ಯಾರಾದರೂ ಬಂದಾಗ ಅವರಲ್ಲಿ ಏನಾದರೂ ಇದ್ದರೆ ಅವರಿಂದ ತಿನ್ನುವುದು ಒಂದುಮಾತ್ರ ಗೊತ್ತಿದೆ ಮತ್ತು ಅವರಿಂದೇನೂ ಆಗುವುದಿಲ್ಲ. ಮಲೆನಾಡಿನಲ್ಲಿ ಅಡಿಕೆ ತೋಟಗಳು ಹಾಗು ಗದ್ದೆಗಳಿರುತ್ತವೆ ಅದನ್ನು ಸರಿಯಾಗಿ ಪರಿಶೀಲನೆ ಮಾಡಿ ನೋಡಲು ಇಲ್ಲಿನ ಅಧಿಕಾರಿಗಳು ಹೋಗುವುದಿಲ್ಲ. ಅವರ ಹತ್ತಿರ ಬರುವ ರೈತರನ್ನು ಎಷ್ಟು ಅಡಕೆ ಗಿಡಗಳಿವೆ ಎಂದು ಅಂದಾಜನ್ನು ಕೇಳಿಕೊಂಡು ಒಂದು ಸಾವಿರದಷ್ಟು ಗಿಡಗಳು ಇದ್ದರೆಅದಕ್ಕೆ 50 ಮಣದಷ್ಟು ಫಸಲು ಬರುತ್ತದೆ ಎಂದು ಅದಕ್ಕಾಗಿ ಕ್ವಿಂಟಾಲಿಗೆ 650 ರಿಂದ 700 ರೂಪಾಯಿಗಳವರೆಗೆ ಟ್ಯಾಕ್ಸು ಕೊಡಬೇಕೆಂದು ಹೇಳುತ್ತಾರೆ. ಅದಕ್ಕೋಸ್ಕರ ನಾನು ಸರಕಾರದಲ್ಲಿ ಸೂಚಿಸುವುದು ಮೂರು ಸಾವಿರ ರೂಪಾಯಿಗಳಿಗಿಂತ ಕಡಿಮೆ ವರಮಾನ ಬರುವವರಿಗೆ ಕಡಿಮೆ ಮಾಡುವ ಅವಕಾಶ ಇದೆ. ಈ ತೆರಿಗೆಯನ್ನು ವಸೂಲು ಮಾಡಲು ನೇಮಿಸಿರುವ ಅಧಿಕಾರಿಗಳು ಸಣ್ಣ ಪುಟ್ಟ ಜಮೀನುದಾರರುಗಳನ್ನು ಸಮಾಧಿ ಮಾಡುತ್ತಾರೆ. ಇಂತಹ ಕಮರ್ಷಿಯಲ್ ಟ್ಯಾಕ್ಸು ಆಫೀಸರುಗಳಿಂದ ಆಗಬಾರದಂತಹ ಕೆಲಸಗಳು ಆಗುತ್ತಿವೆ. ರೈತ ರಿಗೆ ಇಲ್ಲದೆ ಈತಿಭಾಧೆಗಳು ಹೆಚ್ಚಾಗಿ ರೈತರುಗಳಿಗೆ ಕಷ್ಟವಾಗಿದೆ. ಮುಂದಿನ ಚುನಾವಣೆ 1967 ರಲ್ಲಿ ನಡೆಯುತ್ತದೆ ಆಗ ಜನ ನಿಮಗೆ ಜನ ಸರಿಯಾದ ಉತ್ತರ ಹೇಳುತ್ತಾರೆ.

ಪೊಲಿಟಿಕಲ್ ಅಂಡ್ ಟೆರಿಟೋರಿಯಲ್ ಪೆನ್‌ಷನ್ಸ್, ಪ್ರಿವಿಪರ್ಸಸ್ ಅಂಡ್ ಅಲೋಯನ್ಸಸ್ ಆಫ್ ಇಂಡಿಯನ್ ರೂಲರ್ಸ್, ಇಷ್ಟೆಲ್ಲಾ ಇಟ್ಟಿದ್ದರೂ, ಈ ಐಟಮ್ಮುಗಳಿಗೆ ಇನ್ನೊಂದು ಹೊಸ ವಿಷಯವನ್ನು ಸೇರಿಸಬೇಕು ; ಆ ಬಗ್ಗೆ ಸರ್ಕಾರಕ್ಕೆ ನಾನು ಒಂದು ಹೊಸ ಸಲಹೆ ಮಾಡಬೇಕೆಂದಿ ದ್ದೇನೆ. ಪೊಲಿಟಿಕಲ್ ಸಫರರ್ಸ್ಸಿಗೆ ಇದರಲ್ಲಿ ಯಾವ ತರಹ ಸಹಾಯ ಧನವನ್ನೂ ಇಟ್ಟಿಲ್ಲ, ಪೊಲಿಟಿ ಕಲ್ ಸಫರರ್ಸ್ಸಿಗೆ ಅಲೊಯನ್ಸ್ ಇಡದೆಹೋದರೆ, ಅವರಿಗೆ ಏನಾದರೂ ಒಂದು ದಾರಿ ತೋರಿಸದೆ ಹೋದರೆ, ಪೊಲಿಟಿಕಲ್ ಸ್ಟೆಬಿಲಿಟಿ ಇರುವುದಿಲ್ಲ.

5-30 P.M.

Mr. SPEAKER.—If the Hon'ble Member had given a cut motion on the subject, it could have been accepted. He has not done it.

Sri C. J. MUCKANNAPPA.—The then Speaker advised me that there is no fun in sending cut-motions. Nobody will look into it, why do you take trouble ? he said. Since that date I have not sent up one single cut motion, Sir.

Mr. SPEAKER.—He is too intelligent for being advised by anybody.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಈ ಪೊಲಿಟಿಕಲ್ ಸಫರರುಗಳಿಗೆ ತಾವು ಏನಾದರೂ ಒಂದು ಇಲ್ಲಿ ಮಾಡದೆಹೋದರೆ, ಪೊಲಿಟಿಕಲ್ ಸ್ಟೆಬಿಲಿಟಿ ಇರುವುದಿಲ್ಲ. ಆಡಳಿತದಲ್ಲಿರತಕ್ಕಂಥ ಪಕ್ಷಕ್ಕೆ ಸ್ಟೆಬಿಲಿಟಿ ಇರುವುದಿಲ್ಲ; ಗವರ್ನ್‌ಮೆಂಟಿಗೆ ಸ್ಟೆಬಿಲಿಟಿ ಇರುವುದಿಲ್ಲ. ಆದ್ದರಿಂದ ಸರಕಾರದವರು ನಾನು ಹೇಳುತ್ತಿರುವುದನ್ನು ಯೋಚನೆ ಮಾಡಬೇಕು. It is very high time for the Government this Government and Government of India to end giving of pension to the Rulers. ಅರಮನೆಗಳು, ಲಕ್ಷಾಂತರ ಎಕರೆ ಭೂಮಿ, ಕೋಟ್ಯಾಂತರ ರೂಪಾಯಿ ಒಡವೆ ವಸ್ತುಗಳು, ಬ್ಯಾಂಕಿನಲ್ಲಿ ಚೆನ್ನಾಗಿ ಹಣ ಇರುವಾಗ, ಬೆವರು ಸುರಿಸಿದ ಬೋರೆಗೌಡನ ಬೊಕ್ಕಸದಿಂದ ಈ ಮಹಾರಾಜರುಗಳಿಗೆ ಪ್ರಿವಿಪರ್ಸ್, ಅಲೊಯನ್ಸ್ ಏಕೆ ಕೊಡಬೇಕು ?

ಅಧ್ಯಕ್ಷರು.—ಅವರುಗಳ ಹಕ್ಕುಗಳನ್ನು ಕಿತ್ತುಕೊಳ್ಳಲಿಲ್ಲವೆ ?

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಪಟೇಲ ಶಾನುಬೋಗರ ಹಕ್ಕುಗಳನ್ನೂ ಕಿತ್ತುಕೊಂಡು ಬಿಟ್ಟಿದ್ದಾರೆ. ಆದರೆ ಅವರಿಗೆ ಎಷ್ಟು ಕೊಟ್ಟಿದ್ದಾರೆ? ಒಂದು ಎಕರೆ ಭೂಮಿ, 5 ರೂಪಾಯಿ ಕಾಂಪೆನ್ಸೇಶನ್. ಅಂಥಹದರಲ್ಲಿ ರೂಲರುಗಳಿಗೆ ಪೆನ್ಸನ್ ಏಕೆ ಕೊಡಬೇಕು ? ನಾನು ತಮ್ಮ ಮುಖಾಂತರ ಕೇಂದ್ರ ಸರಕಾರಕ್ಕೆ ವಿನಯದಿಂದ ಪ್ರಾರ್ಥನೆ ಮಾಡಿಕೊಳ್ಳುವುದೇನೆಂದರೆ......

ಅಧ್ಯಕ್ಷರು.—ಕೇಂದ್ರ ಸರಕಾರಕ್ಕೆ, ನನ್ನ ಮುಖಾಂತರ ಎಷ್ಟು ಮಾತ್ರಕ್ಕೂ ಸಾಧ್ಯವಿಲ್ಲ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಸ್ಟೇಟ್ ಗವರ್ನಮೆಂಟ್ ಮಾಡಬೇಕೆಂದು ತಮ್ಮ ಮುಖಾಂತರ ನಾನು ಕೇಳುತ್ತೇನೆ. ಈ ಪ್ರಿವೀಪರ್ಸಸ್ ಅಂಡ್ ಅಲೊಯನ್ಸಸ್ ಟು ಇಂಡಯನ್ ರೂಲರ್ಸ್ ಕೊನೆಗಾಣಿಸಬೇಕು. ಅದಕ್ಕೆ ರಾಜ್ಯಾಂಗಕ್ಕೆ ಯಾವತರಹ ಕಾನೂನಿನ ತಿದ್ದುಪಡಿ ಬೇಕೋ, ಅಂಥ ತಿದ್ದುಪಡಿ ಬರುವುದಕ್ಕೆ ನಮ್ಮ ಮೈಸೂರು ಸರಕಾರದವರು ಮುನ್ನುಗ್ಗುತ್ತಾರೆಂದು ನಾನಾದರೂ ತಿಳಿದುಕೊಂಡಿದ್ದೇನೆ. ಇದನ್ನು ಕಾರ್ಯಗತ ಮಾಡುವುದರಲ್ಲಿ ಹಣಕಾಸಿನ ಸಚಿವರಾದ ಶ್ರೀಮಾನ್ ಜತ್ತಿಯವರು ಮುನ್ನುಗ್ಗುತ್ತಾರೆಂದು ಅಂದು ಕೊಂಡಿದ್ದೇನೆ.

Mr. SPEAKER.—Now the Member has forfeited his right to speak on other demands.

Sri C. J. MUCKANNAPPA.—With these observations, I conclude my speach.

BUSINESS OF THE HOUSE

Mr. SPEAKER.—I will be putting it to vote round about 2-30 P.M. tomorrow.

Before I call upon any other Member, there is one matter which has been brought to my notice, that the election to these various committees has been kept in a sort of suspended animation by representatives of all Parties coming and representing that they will give names jointly so that there may not be election at all. With the result, the forms have not been printed or cyclostyled. They had promised to give the list by 5 o 'clock. Now it is 5.30 P.M. Members should not mislead my Secretary.

Sri SIDDIAH KASIMATH.—The list is given, Sir.

Mr. SPEAKER.—Then should I take it that there is election tomorrow ?

Sri SIDDIAH KASIMATH.—There is going to be election, Sir.